TWENTIETH YEAR OF PUBLICATION.

ವಾರ್ಷಿಕ ಚಂದಾ
ಸ್ಥಳೀಯರಿಗೆ:
ಒಂದು ವರ್ಷಕ್ಕೆ
ರೂ. 6—0—0.
ಆರು ತಿಂಗಳಿಗೆ
ರೂ. 3—0—0.
ಪರಸ್ಥಳೀಯರಿಗೆ:
ಒಂದು ವರ್ಷಕ್ಕೆ
ರೂ. 6—12—0.
ಆರು ತಿಂಗಳಿಗೆ
ರೂ. 3—8—0.

ಪ್ರಭಾತ

PRABHAT WEEKLY

ANNAS 2 ಆಣೆ.

ಸಂಪುಟ: ೨೦. ಸಂಚಿಕೆ: ೧೭.) ಸಂಪಾದಕ-ಕುಡ್ವ ವಾಸುದೇವ ಶೆಣೈ. ರವಿವಾರ ತಾ. **30-5-1954** (Vol. XX. No. 17.

ಎಕ್ಸಿಬಿಷನ್ ಎಂಡ್ ಪಾರ್ಕ್ ಫೇರ್

(ಮಂಗಳೂರು ಬಿ. ಇ. ಎಮ್. ಹೈಸ್ಕೂಲಿನ ಸಹಾಯಾರ್ಥ— ಬಿ. ಇ. ಎಮ್. ಹೈಸ್ಕೂಲ್ ಬಯಲಲ್ಲಿ)

ದಿನಂಪ್ರತಿ ಸಾಯಂಕಾಲ **6-30**ರಿಂದ **12-30**ರ ವರೆಗೆ.

- ಹೊಸ ಸರ್ಕಸ್—ವಿವಿಧ ಆಟಗಳು!
- ಕುತೂಹಲಪರ, ಮನೋರಂಜಕ, ಉಲ್ಲಾಸಕರ ಬೊಂಬೆಯಾಟ.
- ನೀವು ನೋಡುತಿದ್ದಂತೆ ಮಾಯವಾಗಿ, ಅಸ್ಥಿಪಂಜರವಾಗಿ ಪರಿವರ್ತಿಸುವ ಹುಡುಗಿ!

ಈ ವೈಚಿತ್ರ್ಯ ನೋಡಲು ಮರೆಯದಿರಿ.

- ನಯನ ಮನೋಹರ ನೃತ್ಯಗಳು ಮತ್ತು ಕರ್ಣಾನಂದಕರ ಸಂಗೀತ.
- ವಿನೋದಪಟು ಎಮ್. ಆರ್. ಚಂದ್ರನ್‌ರವರ ಹಾಸ್ಯ.
- ಮನೋಹರ ಚಿತ್ರಗಳ ಮತ್ತು ಕಸೂತಿ ಕೆಲಸದ ಪ್ರದರ್ಶನ.

ಪ್ರವೇಶ ದರ ಆಣೆ 2 ಮಾತ್ರ.

SEASON DEPOSITS

of Rs. 500/- & above are now received

AT 3½% P. A.

Nagarkars Bank Limited,
Car Street, Mangalore.
BRANCHES:
Bunder, Mangalore & Bantval, S. K.

Karkera Banking Co.,

West Maidan Road, Mangalore - 1.

PIGMY DEPOSITS:—By paying four annas per day into the Bank will bring you a lump sum of Rs. 500/- at the end of 5 years.

CASH CERTIFICATES.—Our Cash Certificates bear interest of 5% per annum repayable after 3 years.

CHIT FUND:—The membership of our Chit Fund is beneficial and profitable.

Fixed, Savings and Current Deposits are received on reasonable terms.

GOLD LOANS A SPECIALITY

All kinds of Banking Business undertaken.

For Particulars Apply to:— **B. R. Karkera,** Mangalore.

ಪ್ರಭಾತ ವಿಶೇಷಾಂಕ, 1954

ಎಂದಿಗಿಂತ ಹೆಚ್ಚಿನ
ವೈಶಿಷ್ಟ್ಯದಿಂದ ಹೊರಡಲಿದೆ.

ಜಾಹೀರಾತು ದರ ಮೊದಲಾದುವುಗಳಿಗೆ ವಿಚಾರಿಸಿರಿ:-

ಮೆನೇಜರ್, ಪ್ರಭಾತ,
ರಥಬೀದಿ, - ಮಂಗಳೂರು.

The Mangalore City Bank

PENTLANDPET, MANGALORE.
ESTD: 1939

CURRENT & SAVINGS BANK account deposits accepted and withdrawal allowed by cheques.

FIXED & SHORT TERM deposits accepted at favourable rates.

Advances granted against approved securities at low rates of interest.

Usual Banking Business Undertaken.

For particulars please apply to the office:— **R. M. KINI, B.A.,** Proprietor.

ವಾರದ ಕಥೆ:

ಪ್ರೇಮ ಸಾಮ್ರಾಜ್ಯ

ಶುಕ್ರಿಯು ಸ್ವಭಾವದಿಂದ ಯಾವಾಗಲೂ ಹಸನ್ಮುಖಿಯಾಗಿದ್ದಳು. ಅವಳು ಇನ್ನೂ ಗಿಡಗಳನ್ನು ಹತ್ತುತ್ತಿದ್ದಳು; ಟೊಂಗೆಯನ್ನು ಹಿಡಿದು ಜೋಕಾಲಿಯಾಡುತ್ತಿದ್ದಳು. ಅವಳು ಅಡವಿಯ ಹೂಗಳನ್ನು ತರುತ್ತಿದ್ದಳು; ಅವುಗಳನ್ನು ತಲೆಯಲ್ಲಿ ಮುಡಿಯುತ್ತಿದ್ದಳು. ಆದರೆ ಇತ್ತೀಚೆಗೆ ಅವಳ ಈ ಹುಡುಗಾಟಿಕೆಯೆಲ್ಲ ಮಾಯವಾಗಿದೆ. ಅವಳ ಮುಖದ ಮೇಲೆ ಕಳೆಯೇ ಇರಲಿಲ್ಲ. ಅವಳು ಚಿಂತಿತಳಾಗಿದ್ದಳು.

ಬಡವರು ದುಃಖವನ್ನು ನೆನೆಸುತ್ತ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಒಂದು ರೀತಿಯಿಂದ ನೋಡಿದರೆ ಅವರು ತಮ್ಮ ಜೀವಮಾನದಲ್ಲೆಲ್ಲಾ ಎಚ್ಚರವಾಗಿಯೇ ಇರುತ್ತಾರೆ. ದುಃಖದ ಆವೇಶವನ್ನು ತೋರುವುದು ಶಿಷ್ಟಜನರ ಪದ್ಧತಿಯಾಗಿದೆ. ಬಡವರು ದುಃಖಕ್ಕೆ ಮಹತ್ವವನ್ನು ಕೊಡುತ್ತಿದ್ದರೆ ಅವರು ಬಾಳುವುದೇ ಕಷ್ಟವಾಗುತ್ತಿತ್ತು. ಒಂದು ಹೂವನ್ನು ನೋಡಿ, ಒಂದು ಪಕ್ಷಿಯನ್ನು ನೋಡಿ, ಅಥವಾ ಯಾವದೊಂದು ಸಣ್ಣ ವಸ್ತುವು ಸಿಕ್ಕಿದರೆ, ಅವರು ದುಃಖವನ್ನು ಮರೆಯುವರು; ನಗುವರು; ಆನಂದಿತರಾಗುವರು. ಆದರೆ ಶುಕ್ರಿಯು ಹೀಗೇಕೆ? ಅವಳಿಗೇನಾಗಿದೆ? ಅವಳ ಜೀವನದಲ್ಲಿ ಬಂದ ಸಂಕಟವಾವುದು?

ಆ ದಿನ ಅವಳ ಗಂಡ, ಮಂಗಳ್ಯಾನು ಆನಂದದಲ್ಲಿದ್ದನು. ಅವನು ಶುಕ್ರಿಯ ಕಡೆಗೆ ನೋಡಿದನು; ನಕ್ಕನು. ಆದರೆ ಶುಕ್ರಿಯ ಮುಖವು ಖಿನ್ನವೂ ಉದಾಸೀನವೂ ಆಗಿತ್ತು. ಅವನ ಆನಂದಕ್ಕೆ ಪ್ರತಿಯಾಗಿ ಅವಳ ಮುಖದಲ್ಲಿ ಆನಂದ ಕಾಣಲಿಲ್ಲ.

"ಎಲೆ, ಸ್ವಲ್ಪ ನಗು, ನೋಡೋಣ. ನಾನು ನಗುತ್ತಿದ್ದೇನೆ. ಆದರೆ ನಿನ್ನ ಮೋರೆಯು ಒಣಗಿದೆ ಎಕೆ? ನಿನಗೆ ಬಹಳ ದಿನಗಳಿಂದ ಹೊಡೆತ ಬಿದ್ದಿಲ್ಲವೆಂದು ಸಿಟ್ಟಿಗೆದ್ದಿರುವಿಯಾ? ಕೆನ್ನೆಗೆ ಏಟುಕೊಟ್ಟರೆ ನಗುವಿಯಾ? ಹೆಂಗಸರನ್ನು ನಗಿಸಲು ಪ್ರಯತ್ನಿಸಿದರೆ ಅವರು ನಗುತ್ತಾರೆ; ಅವರನ್ನು ಅಳಿಸಬೇಕೆಂದರೆ ನಗುತ್ತಾರೆ; ನಾನು ಹೊಡೆಯುವುದರಿಂದ ನಿನಗೆ ಆನಂದವಾಗುವುದು. ಅಲ್ಲವೆ? ಮಾತಾಡು, ಸೆಟವಿ "

ಶುಕ್ರಿಯು ಮಾತನಾಡಲಿಲ್ಲ. ಅವಳು ಗುಡಿಸಲನ್ನು ಬಿಟ್ಟು ಹೊರಗೆ ಹೋದಳು. ಅವಳು ಶೂನ್ಯಮನಸ್ಕಳಾಗಿ ಎತ್ತಲೋ ನೋಡುತ್ತಿದ್ದಳು. ಮಂಗಳ್ಯಾನು ಅವಳ ಬೆನ್ನಹಿಂದೆಯೇ ಬಂದನು. ಅವಳು ಒಂದು ಗಿಡದ ಬುಡದಲ್ಲಿ ಮೋರೆ ತಿರುವಿ ಕುಳಿತಳು. ಅವನು ಮೆಲ್ಲನೆ ಹೋಗಿ ಅವಳ ಕಣ್ಣುಗಳನ್ನು ಮುಚ್ಚಿದನು.

"ಏನಿದು? ಅಳುತ್ತಿರುವೆಯಾ? ನಿನಗೇನಾಗಿದೆ? ಏನೆ, ನೀನು ಬಸಿರಾದುದನ್ನು ನೋಡಿ ನನಗೆ ಸಂತೋಷವಾಗಿತ್ತು. ನನ್ನ ಆನಂದವು ಹೊಟ್ಟೆಯಲ್ಲಿ ಹಿಡಿಯದೆ ನಗೆಯಾಗಿ ಹೊರಗೆ ಬರುತ್ತಿತ್ತು. ನನ್ನ ಶುಕ್ರಿಗೆ ಮಗುವಾಗುವುದೆಂದು ನಾನು ಸಂತೋಷದಲ್ಲಿದ್ದೆ. ನೀನು ಹೀಗೇಕೆ ಅಳುವಿ? ನಿನಗೆ ಚಿಂತೆ ಯಾತರದು?........ಶುಕ್ರೀ, ಚಿಂತೆಮಾಡಬೇಡ. ಮಗುವಿಗಾಗಿ ಈ ಗಿಡಕ್ಕೆ ಜೋಕಾಲಿಯನ್ನು ಕಟ್ಟೋಣ. ಅವನಿಗಾಗಿ ಹಾಡನ್ನು ಹಾಡೋಣ. ಅಳಬೇಡ."

ಈ ಬಗೆಯಾಗಿ ಸಮಾಧಾನ ಮಾಡುತ್ತಾ ಅವನು ಅವಳ ಕಣ್ಣುಗಳನ್ನು ಒರಸಿದನು. ಇಬ್ಬರೂ ಅಲ್ಲಿಯೇ ಕುಳಿತುಕೊಂಡಿದ್ದರು. ಬೆಳದಿಂಗಳು ಬಿದ್ದಿತು. ದೂರದಲ್ಲಿ ನಾಯಿಗಳು ಒದರುತ್ತಿದ್ದುವು. ಶುಕ್ರಿಗೆ ಮತ್ತೆ ದುಃಖವು ಉತ್ತರಿಸಿತು.

"ಏನೆ, ನಿನಗೆ ಅಳಲಿಕ್ಕೇನಾಗಿದೆ?"

"ನಿಮಗೆ ಹೇಳತಕ್ಕ ಸಂಗತಿಯೊಂದಿದೆ."

"ಏನದು?"

"ನೀವು ಕೇಳುವಿರಾ?"

"ಕೇಳುತ್ತೇನೆ."

"ಹತ್ತು-ಹದಿನೈದು ದಿನಗಳ ವರೆಗೆ ನೀವು ಎಲ್ಲಿಗಾದರೂ ಹೋಗಿರಿ.

"ಏಕೆ?"

"ಅಂದರೆ ನಾನು ಸುಖವಾಗಿ ಹಡೆದೇನು. ನೀವು ಬರುವಷ್ಟರಲ್ಲಿ ಮನೆಯಲ್ಲಿ ಮಗುವಾಗಿರುವುದು."

"ನಾನಿಲ್ಲಿದ್ದರೆ ನಿನಗೆ ಹೆದರಿಕೆಯಾಗುವುದೆ?"

"ಹೌದು."

"ಆದರೆ, ನೀನು ಒಬ್ಬಳೇ ಇರುವಿಯಾ?"

"ಇರುವೆನು."

"ಧನಜಿಯು ಬಂದರೆ?"

"ಅವನ ಪ್ರಾಣವನ್ನು ಕೊಂಡೇನು!"

"ಆವಾಗ್ಗೆ ಯಾಕೆ ತೆಗೆದುಕೊಳ್ಳಲಿಲ್ಲ?"

"ಅವನಿಗೆ ಎಂದೆಂದಿಗೂ ನೆನಪಿರುವಂತೆ ಆ ವೇಳೆಯಲ್ಲಿ ಅವನನ್ನು ಕಡಿದಿದ್ದೇನೆ. ನೀಚ, ದುಷ್ಟ."

"ಶುಕ್ರೀ, ನಿಜವಾಗಿಯೂ ನಾನು ಹೋಗಬೇಕೆ? ನಿನಗೆ ವೇದನೆಗಳು ಆಗಬಹುದು; ಧೈರ್ಯಕೊಡುವವರಾರು?"

"ಆ ವೇದನೆಗಳಿಂದ ನನಗೆ ಸುಖವಾಗುವುದು. ಯಾಕಂದರೆ ಮಗುವು ಜನಿಸುವುದು."

"ನೀನು ಗಂಡು ಹಡೆಯುವಿಯೋ? ಅಥವಾ ಹೆಣ್ಣೋ?"

"ನಾನು ಏನು ಹೇಳಲಿ?"

"ಮಗುವಿನ ಬಣ್ಣ ಹೇಗಿರಬಹುದು? ಕಪ್ಪೋ ಅಥವಾ ಕೆಂಪೋ?"

"ನಾವಿಬ್ಬರೂ ಕಪ್ಪಾಗಿದ್ದೇವೆ."

"ಶುಕ್ರೀ, ನಾನು ಹೋಗಲೆ?"

"ಆಗಬಹುದು."

ಮಂಗಳ್ಯಾನು ನಿಜವಾಗಿಯೂ ಹೊರಟುಹೋದನು. ಆ ಅರಣ್ಯದಲ್ಲಿ ಶುಕ್ರಿಯು ಒಬ್ಬಳೇ ಇದ್ದಳು. ರಾತ್ರಿ ಕಳೆದು ಬೆಳಗಾಯಿತು. ಅವಳು ಗುಡಿಸಲಿನಲ್ಲಿದ್ದಳು. ಅವಳು ಕೆಲವು ಗಡ್ಡೆಗಳನ್ನು ಬೇಯಿಸಿ ತಿಂದಳು; ತಪ್ಪಲು ಪಲ್ಲೆಯನ್ನು ಮಾಡಿ—ಆಡು-ಕುರಿಗಳಂತೆ—ತಿಂದಳು.

ಮೂರನೇ ಪ್ರಹರದಲ್ಲಿ ಅವಳು ಬೇನೆ ತಿನ್ನಹತ್ತಿದಳು. ಅಲ್ಲಿ ಅವಳು ತಳಮಳಿಸುತ್ತಿದ್ದಳು. ಹತ್ತರ ಯಾರೂ ಇರಲಿಲ್ಲ........ಹುಡುಗ ಹುಟ್ಟುವನು!....... ಒಬ್ಬ ಅಜ್ಜಿಯಿಂದ ಅವಳು ಎಲ್ಲವನ್ನೂ ಕೇಳಿಕೊಂಡಿದ್ದಳು. ಗಳದ ಚೂರಿಯನ್ನು ತಯಾರಿಸಿ ಇಟ್ಟಿದ್ದಳು......ಅವಳು ನಡುಗುತ್ತಿದ್ದಳು. ಉಸಿರುಕಟ್ಟಿತು. ಹತ್ತರ ಯಾರೂ ಇರಲಿಲ್ಲ. ಒಂದು ಕಡೆ ಗೂಗೆ ಒದರುತ್ತಿತ್ತು. ಇನ್ನೊಂದು ಕಡೆ ನಾಯಿ 'ಭೋ ಭೋ' ಎಂದು ಕೂಗುತ್ತಿತ್ತು. ಆದರೆ ಶುಕ್ರಿಯ ಲಕ್ಷ್ಯವು ಹಡೆಯುವುದರ ಕಡೆಗಿತ್ತು....ಮಗುವು ಹುಟ್ಟಿತು! ಕೆಂಪು ಬಣ್ಣದ ಹುಡುಗ! ಶುಕ್ರಿಯು ಚೀರಿಕೊಂಡಳು. ಅವಳು ಆ ಹುಡುಗನನ್ನು ಅಲ್ಲಿಯೇ ಒಗೆದಳು. ಅದು ಅಳಹತ್ತಿತು.

* * * *

ಅಂದು ಮೂರನೆಯ ದಿನ ರಾತ್ರಿಯ ಸಮಯ, ಶುಕ್ರಿಯು ಎದ್ದಿದ್ದಳು. ಅವಳು ಕೈಯಲ್ಲಿ ಏನನ್ನೋ ಹಿಡಿದುಕೊಂಡಿದ್ದಳು, ಎಲ್ಲಿಗೋ ಹೋಗುತ್ತಿದ್ದಳು. ಅವಳು ನಡುಗುತ್ತಿದ್ದಳು. ಒಮ್ಮೆಲೇ ಅವಳ ಕೈಯಿಂದ ಏನೋ ಕೆಳಗೆ ಬಿತ್ತು. ಅದು ಏನಾಗಿದ್ದಿತು? ಅದು ಸಜೀವವಾಗಿತ್ತೆ, ಅಥವಾ ನಿರ್ಜೀವವಾಗಿತ್ತೆ? ಸಪ್ಪಳವಿರಲಿಲ್ಲ; ಅಳುವಿರಲಿಲ್ಲ........ಆ ಮಗು ಜೀವಂತವಿರಲಿಲ್ಲವೇಕೆ? ಅದರ ಕುತ್ತಿಗೆಯನ್ನು ಯಾರು ಹಿಚುಕಿದ್ದರು?........ ಶುಕ್ರಿ ಏನು ಮಾಡಿದ್ದಳು?........

ಅಷ್ಟರಲ್ಲಿ ಯಾರೋ ಬರುತ್ತಿರುವರೆಂದು ಅವಳಿಗೆ ಅನಿಸಿತು. ಅವಳು ಗಾಬರಿಯಾದಳು. ಬ್ಯಾಟರಿಯ ಬೆಳಕು ಬಿತ್ತು. ಬಂದವರು ಪೋಲಿಸರಾಗಿದ್ದರು. ಅವಳು ಬಗ್ಗಿದಳು. ಅವರು ಹತ್ತರ ಬಂದರು.

"ಯಾರವರು?" ಯಾರೋ ಒದರಿದರು.

ಶುಕ್ರಿಯು ಅಳತೊಡಗಿದಳು. ಪೋಲೀಸರು ಅವಳನ್ನು ಸುತ್ತುಗಟ್ಟಿದರು.

"ನೀನು ಯಾರು? ಅಳುವಿಯೇಕೆ?

"ನನ್ನ ಕೂಸು ಸತ್ತಿತು."

ಪೋಲೀಸರು ಅರಿವೆಯಲ್ಲಿ ಸುತ್ತಿದ್ದ ಆ ಕೂಸಿನ ಕಡೆಗೆ ನೋಡಿದರು. ಆ ಕೂಸು ಸತ್ತಿತ್ತು. ಅದು ಕೆಂಪು ಕೆಂಪಾಗಿತ್ತು. ಪೋಲೀಸರು ಆಶ್ಚರ್ಯಚಕಿತರಾದರು.

"ಈ ಕೂಸು ಯಾರದು?"

ಶುಕ್ರಿಯು ಮಾತನಾಡಲಿಲ್ಲ ಅವಳು ಅಳುತ್ತಿದ್ದಳು; ನಡುಗುತ್ತಿದ್ದಳು.

"ಏನೆ, ಯಾರ ಕೂಸಿದು?"

"ನನ್ನದು."

"ನಿನ್ನ ಕೂಸೇ? ಇಷ್ಟು ಕೆಂಪು ಬಣ್ಣದ್ದು? ನಿನ್ನ ಗಂಡನು ಕೆಂಪಗಾಗಿರುವನೆ?"

"ಈ ಕೂಸು ನನ್ನದು........ಆದರೆ, ನನ್ನದಲ್ಲ."

"ಆದ ಸಂಗತಿಯೇನು?"

"ಧನಜೀ ಶೇಟನನ್ನು ಕೇಳಿರಿ." ಅವಳು ಅಳಹತ್ತಿದಳು.

"ನೀನು ಈ ಕೂಸನ್ನು ಕೊಂದೆಯಾ? ....ಹೌದೋ, ಅಲ್ಲವೋ?"

".....ಅಂದಮೇಲೆ ಜೀವದಿಂದ ಹೇಗಿಡಲಿ? ನನ್ನ ಅಪಮಾನದ ಚಿನ್ಹವಿದು! ಜನರು ನನಗೆ ಏನೆಂದಾರು? ನನ್ನ ಜಾತಿಗೆ ಇಂಥ ಶಿಶು ಬೇಡ, ಇದು ಶ್ರೀಮಂತರ ಕೂಸು. ಬಡವರ ರಕ್ತವನ್ನು ಹೀರುವವರ ಬೀಜವಿದು. ಈ ಕೂಸು ನನಗೆ ಬೇಡ. ನಾನು ಮುಖವನ್ನು ಹೇಗ ತೋರಿಸಲಿ?" ....ಕಪ್ಪಾದ ಕೂಸು ಹುಟ್ಟಲೆಂದು ನಾನು ದೇವರಿಗೆ ಮೋರೆಯಿಡುತ್ತಲಿದ್ದೆ. ನನ್ನ ಗಂಡನ ಕೂಸು........ಆದರೆ ಧನಜಿಯ ಪಾಪವು ಫಲಿಸಿತು."

ಪೋಲೀಸರು ಅವಳನ್ನು ಹಿಡಿದರು. ಆ ಕೂಸನ್ನು ಸಂಗಡ ತೆಗೆದುಕೊಂಡರು. ಅವಳು ಜೈಲಿನಲ್ಲಿದ್ದಳು. ಧನಜೀ ಶೇಟನು ಸಾವಿರಾರು ರೂಪಾಯಿಗಳನ್ನು ಅಧಿಕಾರಿಗಳಿಗೆ ಕೊಟ್ಟನು. ಕೂಸು ಹುಗಿಯಲ್ಪಟ್ಟಿತು. ಕೂಸಿನ ಸಾಕ್ಷಿಯನ್ನು ದೂರಮಾಡಲಾಯಿತು.

ಶುಕ್ರಿಯ ಮೇಲೆ ಖಟ್ಲೆಯನ್ನು ಹಾಕಲಾಯಿತು. ಅವಳು ತನ್ನ ಕೂಸನ್ನು ಕೊಂದಳೆಂಬ ಆರೋಪವು ಅವಳ ಮೇಲೆ ಹೊರಿಸಲಾಯಿತು. ಅವಳಿಗೆ ಏಳು ವರ್ಷದ ಶಿಕ್ಷೆಯನ್ನು ವಿಧಿಸಲಾಯಿತು.

* * * *

ಮಂಗಳ್ಯಾನು ಎಲ್ಲಿದ್ದನು?

ಅವನಲ್ಲಿ ಸೇಡು ತೀರಿಸಿಕೊಳ್ಳುವ ಬುದ್ಧಿಯು ಹೊತ್ತತೊಡಗಿತ್ತು. "ಧನಜೀ ಶೇಟನನ್ನು ಚೂರುಮಾಡುವೆ, ಅಂದರೇನೇ ಮಂಗಳ್ಯಾನೆಂಬ ನನ್ನ ಹೆಸರು ಸಾರ್ಥಕ," ಎಂದು ಅವನು ಪ್ರತಿಜ್ಞೆಗೈದಿದ್ದನು.

ಒಂದು ದಿನ, ರಾತ್ರಿಯ ಸಮಯದಲ್ಲಿ ಧನಜೀ ಶೇಟನು ತನ್ನ ಬಂಗಲೆಯ ಅಂಗಳದಲ್ಲಿ ಕುಳಿತಿದ್ದನು. ಅವನ ಕೈಯಲ್ಲಿ ಹೂಗಳಿದ್ದುವು. ಮಂಗಳ್ಯಾನು ಸೆರೆಕುಡಿದು ಮತ್ತನಾಗಿದ್ದನು. ಅವನ ಕೈಯಲ್ಲಿ ಕೊಡಲಿಯಿತ್ತು. ಅವನು ಒಳಗೆ ಬಂದನು; ಧನಜೀ ಶೇಟನ ತಲೆಗೆ [illegible] ಯಿಂದ ಹೊಡೆದನು. ಒಂ[illegible] ಕರವಾದ ಚೀರಾಟವು [illegible]ಳಿಸಿತು. ಮಂಗಳ್ಯಾನು ಪುನಃ ಹೊಡೆದನು. ಧನಜೀ ಶೇಟನು ಸತ್ತುಬಿದ್ದನು. ಮನೆಯೊಳಗಿನವರೂ ಹೊರಗಿನವರೂ ಓಡುತ್ತ ಬಂದರು. ಅಲ್ಲಿಯ ದೃಶ್ಯವು ಭಯಂಕರವಾಗಿತ್ತು.

ಮಂಗಳ್ಯಾನ ಖಟ್ಲೆಯನ್ನು ವಿಚಾರ ಮಾಡಿ ಅವನಿಗೆ ಗಲ್ಲಿನ ಶಿಕ್ಷೆಯನ್ನು ಕೊಡಲಾಯಿತು.

* * * *

ಜೈಲಿನಲ್ಲಿಯ ಫಾಸೀ ಶಿಕ್ಷೆಯ ಕೋಣೆಯಲ್ಲಿ ಮಂಗಳ್ಯಾನು ಇದ್ದನು. ಶುಕ್ರಿಯು ಭೇಟಿಯಾದರೆ ಒಳಿತಾದೀತೆಂದು ಅವನ ಮನಸ್ಸಿಗೆ ತೋರಿತು. ಒಂದು ದಿನ ಅವನು ಜೈಲಿನ ಅಧಿಕಾರಿಗಳೊಡನೆ ಪ್ರಾರ್ಥಿಸಿದನು.

ಶುಕ್ರಿಯು ಅದೇ ಜೈಲಿನಲ್ಲಿಯ ಹೆಂಗಸರ ಕೋಣೆಯಲ್ಲಿದ್ದಳು. ಅವಳು ಎಲ್ಲ ಸಂಗತಿಗಳನ್ನು ಕೇಳಿದ್ದಳು. ಅವಳು ಬಹುಶಃ ಊಟಮಾಡುತ್ತಿರಲಿಲ್ಲ. ಅವಳ ಜೀವನದಲ್ಲಿಯ ಆನಂದವೆಲ್ಲವೂ ಹೊರಟುಹೋಗಿತ್ತು.

ಫಾಸೀ ಕೋಣೆಯಲ್ಲಿ ಮಂಗಳ್ಯಾನು ಕುಳಿತಿದ್ದನು. ಶುಕ್ರಿಯು ಹೊರಗೆ ನಿಂತಿದ್ದಳು. ಎದುರಿಗೆ ಪೋಲೀಸರು ಎಚ್ಚರದಿಂದಿದ್ದರು.

"ಶುಕ್ರೀ, ಅಳಬೇಡ. ಯಾವ ಪಾಪಿಯು ತನ್ನ ಪಾಪದ ಕುರುಹು ದೂರ ಮಾಡಿ, ನಿನ್ನ ಹೆಸರನ್ನು ಕೆಡಿಸಿ, ನಿನಗೆ ಶಿಕ್ಷೆಯನ್ನು ಕೊಡಿಸಿದನೋ, ಅವನನ್ನು

(ಪುಟ 9ಕ್ಕೆ ಮುಂದುವರಿದಿದೆ)

ಪ್ರಭಾತ

ರವಿವಾರ ತಾ. 30—5—1954

> **ನ ನೃತ್ಯೇದಥವಾ ಗಾಯೇನ್ನ ವಾದಿತ್ರಾಣಿ ವಾದಯೇತ್ ।**
> **ನಾ ಸ್ಫೋಟಯೇನ್ನ ಚ ಕ್ಷ್ವೇಡೇನ್ನ ಚ ರಕ್ತೋ ವಿರಾವಯೇತ್ ॥**
>
> **ತಾತ್ಪರ್ಯ:** ಶಾಸ್ತ್ರವಿರುದ್ಧವಾಗಿ ಕುಣಿಯುವುದು, ಹಾಡುವುದು, ವಾದ್ಯ ಬಾರಿಸುವುದು, ಇವುಗಳನ್ನು ಮಾಡಕೂಡದು. ತೋಳನ್ನು ಅಂಗೈಯಿಂದ ತಟ್ಟಿ ಶಬ್ದ ಮಾಡಕೂಡದು. ಹಲ್ಲುಗಳನ್ನು ಕಡಿಯಬಾರದು. ವಿನೋದಕ್ಕಾಗಿ ಕತ್ತೆ ಮೊದಲಾದುವುಗಳಂತೆ ಕೂಗಬಾರದು. ಮನು. ಅ. ೪, ಶ್ಲೋ ೬೪.

ಅಸಾಧ್ಯ ವ್ಯಾಧಿಯ ಉಚ್ಚಾಟನೆಯಾಗಲಿ

ಮಂಗಳೂರು ನಗರದಲ್ಲಿ ಆನೆಕಾಲು ರೋಗದ ಉಚ್ಚಾಟನೆಗಾಗಿ ಪೂರ್ವಪೀಠಿಕಾರೂಪವಾಗಿ ರೋಗದ ಕುರಿತು ಪರಿಶೀಲನೆಯು ಕಳೆದ ಮೂರು ತಿಂಗಳುಗಳಿಂದ ನಡೆಯುತ್ತಿದ್ದು, ಈ ರೋಗದ ವಿಷಯವಾದ ಶೋಧವನ್ನು ನಡೆಸುತ್ತಿರುವ ಭಾರತದ ಮಲೇರಿಯಾ ಸಂಸ್ಥೆಯ ಸಹಾಯಕ ಡೈರೆಕ್ಟರ್ ಡಾ| ಎ. ಕೆ. ಕೃಷ್ಣಸ್ವಾಮಿಯವರು ತಾವು ಸಂಗ್ರಹಿಸಿದ ಮಾಹಿತಿಯನ್ನು ಇತ್ತೀಚೆಗೆ ನಗರಸಭೆಯ ಮುಂದೆ ವಿವರಿಸಿದರು.

"ಮಂಗಳೂರಿನಲ್ಲಿ ಪ್ರತಿ ನಾಲ್ಕು ಮಂದಿಯಲ್ಲಿ ಒಬ್ಬರಿಗೆ ಈ ರೋಗದ ಸೋಂಕು ತಗಲಿದೆ ಅಥವಾ ರೋಗ ತಗಲುವ ಕುರುಹುಗಳಿವೆ" ಎಂದು ಮಂಗಳೂರು ರೋಟರಿ ಕ್ಲಬ್ಬಿನ ಸಭೆಯಲ್ಲಿ ಡಾ| ಕೃಷ್ಣಸ್ವಾಮಿಯವರು ವ್ಯಕ್ತಪಡಿಸಿದುದನ್ನು ಕೇಳುವಾಗ, ಈ ಭಯಂಕರ ರೋಗ ತನ್ನ ಪ್ರಭಾವವನ್ನು ಎಷ್ಟು ಭೀಕರವಾಗಿ ಬೀರಿದೆ ಎಂಬುದರ ಅರಿ[illegible]ಗುವುದು. ನಗರದಲ್ಲಿ ಅತ್ತಿತ್ತ ಸಂಚ[illegible]ನ್ನು ಪ್ರತ್ಯಕ್ಷ ಕಾಣುವಾಗ ರೋಗದ ಭಯಾನಕ ಪರಿಣಾಮಗಳು ಎಷ್ಟರ ಮಟ್ಟಿಗೆ ಬೇರೂರಿವೆ ಎಂಬುದು ಸ್ಪಷ್ಟವಾಗುವುದು. ಎಳೇ ಪ್ರಾಯದ ಮಕ್ಕಳು ಕೂಡಾ ಈ ಅಸಾಧ್ಯ ವ್ಯಾಧಿಗೆ ತುತ್ತಾಗಿ ನರಳುವುದು ಕರುಳು ಕತ್ತರಿಸುತ್ತದೆ. ರೋಗವನ್ನು ಅತ್ಯಂತ ಪರಿಣಾಮಕಾರಿಯಾಗಿ ಗುಣಪಡಿಸುವ ಉಪಾಯಗಳು ಈ ವರೆಗೆ ಕಂಡುಹಿಡಿಯಲ್ಪಡದ ಕಾರಣ, ಅದನ್ನು ಬಾರದಂತೆ ತಡೆಯುವುದೇ ರೋಗದ ಉಚ್ಚಾಟನೆಯ ಕಡೆಗೆ ಯಶಸ್ವಿಯಾಗಿ ಕೈಕೊಳ್ಳಬಹುದಾದ ಹಜ್ಜೆಯಾಗಿದೆ.

ಮುಖ್ಯವಾಗಿ ಉತ್ತಮ ನೀರಿಲ್ಲದಿರುವ ಕಾರಣದಿಂದ ಮತ್ತು ಕ್ರಿಮಿಗಳಿಂದ ಹೀಗೆ ಎರಡು ರೀತಿಯಲ್ಲಿ ಈ ರೋಗವು ಹರಡುತ್ತಿದೆ ಎಂಬುದು ಸಿದ್ಧವಾಗಿದೆ. ಮಂಗಳೂರಲ್ಲಿ ದೋಷಯುಕ್ತವಾದ ನೀರಿನಿಂದಲೇ ಹೆಚ್ಚಾಗಿ ರೋಗ ಹರಡಿರುವುದು ಕಂಡುಬಂದಿದೆ. ಶುದ್ಧನೀರಿನ ಪುರವಟಿಯಿಂದ ಇದರ ಹಾವಳಿಯನ್ನು ಆದಷ್ಟು ಕಡಿಮೆಮಾಡುವುದು ಸಾಧ್ಯವಿರುವ ಕಾರಣ ನಳ್ಳಿನೀರಿನ ವ್ಯವಸ್ಥೆ ಎಷ್ಟು ಬೇಗ ಜ್ಯಾರಿಗೆ ಬರುವುದೋ ಅಷ್ಟು ಒಳ್ಳೆಯದು.

ಕ್ರಿಮಿಗಳಲ್ಲಿ ಸೊಳ್ಳೆ, ನೊಣ ಮತ್ತು ಜಿರಳೆ ಈ ಮೂರು ಆನೆಕಾಲು ರೋಗ ಹರಡುವುದಕ್ಕೆ ಕಾರಣವೆಂದು ಡಾ| ಕೃಷ್ಣಸ್ವಾಮಿಯವರು ತಿಳಿಸಿದರು. ಆದುದರಿಂದ ಈ ಮೂರರ ಕಾಟದಿಂದ ದೂರವಿರಲು ಪ್ರಯತ್ನಪಟ್ಟರೆ ರೋಗ ನಿವಾರಣೆಯ ಕಡೆಗೆ ತುಂಬಾ ಸಹಕಾರ ನೀಡಿದಂತಾಗಬಹುದು. ಸೊಳ್ಳೆಗಳನ್ನು ನಾಶಪಡಿಸುವ ದ್ರಾವಕ ಚಿಮುಕಿಸುವ ಏರ್ಪಾಡು ನಗರಸಭೆಯ ಕಡೆಯಿಂದ ಈಗ್ಗೆ ಕೆಲವು ವರ್ಷಗಳಿಂದ ನಡೆಯುತ್ತಿದೆಯಾದರೂ ಆದರಿಂದ ಉಲ್ಲೇಖನೀಯ ಪರಿಣಾಮವೇನೂ ಆದುದು ಕಂಡುಬಂದಿಲ್ಲ. ನಗರದ ಕೇಂದ್ರ ಭಾಗದಲ್ಲಿರುವ ಕೊಳೆನೀರಿನ ಚರಂಡಿಗಳು, ಅಶುಚಿಯಾಗಿರುವ ಪಾಯಿಖಾನೆಗಳು, ಗಾಳಿ ಸಂಚಾರವಿಲ್ಲದ ಕೊಠಡಿಗಳು ಇವು ಸೊಳ್ಳೆ, ನೊಣಗಳ ಬೆಳವಣಿಗೆಗೆ ಕಾರಣವಾಗಿವೆ. ಆದುದರಿಂದ ಅವುಗಳನ್ನು ನಿರ್ಮಲವಾಗಿರಿಸುವ ಕಡೆಗೆ ಒಂದಿಷ್ಟು ಲಕ್ಷ್ಯಕೊಟ್ಟರೆ ಸೊಳ್ಳೆಗಳ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ತಡೆಯಬಹುದಾಗಿದೆ. ನಗರ ನೈರ್ಮಲ್ಯ ರಕ್ಷಣೆಯ ಕಡೆಗೆ ನಾಗರಿಕರೂ ಸಹಕಾರ ನೀಡುವುದು ಅತ್ಯವಶ್ಯ. ನಮ್ಮ ನಮ್ಮ ಮನೆ ತೋಟಗಳನ್ನು ಸ್ವಚ್ಛವಾಗಿರಿಸುವ ಕಡೆಗೆ ನಾವು ಗಮನಕೊಟ್ಟೆವೆಂದರೆ ಈ ಕಾರ್ಯ ಅತಿ ಸುಲಭ.

ಕೊಳೆ ಕಶ್ಮಲಗಳನ್ನು ಸಿಕ್ಕಾಬಟ್ಟೆಯಾಗಿ ರಸ್ತೆಯಲ್ಲಿ ಚೆಲ್ಲುವುದು, ಅನಪೇಕ್ಷಿತ ಸ್ಥಳಗಳಲ್ಲಿ ಮಲಮೂತ್ರ ವಿಸರ್ಜನೆಮಾಡುವುದು, ಮನೆಯೊಳಗೆ ಹಾಗು ಹೊರಗೆ ಕೊಳೆ ನಿಲ್ಲಲು ಆಸ್ಪದ ಕೊಡುವುದು ಇವೆಲ್ಲಾ ನಾಗರಿಕ ಸುಧಾರಣೆಯ ಲಕ್ಷಣಗಳಲ್ಲ, ಇಂತಹ ಲಕ್ಷಣಗಳನ್ನು ಇನ್ನಾದರೂ ಬಿಟ್ಟು ನೈರ್ಮಲ್ಯ ಸೂತ್ರಗಳನ್ನು ಪಾಲಿಸುವುದರ ಕಡೆಗೆ ಗಮನಕೊಟ್ಟರೆ, ನಗರವನ್ನು ಮಾರಣ ಕೂಪದ ಕೊಡೆಗೊಯ್ಯುವ ಭಯಂಕರ ಜಾಡ್ಯದಿಂದ ನಾವು ಸುರಕ್ಷಿತೆಯನ್ನು ಹೊಂದಬಹುದಾಗಿದೆ.

ನಗರಸಭೆ, ಸರಕಾರ ಮತ್ತು ಪ್ರಜೆಗಳು ಪರಸ್ಪರ ಸಹಕರಿಸಿ ಈ ಭಯಂಕರ ರೋಗವನ್ನು ತಡೆಗಟ್ಟಬೇಕು. ಮಲೇರಿಯವನ್ನು ನಿರೋಧಿಸಲು ಮುಂದೆ ಬಂದಂತೆ ಕೇಂದ್ರ ಸರಕಾರವೇ ತಕ್ಕ ಯೋಜನೆಯ ಮೂಲಕ ರೋಗದ ಉಚ್ಚಾಟನೆಗೆ ಮನಸ್ಸು ಮಾಡಿದರೆ ಇನ್ನಷ್ಟು ಒಳ್ಳೆಯದು. ——

ವಿದೇಶಗಳಿಂದ ಸಕ್ಕರೆ

ಇಂಡಿಯಾ ಸರ್ಕಾರವು ವಿದೇಶಗಳಿಂದ ಸುಮಾರು ೬,೦೦,೦೦೦ ಟನ್ನುಗಳಷ್ಟು ಸಕ್ಕರೆಯನ್ನು ಕೊಂಡುಕೊಂಡಿದೆ. ಇವುಗಳಲ್ಲಿ ೭೦,೦೦೦ ಟನ್ನುಗಳಷ್ಟು ಸಕ್ಕರೆಯು ಈ ತಿಂಗಳ ಒಳಗೆ ಭಾರತದ ಬಂದರುಗಳಿಗೆ ತಲುಪುವುದು. ಉಳಿದ ಭಾಗವು ಮುಂದಿನ ೫ ತಿಂಗಳ ಒಳಗೆ ಬರುವುದು. ಮುಂದಿನ ತಿಂಗಳುಗಳಲ್ಲಿ ವ್ಯಾಪಾರಿಗಳು ಕೊಂಡುಕೊಳ್ಳುವ ಪ್ರಮಾಣದ ಆಧಾರದ ಮೇಲೆ ಹೊರ ದೇಶಗಳಿಂದ ಇನ್ನೂ ಹೆಚ್ಚಿಗೆ ಸಕ್ಕರೆಯನ್ನು ಕೊಂಡುಕೊಳ್ಳುವ ವಿಷಯವನ್ನು ಪರ್ಯಾಲೋಚಿಸಲಾಗುವುದು. ——

ಹಜೂರು ಟ್ರೆಜರಿ ಮೊಕದ್ದಮೆ

ಸಾಕ್ಷಿಗಳ ಹೇಳಿಕೆ

ಹಜೂರು ಟ್ರೆಜರಿ ಮೊಕದ್ದಮೆ ವಿಚಾರಣೆಯಲ್ಲಿ ತಾ. ೨೦ರಂದು ಕೆನರಾ ಬೇಂಕಿಂಗ್ ಕೊರ್ಪೊರೇಶನಿನ ಎಕೌಂಟೆಂಟ್ ಶ್ರೀ| ಪಿ. ಡಿ. ಮಲ್ಯ (ಪ್ರೊಸಿಕ್ಯೂಶನ್ ಸಾಕ್ಷಿ)ರು ಸಾಕ್ಷಿ ಹೇಳಿದರು.

ತನಗೆ ೨ನೇ ಆಪಾದಿತ ಶ್ರೀಮತಿ ಹನ್ನಾ ಶಾವಂತಿ ರೋಬರ್ಟ್ಸ್ ಮತ್ತು ೪ನೇ ಆಪಾದಿತ ಶ್ರೀ| ಜಿ. ಎಚ್. ಮುತ್ತುರವರ ಪರಿಚಯವಿದೆಯೆಂದೂ, ೨ನೇ ಆಪಾದಿತರು ತಾ. ೧-೧೨-೪೯ರಂದು ತನ್ನ ಹೆಸರಲ್ಲಿ ಒಂದು ಸೇವಿಂಗ್ಸ್ ಬೇಂಕ್ ಖಾತೆ ತೆರೆಯಬೇಕೆಂದು ಏಜಂಟರಿಗೆ ಒಂದು ಪತ್ರ ಬರೆದಿದ್ದರೆಂದೂ ಅವರ ಪರಿಚಯವನ್ನು ಮಾಡಿ ಕೊಟ್ಟವರು ೪ನೇ ಆಪಾದಿತ ಶ್ರೀ| ಜಿ. ಎಚ್. ಮುತ್ತುರವರೆಂದೂ ಅವರು ಹೇಳುತ್ತ ಶ್ರೀಮತಿ ಶಾವಂತಿ ರೋಬರ್ಟ್ಸ್‌ರ ಪಾಸ್ ಪುಸ್ತಕ ಮತ್ತು ಸೇವಿಂಗ್ಸ್ ಬೇಂಕ್ ಹಣ ಪಡೆಯುವ ಚೀಟಿಗಳನ್ನು ಗುರುತಿಸಿದರು. ಈ ಬೇಂಕಿನಲ್ಲಿ ಶ್ರೀಮತಿ ಶಾವಂತಿ ರೋಬರ್ಟ್ಸ್‌ರಿಗೆ ಒಂದು ನಿರಖು ಠೇವಣಾತಿ ಖಾತೆಯೂ ಇದೆಯೆಂದೂ ಅದರಲ್ಲಿ ಅವರು ಮೊದಲು ರೂ. ೫೦೦ ಠೇವಣಿ ಇಟ್ಟದ್ದು, ಆ ಮೇಲೆ ತಾ. ೭-೧೦-೪೯ರಲ್ಲಿ ರೂ. ೬೦೦, ತಾ. ೧೪-೫-೫೧ರಲ್ಲಿ ರೂ. ೪೦೦೦, ತಾ. ೨೪-೫-೫೨ರಲ್ಲಿ ರೂ. ೪,೦೦೦ ಮತ್ತು ತಾ. ೪-೭-೫೨ರಲ್ಲಿ ರೂ. ೫,೦೦೦ ಠೇವಣಿ ಇಟ್ಟಿದ್ದರೆಂದು ತಿಳಿಸಿದರು.

೪ನೇ ಆಪಾದಿತರ ಪರಿಚಯವೂ ತನಗಿದೆಯೆಂದೂ ಅವರಿಗೂ ಈ ಬೇಂಕಿನಲ್ಲಿ ೩೨೧ನೇ ನಂಬ್ರದ ಸೇವಿಂಗ್ಸ್ ಬೇಂಕ್ ಲೆಕ್ಕವಿದೆಯೆಂದು ಸಾಕ್ಷಿದಾರರು ಹೇಳಿ ೪ನೇ ಆಪಾದಿತರಿಗೆ ಬೇಂಕು ಕೊಟ್ಟ ಚೆಕ್ ಪುಸ್ತಕವನ್ನು ಗುರುತಿಸಿದರು. ೫ನೇ ಆಪಾದಿತರ ದಸ್ಕತಿನ ಪರಿಚಯ ತನಗಿದೆಯೆಂದು ಅವರು ಹೇಳಿ, ೫ನೇ ಆಪಾದಿತರು ೨ನೇ ಆಪಾದಿತರಿಗೆ ತಾ. ೧-೯-೫೨ರಂದು ರೂ. ೧೦,೦೦೦ಕ್ಕೆ ಮತ್ತು ತಾ. ೧-೪-೫೩ರಂದು ರೂ. ೨,೦೦೦ಕ್ಕೆ ಬರಕೊಟ್ಟ ಡಿಮಾಂಡ್ ಪ್ರೊಮಿಸ್ಸರಿ ನೋಟುಗಳ ಮೇಲೆ ಹಾಕಿದ ದಸ್ಕತನ್ನು ಗುರುತಿಸಿದರು.

ತಾ. ೨೧ರಂದು ಶ್ರೀ| ಜೆ. ಸಿ. ಪಾಲಣ್ಣ, ಶಾರದಾ ಜ್ಯುವೆಲರಿಯ ಮ್ಯಾನೇಜರ್(?) ಮಾಲಕ ಶ್ರೀ| ರಮೇಶ ಆಚಾರ್, ಡಾಂಗೆ ಎಂಡ್ ಸನ್ಸ್ ಇಲ್ಲಿಯ ಗುಮಾಸ್ತರಾದ ಶ್ರೀ| ಎಚ್. ರಾಮ ರಾವ್ ಮತ್ತು ಆ ಸಂಸ್ಥೆಯ ಮ್ಯಾಲಕ ಶ್ರೀ| ಎಮ್. ನಾರಾಯಣ ಡಾಂಗೆ, ಶ್ರೀ| ಭೋಜ ರಾವ್ ಬೋಳಾರ್, ಇಂಡಿಯನ್ ಬೇಂಕ್ ಲಿಮಿಟೆಡ್, ಇದರ ಕ್ಲಾರ್ಕರಾದ ಶ್ರೀ| ಜಿ. ರಾಮಕೃಷ್ಣ ರಾವ್ (ಕ್ರಮವಾಗಿ ಪ್ರೊಸಿಕ್ಯೂಶನ್ ಸಾಕ್ಷಿ ೧೦, ೧೧, ೧೩, ೧೪, ೧೫, ೧೬) ಇಷ್ಟು ಮಂದಿಗಳ ಸಾಕ್ಷಿ ಹೇಳಿಕೆಯಾಯಿತು.

ಶ್ರೀ| ಜೆ. ಸಿ. ಪಾಲಣ್ಣನವರು ತಮ್ಮ ಸಾಕ್ಷಿ ಹೇಳಿಕೆಯಲ್ಲಿ ತನಗೂ ೨ನೇ ಆಪಾದಿತರಿಗೂ ಒಂದು ಮನೆ ಮಾರಾಟದ ಸಂಬಂಧ ನಡೆದ ವ್ಯವಹಾರ, ಆಕೆಯಿಂದ ತಾನು ರೂ. ೨,೫೦೦ರ ವರೆಗೆ ಸಾಲ ಪಡೆದುದು, ಅದನ್ನು ಪರತು ಕೊಡಲಾಗದೆ ತಾ. ೩-೫-೫೨ರಂದು ರೂ. ೨,೫೦೦ಕ್ಕೆ ೨ನೇ ಆಪಾದಿತರಿಗೆ ಒಂದು ಡಿಮಾಂಡ್ ಪ್ರೊಮಿಸರಿ ನೋಟು ಬರಕೊಟ್ಟ ವಿವರಗಳನ್ನೆಲ್ಲಾ ತಿಳಿಸಿದರು. (ಈ ಸಾಕ್ಷಿದಾರರು ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನ ಬೆಂಚ್ ಕ್ಲಾರ್ಕರಾಗಿದ್ದರು.)

ಶ್ರೀ| ರಮೇಶ ಆಚಾರ್‌ರವರು, ೨ನೇ ಆಪಾದಿತರು ತನ್ನಿಂದ ಒಟ್ಟು ೪೫||| ಪವನು ಮತ್ತು ೯ ದಾಮ್‌ಗಳ ತೂಕದ ಆಭರಣವನ್ನು ಮಾಡಿಸಿದ್ದರೆಂದೂ, ಇದನ್ನು ತಯಾರಿಸುವ ಸಲುವಾಗಿ ಮಜೂರಿ, ಕಲ್ಲುಗಳ ಕ್ರಯ, ಮುತ್ತುಗಳ ಕ್ರಯ ಮತ್ತು ಮಾರಾಟ ಕರವೆಂದು ಒಟ್ಟು ರೂ. ೧೨೬೦-೭-೪ ಆಕೆ ಪಾವತಿ ಮಾಡಿರುವರೆಂದೂ ಸಾಕ್ಷಿ ಹೇಳಿದರು.

ಶ್ರೀ| ಎಚ್. ರಾಮ ರಾವ್‌ರವರು ಸಾಕ್ಷಿಹೇಳುತ್ತ, ಶ್ರೀಮತಿ ರೋಬರ್ಟ್ಸ್‌ರು ತಾ. ೨೩-೬-೫೦ರಿಂದ ತಾ. ೨೦-೩-೫೩ರ ತನಕ ತಮ್ಮ ಅಂಗಡಿಗೆ (ಡಾಂಗೆ ಎಂಡ್ ಸನ್ಸ್) ೧೪ ಸಲ ಬಂದಿದ್ದು, ಒಟ್ಟು ೪೦|| ಪವನು ಮತ್ತು ೧೨||| ದಾಮ್ ತೂಕದ ಚಿನ್ನಕೊಟ್ಟದ್ದು ಅವುಗಳ ಆಭರಣ ತಯಾರಿಸುವ ಮಜೂರಿಯಾಗಿ ಒಟ್ಟು ರೂ. ೩೦೦-೭-೬ ಕೊಟ್ಟಿರುವರಾಗಿ ಹೇಳಿದರು. ಶ್ರೀ| ನಾರಾಯಣ ಡಾಂಗೆಯವರು ೨ನೇ ಆಪಾದಿತರಿಗೆ ಕೊಡಲಾದ ರಶೀದಿಗಳ ದ್ವಿಪ್ರತಿಗಳನ್ನು ಗುರುತಿಸಿದರು.

ಶ್ರೀ| ಭೋಜ ರಾವ್ ಬೋಳಾರ್ ಅವರು ತಮ್ಮ ಸಾಕ್ಷಿಯಲ್ಲಿ ತಾನು ೧ನೇ ಆಪಾದಿತರಿಗೆ ತಿಂಗಳೊಂದರ ರೂ. ೬೫ ಬಾಡಿಗೆಯ ಮೇಲೆ ಕೊಟ್ಟ ಮನೆಯನ್ನು ೧೯೫೧ನೇ ಜನವರಿಯಲ್ಲಿ ೨ನೇ ಆಪಾದಿತರಿಗೆ ರೂ. ೧೨,೦೦೦ಕ್ಕೆ ಮಾರಿದುದನ್ನೂ, ೧ನೇ ಆಪಾದಿತರು ಈ ಮಾರಾಟ ಕರಾರಿಗೆ ಸಹಿಹಾಕಿರುವರೆಂದೂ, ೪ನೇ ಆಪಾದಿತರು ಈ ದಸ್ತವೇಜು ಮಾಡುವ ಕಾಲಕ್ಕೆ ರಿಜಿಸ್ಟ್ರಿ ಆಫೀಸಿನಲ್ಲಿ ಹಾಜರಿದ್ದರೆಂದೂ ಹೇಳಿದರು.

ಇಂಡಿಯನ್ ಬೇಂಕಿನ ಕ್ಲಾರ್ಕ್ ಶ್ರೀ| ರಾಮಕೃಷ್ಣ ರಾಯರು, ೧ನೇ ಮತ್ತು ೨ನೇ ಆಪಾದಿತರ ಪರಿಚಯ ತನಗಿದೆಯೆಂದೂ ೨ನೇ ಆಪಾದಿತರಿಗೆ ಇಂಡಿಯನ್ ಬೇಂಕಿನಲ್ಲಿ ಸೇವಿಂಗ್ಸ್ ಬೇಂಕ್ ಖಾತೆಯಿದ್ದು ೧೯೫೩ ಏಪ್ರಿಲ್‌ದಲ್ಲಿ ಈ ಖಾತೆಯಲ್ಲಿ ರೂ. ೧೦೪೩-೮-೫ ಶಿಲ್ಕು ಇತ್ತೆಂದು ಸಾಕ್ಷಿ ಹೇಳಿದರು. ತಾ. ೨೮-೮-೫೨ರಂದು ಆಕೆ ರೂ. ೭೦೦೦ ನಿರಖು ಠೇವಣಾತಿಯಲ್ಲಿರಿಸಿ, ತಾರೀಕು ೪-೩-೫೩ರಂದು ಮತ್ತೊಮ್ಮೆ ರೂ. ೫,೦೦೦ ನಿರಖು ಠೇವಣಾತಿಯಲ್ಲಿರಿಸಿದ್ದರೆಂದೂ ಅವರು ಹೇಳಿದರು. ——

ಮಂಗಳೂರು ನಗರಸಭೆ

ಮಂಗಳೂರು ನಗರಸಭೆಯ ಸಾಮಾನ್ಯ ಸಭೆಯು ಕಳೆದ ದಿನಾಂಕ ೨೪ ರಂದು ಸಾಯಂಕಾಲ ಸಭಾಪತಿ ಶ್ರೀ| ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು.

ಇತ್ತೀಚೆಗೆ ಪುನರ್ವಿಮರ್ಶಿಸಿದ ತೆರಿಗೆಯ ವಿಚಾರವನ್ನು ಪರಿಶೀಲಿಸಲು ನೇಮಿಸಲ್ಪಟ್ಟ ತಾತ್ಕಾಲಿಕ ಉಪಸಮಿತಿಯ ವರದಿಯನ್ನು ಸಭಾಪತಿಗಳು ವಿವರಿಸಿದ ಬಳಿಕ, ಆ ಸಮಿತಿಯ ಶಿಫಾರಸುಗಳನ್ನು ಸ್ವೀಕರಿಸಿ ಸರಕಾರಕ್ಕೆ ಬರಕೊಳ್ಳಲು ನಿರ್ಣಯಿಸಲಾಯಿತು. ಉಪಸಮಿತಿಯ ವರದಿಯಲ್ಲಿ ಸ್ವಂತ ವಾಸ್ತವ್ಯದ ಕಟ್ಟಡಗಳ ಬಗ್ಗೆ ಪುನರ್ವಿಮರ್ಶಿಸಿ ಹೆಚ್ಚಿಸಿದ ತೆರಿಗೆಯನ್ನು ರದ್ದುಗೊಳಿಸಬೇಕು, ೧೯೫೩-೫೪ರ ತೆರಿಗೆ ರಿಜಿಸ್ತ್ರಿಯಲ್ಲಿ ಸೂಚಿಸಲಾದ ಮೌಲ್ಯದ ಮೇಲೆಯೇ ತೆರಿಗೆ ಹೊರಿಸಬೇಕು, ಪುನರ್ವಿಮರ್ಶಿಸಲ್ಪಟ್ಟ ತೆರಿಗೆಯನ್ನು ತಾ. ೧-೪-೫೫ರಿಂದ ಅಥವಾ ಕನಿಷ್ಟಪಕ್ಷಕ್ಕೆ ತಾ. ೧-೧೦-೫೪ರಿಂದ ಜ್ಯಾರಿ ಮಾಡಬೇಕು, ಹೊಸ ತೆರಿಗೆಯ ನೋಟೀಸುಗಳ ವಿರುದ್ಧ ನಾಗರಿಕರಿಂದ ಬಂದ ಅಪ್ಪೀಲು ಅರ್ಜಿಯನ್ನು ಸರಿಯಾಗಿ ಪರಿಶೀಲಿಸುವ ಬಗ್ಗೆ ಫರ್ಸ್ಟ್ ಗ್ರೇಡ್ ಕಮಿಶನರರ ಗ್ರೇಡಿನ ಸ್ಪೆಶಲ್ ಆಫೀಸರರನ್ನು ನೇಮಿಸಬೇಕು ಇತ್ಯಾದಿ ಸೂಚನೆಗಳಿವೆ. ಇದೇ ಸಂದರ್ಭದಲ್ಲಿ ತೆರಿಗೆದಾರರ ಹಾಲೆಹವಾಲೆಗಳನ್ನು ಪುರಜನರ ಸಂಘದ ಕಾರ್ಯದರ್ಶಿ ಶ್ರೀ| ಎ. ಕೆ. ಸೇವಕರು ನಿವೇದಿಸಿದರು.

ಮಂಗಳೂರು ಭಗಿನಿ ಸಮಾಜಕ್ಕೆ ರೂ. ೧,೨೦೦ ಸಹಾಯಧನ ಬಹುಮತದಿಂದ ಮಂಜೂರು ಮಾಡಲಾಯಿತು. ಮಂಗಳೂರು ವೆಬ್‌ಸ್ಟರ್ ಮಾರ್ಕೆಟಿನೊಳಗಿರುವ ರಸ್ತೆಗೆ ಡಾಮರು ಹಾಕುವ ಬಗ್ಗೆ ರೂ. ೩,೦೦೦ದ ಅಂದಾಜು ಪಟ್ಟಿ ಮಂಜೂರಾಯಿತು. ಹಲವು ರಸ್ತೆಗಳ ದುರುಸ್ತಿ ಬಗ್ಗೆ ಹಣ ಮಂಜೂರು ಮಾಡಲ್ಪಟ್ಟಿತು. ಸರಕಾರಿ ಹುಕುಂಗಳನ್ನು ರಿಕಾರ್ಡು ಮಾಡಿ, ಹಣದ ಬಿಲ್ಲುಗಳನ್ನು ಮಂಜೂರು ಮಾಡಲಾಯಿತು. ಉರ್ವ ೨ನೇ ಕ್ರೊಸ್ ರೋಡಿಗೆ ೨ ಇಲೆಕ್ಟ್ರಿಕ್ ಲೈಟು, ಜಪ್ಪಿನಲ್ಲಿನ ಆರು ಓಣಿಗಳಿಗೆ ಒಂದೊಂದು ಚಿಮ್ಣಿ ದೀಪಗಳನ್ನು ಮಂಜೂರುಮಾಡಲಾಯಿತು.

ಕೊರತೆಯ ಪ್ರದೇಶಗಳಿಗೆ ಆಹಾರಧಾನ್ಯಗಳ ಸರಬರಾಜು

ಇಂಡಿಯಾ ಸರ್ಕಾರದ ಆಹಾರ ಮತ್ತು ವ್ಯವಸಾಯ ಸಚಿವ ಶಾಖೆಯು ೧೯೫೪ನೇ ಮೇ ೧೫ಕ್ಕೆ ಅಂತ್ಯವಾಗುವ ವಾರದಲ್ಲಿ ಆಹಾರದ ಕೊರತೆಯಿದ್ದ ಪ್ರದೇಶಗಳಿಗೆ ೩೫,೬೫೦ ಟನ್ನುಗಳಷ್ಟು ಆಹಾರಧಾನ್ಯವನ್ನು ಕಳುಹಿಸಿದೆ.

ಮುಖ್ಯವಾದ ಪ್ರದೇಶಗಳವು: ಮದರಾಸು—೯,೪೦೦ ಟನ್ನುಗಳು, ಬೊಂಬಾಯಿ—೭,೩೫೦ ಟನ್ನುಗಳು, ಪಶ್ಚಿಮ ಬಂಗಾಳಕ್ಕೆ ೬,೫೫೦ ಟನ್ನುಗಳು, ತಿರುವಾಂಕೂರು ಕೊಚ್ಚಿನ್‌ಗೆ ೩,೧೫೦ ಟನ್ನುಗಳು, ಇತರ ಪ್ರದೇಶಗಳಿಗೆ ಒಟ್ಟು ೯,೨೦೦ ಟನ್ನುಗಳಷ್ಟು ಆಹಾರಧಾನ್ಯವನ್ನು ಸರಬರಾಜು ಮಾಡಲಾಗಿದೆ.

ಉಡುಪಿ

ಶೀರೂರು ಮಠದ ಶ್ರೀ| ಪಾದಂಗಳವರು: ಉಡುಪಿ ಶ್ರೀ ಶೀರೂರು ಮಠದ ಶ್ರೀ ಮಲ್ಲಕೇಂದ್ರ ತೀರ್ಥ ಶ್ರೀ ಪಾದಂಗಳವರು ಕಳೆದ ವೈಶಾಖ ಶುದ್ಧ ದ್ವಾದಶಿಯಂದು ಪರಿವಾರ ಸಮೇತ ರಾಮೇಶ್ವರ ಕ್ಷೇತ್ರ ಸಂದರ್ಶಿಸಿ, ಪೌರ್ಣಮಿ ಪರ್ಯಂತ ಶ್ರೀ ಕ್ಷೇತ್ರ ವಾಸ ತೀರ್ಥ ಸ್ನಾನ,ದರ್ಶನ,ಪೂಜಾ, ದಾನಧರ್ಮಾದಿ ವಿಧಿಗಳನ್ನೆಲ್ಲಾ ಪೂರೈಸಿ, ಧನುಃಷ್ಕೋಡಿಯಲ್ಲಿ ಎರಡು ದಿವಸ ಸೇತುವಾಸ, ಸೇತುಸ್ನಾನ ಪೂಜಾದಿಗಳನ್ನೆಲ್ಲಾ ಪೂರೈಸಿ ಯಾತ್ರಾ ಕಾರ್ಯವನ್ನು ನಿರ್ವಿಘ್ನವಾಗಿ ನೆರವೇರಿಸಿದರು.

ಶಾಲಾ ವಾರ್ಷಿಕೋತ್ಸವ: ಕುರ್ಕಾಲು ಗಣಪತಿ ಎಲಿಮೆಂಟರಿ ಶಾಲೆ ಮತ್ತು ಕುಂಜಾರುಗಿರಿ ಗಿರಿಜಾ ಹಾಯರ್ ಎಲಿಮೆಂಟರಿ ಶಾಲೆಗಳ ಸಂಯುಕ್ತ ವಾರ್ಷಿಕೋತ್ಸವ ಶ್ರೀ| ಟಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹಳೇ ವಿದ್ಯಾರ್ಥಿ ಶ್ರೀ|ಕೆ. ನಾರಾಯಣ ಭಟ್ಟರು ಸ್ವಸ್ತಿವಾಚನ ಮಾಡಿದರು. ಶ್ರೀಮತಿ ಪ್ರೇಮಾ ಎ. ಪೈಯವರು ಬಹುಮಾನ ವಿತರಣ ಮಾಡಿದರು. ಶಾಲಾ ಹೆಮ್ಮಕ್ಕಳಿಂದ 'ಗುರುದಕ್ಷಿಣೆ' ಎಂಬ ನಾಟಕ, ಹುಡುಗರಿಂದ 'ವರದಕ್ಷಿಣೆ' ಎಂಬ ತುಳು ನಾಟಕ ಮತ್ತು "ಪನ್ನಾದಾಸಿ"ಎಂಬ ಕನ್ನಡ ನಾಟಕಗಳು ಅಂದು ಅಭಿನಯಿಸಲ್ಪಟ್ಟಿದ್ದುವು.

ನಿಧನ: ಪಾಂಗಾಳ ನಾಯಕ ಮನೆತನಕ್ಕೆ ಸೇರಿದ ಪಾಂಗಾಳ ರಂಗಪ್ಪನಾಯಕರು ಕಟಪಾಡಿಯ ತಮ್ಮ ಮನೆಯಲ್ಲಿ ಕಳೆದ ತಾ. ೧೪ರಂದು ಹೃದಯಸ್ತಂಭನದಿಂದ ತಮ್ಮ ೬೫ನೇ ಹರೆಯದಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿ ಕೋರುವುದರೊಡನೆ ಅವರ ಕುಟುಂಬಕ್ಕೆ ವ ಬಂಧುಮಿತ್ರರಿಗೆ ದುಃಖ ಸಮಾಧಾನವನ್ನು ಪರಮಾತ್ಮನು ಕೊಡಲೆಂದು ಬಯಸುವೆವು.

ಸಹಾಯಾರ್ಥ ಪ್ರದರ್ಶನ: ಉಡುಪಿಯ ಸಮೀಪದ ಅಶ್ವತ್ಥ ಗುಂಡಿ ಸಂಕದ ಸಹಾಯಾರ್ಥ ಡ್ರೀಮ್‌ಲೇಂಡ್ ಶೋರರವರು ನೃತ್ಯ, ಸರ್ಕಸ್, ಇತ್ಯಾದಿಗಳ ಪ್ರದರ್ಶನಗಳನ್ನು ಏರ್ಪಡಿಸಿದ್ದರು. ಈ ಪ್ರದರ್ಶನಗಳಿಂದ ಸುಮಾರು ೭೦೦ ರೂಪಾಯಿಯಷ್ಟು ಸಂಗ್ರಹವಾಗಿದೆಯಾಗಿ ತಿಳಿದು ಬರುತ್ತದೆ.

ಕಾಸರಗೋಡು

ಬಸ್ ಸ್ಟೆಂಡ್: ಕಾಸರಗೋಡು ಪಂಚಾಯತು ಬೋರ್ಡಿನ ಸಾಮಾನ್ಯ ಸಭೆಯು ತಾ. ೨೦ರಂದು ಸಂಜೆ ಶ್ರೀ| ಶೆಡ್ಡೆ ಲಕ್ಷ್ಮಣ ರಾಯರ ಅಧ್ಯಕ್ಷತೆಯಲ್ಲಿ ಕಾಸರಗೋಡು ಕಸಭೆಯ ಆರ್.ಎಸ್. ನಂಬ್ರ ೭೪-೩೩ನ್ನು ಬಸ್‌ಸ್ಟೇಂಡಿನ ಬಗ್ಗೆ ಕಲೆಕ್ಟರ್ ಮತ್ತು ರೀಜಿನಲ್ ಟ್ರಾನ್ಸ್‌ಪೋರ್ಟು ಆಫೀಸರರವರ ಶಿಫಾರಸು ಮೇರೆಗೆ ಸ್ವೀಕರಿಸುವುದಾಗಿ ನಿರ್ಣಯಿಸಲಾಯಿತು. ರಾಷ್ಟ್ರೀಯ ಯೋಜನಾ ಸಾಲಕ್ಕೆ ರೂ.೧೦೦೦೦ ಕೊಡಲು,ಮೋರಿ ಕಟ್ಟುವರೆ ಮತ್ತು ರಸ್ತೆ ದುರುಸ್ತಿ ಬಗ್ಗೆ ರೂ. ೫,೧೬೫ ವೆಚ್ಚ ಮಾಡಲು, ಮಲ್ಲಿಕಾರ್ಜುನ ದೇವಸ್ಥಾನದ ಹಿಂಬದಿಯ ಓಣಿಯನ್ನು ರಸ್ತೆಯಾಗಿ ಮಾರ್ಪಡಿಸಲು, ಬೋರ್ಡಿನ ಕೆಳಮಟ್ಟದ ನೌಕರರಿಗೆ ಉಡುಪು ಮತ್ತು ಚಪ್ಪಲಗಳನ್ನು ಒದಗಿಸಲು, ಬಿಲ್ ಕಲೆಕ್ಟರರಿಗೆ ಸಮ ವಸ್ತ್ರ ಮತ್ತು ಚಪ್ಪಲಗಳನ್ನು ಹಾಗು ತಿಂಗಳಿಗೆ ರೂ ೪ರಂತೆ ಸೈಕಲು ಭತ್ತೆ ಕೊಡಲು ಶಿಫಾರಸು ಮಾಡುವರೆ ನಿರ್ಣಯಿಸಲಾಯಿತು. ಇದಲ್ಲದೆ ಇತರ ಹಲವು ವಿಷಯಗಳು ಮಂಜೂರು ಮಾಡಲ್ಪಟ್ಟುವು.

ತಿದ್ದುಪಡಿ: ಕಳೆದ ವಾರದ ಸಂಚಿಕೆಯಲ್ಲಿ ಪ್ರಕಟವಾದ 'ಮಾಯಿಪಾಡಿ ಬಳಿ ವಣ್ಣು ಬಿದ್ದ ದುರಂತ' ವಾರ್ತೆಯಲ್ಲಿ ಈ ದುರ್ಘಟನೆ ಮಾಯಿಪಾಡಿ ಅರಮನೆ ಹಿತ್ತಲಿನಲ್ಲಿ ನಡೆದಿತ್ತೆಂದು ಪ್ರಕಟವಾದುದನ್ನು 'ಮಾಯಿಪಾಡಿ ಅರಮನೆಯ ಹಿತ್ತಲಿನಿಂದ ಸ್ವಲ್ಪ ದೂರದಲ್ಲಿರುವ ಶ್ರೀ| ಎ. ಕೆ. ವಾಸುದೇವರಾಯರ ಹಿತ್ತಲಿನಲ್ಲಿ ನಡೆಯಿತು' ಎಂಬುದಾಗಿ ತಿದ್ದಬೇಕಾಗಿದೆ.

ಕಳವು: ಕೂಡ್ಲು ಕಾವುಗೋಳಿಯಲ್ಲಿರುವ ಸುಲೇಮಾನ್ ಬ್ಯಾರಿ ಎಂಬವರ ಮನೆಯ ಮಾಡು ಮತ್ತು ಅಟ್ಟವನ್ನು ಕನ್ನಕೊರೆದು ಕೆಳಕ್ಕಿಳಿದು ಮರದ ದೊಡ್ಡ ಪೆಟ್ಟಿಗೆಯೊಂದನ್ನು ಹೊರಕ್ಕೆ ಸಾಗಿಸಿ, ಸಮೀಪದ ಓಣಿಯೊಂದರಲ್ಲಿ ಅದನ್ನೊಡೆದು ಕಳ್ಳರು ಅದರಲ್ಲಿದ್ದ ಸುಮಾರು ರೂ. ೩೦೪೪-೦-೦ ಬೆಲೆಯ ಚಿನ್ನಾಭರಣಗಳನ್ನು ಅಪಹರಿಸಿದದರು. ಈ ಕುರಿತು ಕಾಸರಗೋಡಿನ ಪೋಲೀಸ್ ಇಲಾಖೆಯವರು ತನ್ಖಿ ನಡೆಸಿ,ಹುಸೈನಾರ್ ಎಂಬವನನ್ನು ಬಂಧಿಸಿರುತ್ತಾರೆ.

ದಾದಿ ವೃತ್ತಿ ಪರಿಶೀಲನಾ ಸಮಿತಿ

೧೯೫೪ನೇ ಫೆಬ್ರವರಿ ತಿಂಗಳಲ್ಲಿ ರಾಜಕೋಟೆಯಲ್ಲಿ ನಡೆದ ಕೇಂದ್ರ ಆರೋಗ್ಯ ಕೌನ್ಸಿಲ್ಲಿನ ದ್ವಿತೀಯ ಸಭೆಯಲ್ಲಿ ತೀರ್ಮಾನವಾದಂತೆ—ಇಂಡಿಯಾ ಸರ್ಕಾರದ ಆರೋಗ್ಯ ಸಚಿವ ಶಾಖೆಯು ಭಾರತದಲ್ಲಿ ದಾದಿ ವೃತ್ತಿಗೆ ಸಂಬಂಧಿಸಿದ ಉದ್ಯೋಗ ನಿಯಮಗಳು, ಸೌಕರ್ಯಗಳು ಇತ್ಯಾದಿಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಿದೆ.

ಮದ್ರಾಸು ಸರ್ಕಾರದ ಆರೋಗ್ಯ ಸಚಿವರು ಈ ಸಮಿತಿಯ ಅಧ್ಯಕ್ಷರು. ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಮುಂಬೈ, ಒರಿಸ್ಸಾ, ಪಂಜಾಬು, ಅಸ್ಸಾಂ, ಸರ್ಕಾರಗಳ ಆರೋಗ್ಯ ಸಚಿವರು ಅಥವಾ ಅವರ ಪ್ರತಿನಿಧಿಗಳು ಈ ಸಮಿತಿಯ ಸದಸ್ಯರು.

ಆರೋಗ್ಯ ಸೇವಾ ಶಾಖೆಯ ಡೈರೆಕ್ಟರೇಟ್ ಜನರಲ್ಲಿನ ಚೀಫ್ ನರ್ಸಿಂಗ್ ಸೂಪರಿಂಟೆಂಡೆಂಟರಾದ ಕುಮಾರಿ ಟಿ. ಕೆ. ಅದ್ರನ್‌ವಾಲಾರವರು ಈ ಸಮಿತಿಯ ಕಾರ್ಯದರ್ಶಿಗಳಾಗಿರುವರು.

ಕುಷ್ಟ ರೋಗ ನಿವಾರಣೆ ಸಮಿತಿ

ಇಂಡಿಯಾ ಸರ್ಕಾರದ ಆರೋಗ್ಯ ಶಾಖೆಯವರು, ಭಾರತದಲ್ಲಿ ಕುಷ್ಟರೋಗವನ್ನು ಹತೋಟಿಗೆ ತರಲು ಕೈಕೊಳ್ಳಬೇಕಾದ ಕ್ರಮಗಳನ್ನು ಪರಿಶೀಲಿಸುವುದಕ್ಕಾಗಿ ಸಮಿತಿಯೊಂದನ್ನು ರಚಿಸಿದ್ದಾರೆ. ೧೯೫೪ರ ಫೆಬ್ರವರಿಯಲ್ಲಿ ನಡೆದ ಕೇಂದ್ರ ಆರೋಗ್ಯ ಸಮಿತಿಯ ದ್ವಿತೀಯ ಅಧಿವೇಶನದಲ್ಲಿ ಕೈಗೊಂಡ ನಿರ್ಣಯದ ಪ್ರಕಾರ ಈ ಸಮಿತಿಯನ್ನು ರಚಿಸಲಾಗಿದೆ.

ಪಶ್ಚಿಮ ಬಂಗಾಳದ ವೈದ್ಯ ಮತ್ತು ಸಾರ್ವಜನಿಕ ಆರೋಗ್ಯ ಶಾಖೆಯ ಸಚಿವರು ಈ ಸಮಿತಿಯ ಅಧ್ಯಕ್ಷರು. ಮುಂಬೈ, ಮದರಾಸು, ಒರಿಸ್ಸಾ ಮತ್ತು ದೆಹಲಿ ಈ ಸಂಸ್ಥಾನಗಳ ಆರೋಗ್ಯ ಸಚಿವರು ಅಥವಾ ಅವರ ಪ್ರತಿನಿಧಿಗಳು ಈ ಸಮಿತಿಯ ಸದಸ್ಯರು.

ಭಾರತದಲ್ಲಿ ಕುಷ್ಟರೋಗದ ಸಮಸ್ಯೆಯನ್ನು ಪರಿಶೀಲಿಸಿ ಕುಷ್ಟರೋಗ ನಿವಾರಣೆಗೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ಈ ಸಮಿತಿಯವರು ಸಮಾಲೋಚಿಸುವರು. ಕುಷ್ಟರೋಗದ ಸಂಬಂಧದಲ್ಲಿ ಈಗ ಹಾಲಿ ಇರುವ ಶಾಸನಗಳ ಸಮೀಕ್ಷೆ ನಡೆಸಿ ಅವುಗಳಲ್ಲಿನ ಕುಂದು ಕೊರತೆಗಳನ್ನು ನಿರ್ಮೂಲ ಮಾಡಿ 'ಮಾದರಿ ಶಾಸನ'ವೊಂದನ್ನು ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳಿಗೆ ಸಲಹೆಯ ರೂಪದಲ್ಲಿ ಈ ಸಮಿತಿಯವರು ಕೊಡುವರು.

ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳ ಹಾಗೂ ಕುಷ್ಟರೋಗ ನಿವಾರಣೆಗಾಗಿ ದುಡಿಯುವ ಸಂಸ್ಥೆಗಳ ನಡುವೆ ಇರಬೇಕಾದ ಸಹಕಾರದ ಸಂಬಂಧದಲ್ಲಿಯೂ ಈ ಸಮಿತಿಯವರು ಸಲಹೆ ನೀಡುವರು.

ಈ ಸಮಿತಿಯವರು ಇನ್ನು ಆರು ತಿಂಗಳೊಳಗಾಗಿ ತಮ್ಮ ವರದಿಯನ್ನು ಕೊಡಬೇಕೆಂದು ಗೊತ್ತಾಗಿದೆ.

ಮಂಗಳೂರು

ಜಿಲ್ಲಾ ಕಲೆಕ್ಟರರ ನಿವೃತ್ತಿ: ಶ್ರೀ| ಎ. ಮಹಾಲಿಂಗಂ ಚೆಟ್ಟಿಯಾರ್‌ರವರು ಜಿಲ್ಲಾ ಕಲೆಕ್ಟರರ ಹುದ್ದೆಯಿಂದ ನಿವೃತ್ತಿಯಾದುದರಿಂದ ಕಳೆದ ತಾ. ೨೪ರಂದು ಬೆಳಗ್ಗೆ ಮೈಲಿನಲ್ಲಿ ತಮ್ಮ ಊರಿಗೆ ಹಿಂತೆರಳಿದರು. ಹಿರಿಯ ಅಧಿಕಾರಿಗಳು ಅವರನ್ನು ರೈಲ್ವೇ ನಿಲ್ದಾಣದಲ್ಲಿ ಬೀಳ್ಕೊಟ್ಟರು. ಹೊಸ ಜಿಲ್ಲಾ ಕಲೆಕ್ಟರ[illegible] ಶ್ರೀ| ಪಿ. ಸೀತಾರಾಮ ಸೇ[illegible]ಯವರು ತಾ. ೨೭ರಂದು ಅಧಿಕಾರ ವಹಿಸಿರುವರು.

ಹಾವಂಜೆ, ಮೂಲ್ಕಿ, ಉದ್ಯಾವರ ಸಂಕಗಳು: ಮಂಗಳೂರು ಉಡುಪಿ ರಸ್ತೆಯಲ್ಲಿರುವ ಈ ಮೂರು ಹೊಳೆಗಳ ಮೇಲೆ ಕಟ್ಟಲಿರುವ ಮೂರು ಸಂಕಗಳ ಸಂಪೂರ್ಣ ಅಂದಾಜು ಖರ್ಚು ರೂ. ೩೪·೩ ಲಕ್ಷಕ್ಕೆ ಮಿಕ್ಕದಂತೆ ವಹಿಸುವರೆ ಕೇಂದ್ರ ಸರಕಾರ ಒಪ್ಪಿಕೊಂಡಿದೆಯೆಂದು ಕೇಳಿಬರುತ್ತದೆ.

ಆರೋಗ್ಯ ಮಂತ್ರಿಗಳ ಆಗಮನ: ಮದ್ರಾಸಿನ ಆರೋಗ್ಯ ಮಂತ್ರಿ ಮಾನ್ಯ ಎ. ಬಿ. ಶೆಟ್ಟರು ಕಳೆದ ತಾ. ೨೪ರಂದು ಬೆಳಿಗ್ಗೆ ಜನತಾ ಎಕ್ಸ್‌ಪ್ರೆಸ್‌ದಲ್ಲಿ ಮಂಗಳೂರಿಗೆ ಆಗಮಿಸಿದರು. ರೈಲ್ವೇ ನಿಲ್ದಾಣದಲ್ಲಿ ನಗರದ ಪ್ರಮುಖ ಅಧಿಕಾರಿಗಳು ಅವರನ್ನು ಸ್ವಾಗತಿಸಿದರು. ಅಂದು ಸಂಜೆ ಮಂತ್ರಿಗಳ ಅತ್ತಾವರ ನಿವಾಸದಲ್ಲಿ ಶ್ರೀ| ಕೆ. ಸದಾನಂದ ಹೆಗ್ಡೆ ಎಂ. ಪಿ., ಶ್ರೀ| ವೈಕುಂಠ ಬಾಳಿಗಾ, ಎಂ. ಎಲ್. ಎ., ಶ್ರೀ| ನಯಂಪಳ್ಳಿ ರಾಮರಾವ್, ರೆ. ಫಾ. ಡಬ್ಲ್ಯೂ. ಎಫ್. ಸಿಕೇರ ಮೊದಲಾದವರೂ ಹಲವು ಸರಕಾರೀ ಅಧಿಕಾರಿಗಳೂ ಮಂತ್ರಿಗಳ ಭೇಟಿ ಪಡೆದರು. ಮಂಗಳೂರು ಕೈಮಗ್ಗಗಳ ಮಗ್ಗಾಲಕರ ಪರವಾಗಿ, ಕೈಮಗ್ಗಗಳ ಮಗ್ಗಾಲಕರಿಗೆ ಒಂದು ಸಹಕಾರಿ ಸಂಘ ಸ್ಥಾಪನೆ ಮಾಡಲು ಅನುಮತಿ ಕೊಡಬೇಕೆಂಬ ಮನವಿಯನ್ನು ಸಂಘದ ಕಾರ್ಯದರ್ಶಿ ಶ್ರೀ| ಜೆ. ಬಿ. ಡಿ'ಸೋಜರು ಅರ್ಪಿಸಿದರು. ಮಂತ್ರಿಗಳು ತಾ. ೩೧ರ ತನಕ ಇಲ್ಲಿದ್ದು ಜಿಲ್ಲಾ ಸಂಚಾರ ಕೈಕೊಳ್ಳಲಿದ್ದಾರೆ.



ಶ್ರೀ| ಭಕ್ತವತ್ಸಲಂರವರ ಜಿಲ್ಲಾ ಸಂಚಾರ

ಉದಿಯಾವರ ಮೊಗವೀರ ಸಮ್ಮೇಳನದಲ್ಲಿ ಭಾಷಣ

ಮದ್ರಾಸು ಪ್ರಾಂತದ ಕೃಷಿ, ಸಮಾಜ ವಿಕಾಸ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಯ ಮಂತ್ರಿ ಶ್ರೀ| ಎಂ. ಭಕ್ತವತ್ಸಲಂರವರು ಕಳೆದ ತಾ. ೨೧ರಂದು ಮಧ್ಯಾಹ್ನ ಮೈಲಿನಲ್ಲಿ ಕಾಸರಗೋಡಿಗೆ ಆಗಮಿಸಿದಾಗ ರೈಲ್ವೇ ನಿಲ್ದಾಣದಲ್ಲಿ ಸರಕಾರೀ ಅಧಿಕಾರಿಗಳು ಮತ್ತು ಪ್ರತಿಷ್ಠಿತ ಮಹನೀಯರು ಅವರನ್ನು ಸಂಭ್ರಮದಿಂದ ಸ್ವಾಗತಿಸಿ ಬಂಗಲೆಗೆ ಕರೆದೊಯ್ದರು. ಅಲ್ಲಿ ಜರಗಿದ ರಾಷ್ಟ್ರೀಯ ವಿಸ್ತರಣಾ ಯೋಜನಾ ಸಮಿತಿಯ ಸಭೆಯಲ್ಲಿ ಸುಳ್ಯ ಮತ್ತು ಮಂಜೇಶ್ವರ ಬ್ಲೋಕುಗಳ ಬ್ಲೋಕ್ ಡೆವಲಪ್‌ಮೆಂಟ್ ಆಫೀಸರರು ತಮ್ಮ ಕಾರ್ಯಕ್ಷೇತ್ರಗಳಲ್ಲಿ ಈ ತನಕ ಕೈಕೊಳ್ಳಲಾದ ಕಾರ್ಯಕಲಾಪಗಳ ವರದಿಯೊಪ್ಪಿಸಿದರು. ಮಾನ್ಯ ಸಚಿವರು ತಮ್ಮ ಭಾಷಣದಲ್ಲಿ, ತಾನು ಅಭಿವೃದ್ಧಿ ಯೋಜನೆಗಳನ್ನು ಸ್ವತಃ ಪರಿಶೀಲಿಸಲೋಸುಗ ಈ ಮೊದಲೇ ಜಿಲ್ಲೆಗೆ ಬರಬೇಕೆಂದಿದ್ದೆ. ಆದರೆ ಎಸೆಂಬ್ಲಿಯ ಅಧಿವೇಶನದಿಂದ ಬರಲಾಗಲಿಲ್ಲ; ಆದರೂ ಯೋಜನೆಗಳ ವಿಷಯ ವಿಚಾರವಿನಿಮಯ ನಡೆಸಿ ಅರಿತುಕೊಳ್ಳಲು ಬಂದಿರುವುದಾಗಿ ಹೇಳಿದರು. ಸಭೆಯು ಮುಗಿದ ಮೇಲೆ, ಕೃಷಿಕರ ಹಾಗು ಇತರ ಕೆಲವು ಸಮಾಜ ಸಂಸ್ಥೆಗಳ ಕೇಳಿಕೆಗಳನ್ನೊಳಗೊಂಡ ಹಲವು ಮನವಿಗಳನ್ನು ಮಂತ್ರಿಗಳು ಸ್ವೀಕರಿಸಿದರು. ಅನಂತರ ಶ್ರೀ| ಭಕ್ತವತ್ಸಲಂರವರು ಕೇಂದ್ರ ತೆಂಗಿನ ಪರಿಶೋಧನಾ ಕೇಂದ್ರ ಸಂದರ್ಶಿಸಿ ರಾತ್ರೆ ರೈಲಿನಲ್ಲಿ ಮಂಗಳೂರಿಗೆ ಹೋಟರು.

ಮಂಗಳೂರಲ್ಲಿ

ಮಾನ್ಯ ಸಚಿವರು ರಾತ್ರೆ ಕಾಸರಗೋಡಿನಿಂದ ಮಂಗಳೂರಿಗೆ ಬಂದು ಮುಟ್ಟಿದಾಗ ರೈಲ್ವೇ ನಿಲ್ದಾಣದಲ್ಲಿ ಜಿಲ್ಲಾ ಕಾಂಗ್ರೆಸ್ಸಿನ ಉಪಾಧ್ಯಕ್ಷ ಡಾ| ಯು. ಪಿ. ಮಲ್ಯ, ಶ್ರೀ| ಎಸ್. ನರ್ಸಪ್ಪಯ್ಯ, ಎಂ. ಎಲ್. ಸಿ. ಮೊದಲಾದವರು ಅವರನ್ನು ಸ್ವಾಗತಿಸಿದರು. ರೈಲ್ವೆ ನಿಲ್ದಾಣದಿಂದ ಮಂತ್ರಿಗಳು ಕದ್ರಿ ಬಂಗಲೆಗೆ ತೆರಳಿದರು.

ತಾ. ೨೨ರಂದು ಶ್ರೀ| ಭಕ್ತವತ್ಸಲಂರವರು ಹಜೂರು ಕಚೇರಿಯಲ್ಲಿ ಜರಗಿದ ಸಮಾಜ ವಿಕಾಸ ಯೋಜನಾ ಸಮಿತಿಯ ಸಭೆಯಲ್ಲಿ ಭಾಗವಹಿಸಿ, ಕಾರ್ಯಗಳ ಮುನ್ನಡೆಯ ಬಗ್ಗೆ ಸದಸ್ಯರ ಅಭಿಪ್ರಾಯ ಮತ್ತು ಸೂಚನೆಗಳನ್ನು ಪಡೆದರು. ವಿಕಾಸ ಯೋಜನಾ ಕ್ಷೇತ್ರದಲ್ಲಿ ಕೃಷಿ, ಪ್ರಾಣಿಸಂಗೋಪನೆ, ನೀರಾವರಿ, ಸಾರಿಗೆ, ಶಿಕ್ಷಣ, ಆರೋಗ್ಯ, ಮೀನುಗಾರಿಕೆ ಮೊದಲಾದ ವಿಭಾಗಗಳಲ್ಲಿ ಮಾಡಲ್ಪಟ್ಟ ಕಾರ್ಯಗಳ ಪರಿಶೀಲನೆಮಾಡಲಾಯಿತು.

ಸಲಹೆಗಳ ವಿಚಾರದಲ್ಲಿ ಯೋಗ್ಯಕಾರ್ಯಕ್ರಮ ಕೈಕೊಳ್ಳಲಾಗುವುದೆಂದು ಮಂತ್ರಿಗಳು ಆಶ್ವಾಸನೆಯಿತ್ತರು

ಅನಂತರ ಜಿಲ್ಲಾ ಕೊಂಗ್ರೆಸ್ ಕಚೇರಿಯಲ್ಲಿ ಕೊಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣಮಾಡುತ್ತ ಮಾನ್ಯ ಸಚಿವರು "ಸರಕಾರವು ಜನಹಿತಕ್ಕಾಗಿ ಸತತ ಶ್ರಮಿಸುತ್ತಿದೆ. ಮದ್ಯನಿಷೇಧ ಕಾರ್ಯಕ್ಕೆ ಜನರ ಸಹಾಯ ತುಂಬಾ ಅವಶ್ಯವಿದೆ. ಜನತೆಯೂ ಕೊಂಗ್ರೆಸ್ ಕಾರ್ಯಕರ್ತರೂ ಸರಿಯಾದ ಸಹಕಾರ ನೀಡಬೇಕು" ಎಂದರು. ಶ್ರೀ| ಕೆ. ಪಿ. ಮುಕುಂದ ಪ್ರಭುಗಳು, "ಜಿಲ್ಲೆಯಲ್ಲಿ ಕೊಂಗ್ರೆಸ್ ಪ್ರಚಾರ ಹೆಚ್ಚಾಗಬೇಕು. ಅದಕ್ಕಾಗಿ ಪ್ರಚಾರ ಕಾರ್ಯಕರ್ತರನ್ನು ನೇಮಿಸುವ ಅವಶ್ಯವಿದೆ. ಒಕ್ಕಲು ಧನಿಗಳೊಳಗೆ ಸ್ನೇಹಭಾವ ಕೂಡಿಬರುವುದರ ಸಲುವಾಗಿ ಬೇಗನೆ ಒಕ್ಕಲುಹಿತಮಸೂದೆ ತರಬೇಕು. ಕೊಂಗ್ರೆಸ್ ಕಾರ್ಯಕರ್ತರು ಸರಕಾರದ ಕಾರ್ಯಗಳಲ್ಲಿ ಸಹಕರಿಸಬೇಕು" ಎಂದು ತಮ್ಮ ಭಾಷಣದಲ್ಲಿ ಹೇಳಿದರು.

ಅಲ್ಲಿಂದ ಶ್ರೀ| ಭಕ್ತವತ್ಸಲಂರವರು ಕಂಕನಾಡಿಯ ಭತ್ತ ಸಂಶೋಧನಾ ಕೇಂದ್ರ ಸಂದರ್ಶಿಸಿ ಅಲ್ಲಿಯ ಕಾರ್ಯಕ್ರಮಗಳನ್ನು ಪರಿಶೀಲಿಸಿ, ಆ ಮೇಲೆ ಮೀನು ಹಾಳಾಗದಂತೆ ಸುಶಿಕ್ಷಿತವಾಗಿಡುವ ಬಗ್ಗೆ ಕಟ್ಟಲಾದ ರಿಫ್ರಿಜರೇಶನ್ ಪ್ಲಾಂಟ್ (ಕೋಲ್ಡ್ ಸ್ಟೋರೇಜ್) ಸಂದರ್ಶಿಸಿದರು.

ಉಡುಪಿಗೆ ಪಯಣ

ಪೂರ್ವಾಹ್ನ ೧೧ ಗಂಟೆಗೆ ಮಾನ್ಯ ಮಂತ್ರಿಗಳು ಮಂಗಳೂರಿಂದ ಹೊರಟು ಬಜ್ಪೆಯ ಆಸ್ಪತ್ರೆ ಕಟ್ಟಡ, ಸಮಾಜ ಮಂದಿರ, ಬಡಗ ಎಡಪದವಿನ ಶಾಲಾ ವಿಸ್ತರಣೆ, ತೆಂಕ ಮತ್ತು ಬಡಗು ಎಡಪದವುಗಳಲ್ಲಿ ಗ್ರಾಮಸ್ತರೇ ಸ್ವಶ್ರಮದಿಂದ ರಚಿಸಿದ ಎರಡು ರಸ್ತೆಗಳ ಪರಿಶೀಲನೆ, ಕೆಸರಗದ್ದೆಯ ಹಾ. ಎ. ಶಾಲೆಯ ವಿಸ್ತರಿಸಿದ ಕಟ್ಟಡ, ಬೆಳ್ವಾಯಿಯಲ್ಲಿ ತೋಡಿಸಲಾದ ಬಾವಿ, ಹಂಡೇಲಿನ ಹೊಸ ಶಾಲಾ ಕಟ್ಟಡ ಮತ್ತು ಅಗೆಸಿದ ಬಾವಿ, ಬೈಲೂರಿನ ಬಸಿರಿ ಎಲಿಮೆಂಟರಿ ಶಾಲಾ ಕಟ್ಟಡ ಹಾಗು ಒಂದು ಬಾವಿಯ ಕೆಲಸಗಳನ್ನು ಪರಿಶೀಲಿಸಿ ಉಡುಪಿಗೆ ತೆರಳಿದರು. ಜಿಲ್ಲಾ ಪ್ರೊಜೆಕ್ಟ್ ಅಧಿಕಾರಿ ಶ್ರೀ| ಎಚ್. ನರಸಿಂಹ, ಸಹಾಯಕ ಅಧಿಕಾರಿಗಳಾದ ಶ್ರೀ| ಕೆ. ಎಲ್. ಸೂರ್ಯನಾರಾಯಣನ್ ಮತ್ತು ಶ್ರೀ| ವಿ. ರಮ್ಲಾನ್‌ರವರು ಮಂತ್ರಿಗಳೊಂದಿಗಿದ್ದು ತಕ್ಕ ಮಾಹಿತಿಯಿತ್ತರು.

ಉಡುಪಿಯಿಂದ ಉದಿಯಾವರಕ್ಕೆ ತೆರಳಿ, ಅಲ್ಲಿ ಶ್ರೀ| ಸದಿಜು ಸಾಹುಕಾರರ ನಿವಾಸಗೃಹದಲ್ಲಿ ಜರಗಿದ ಉಡುಪಿ ತಾಲೂಕು ಮೊಗವೀರ ಬಂಧುಗಳ ಸಮ್ಮೇಳನದಲ್ಲಿ ಭಾಗವಹಿಸಿದರು. ಶ್ರೀ| ಟಿ. ಎ. ಪೈ, ಎಂ.ಎಲ್.ಎ. ಅವರು ಸಮ್ಮೇಲನದ ಅಧ್ಯಕ್ಷತೆ ವಹಿಸಿದ್ದರು. ಶ್ರೀ| ಆರ್. ಡಿ. ಮೆಂಡೊನರು ಸ್ವಾಗತ ಭಾಷಣಮಾಡಿದ ಮೇಲೆ ಅಧ್ಯಕ್ಷರಾದ ಶ್ರೀ| ಟಿ. ಎ. ಪೈಗಳು ಮಂತ್ರಿಗಳ ಪರಿಚಯಮಾಡಿಕೊಟ್ಟರು. ಹಲವಾರು ಬೇಡಿಕೆಗಳನ್ನೊಳಗೊಂಡ ಸುದೀರ್ಘ ಮಾನಪತ್ರವೊಂದನ್ನು ಶ್ರೀ| ಜಿ. ಆರ್. ಸಾಲಿಯಾನರು ಮಂತ್ರಿಗಳಿಗೆ ಒಪ್ಪಿಸಿದರು. ಈ ಮಾನಪತ್ರದಲ್ಲಿ, ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಫಿಶರೀಸ್ ಟೆಕ್ನೊಲಜಿ ಎಂಡ್ ಓಶನೊಗ್ರೊಫಿ ಸಂಸ್ಥೆಯನ್ನು ಮಲ್ಪೆಯಲ್ಲಿ ಸ್ಥಾಪಿಸಬೇಕು, ಆಗುಂಬೆ ರಸ್ತೆ ವಿಸ್ತರಿಸಬೇಕು, ಮಲ್ಪೆ ಬಂದರದ ಅಭಿವೃದ್ಧಿಯಾಗಬೇಕು, ಹದಿನಾಲ್ಕು ಪಟ್ಟಣ ಮೊಗವೀರ ಮಹಾಜನ ಸಭೆಯ ವತಿಯಿಂದ ನಡೆದು ಬರುತ್ತಿರುವ ವಯಸ್ಕರ ಶಿಕ್ಷಣ ಯೋಜನೆಗೆ ಸರಕಾರ ಬೆಂಬಲ ನೀಡಬೇಕು, ಸಮುದ್ರದಲ್ಲಿ ವಿಶೇಷ ತರಬೇತಿಹೊಂದಿದ ಮೊಗವೀರ ತರುಣರಿಗೆ ನೌಕಾಪಡೆಯಲ್ಲಿ ಉದ್ಯೋಗ ದೊರಕಿಸಿಕೊಡಬೇಕು, ಮಲ್ಪೆಯಲ್ಲಿ ಐಸ್ ಫ್ಯಾಕ್ಟರಿ ಮತ್ತು ಫಿಶ್‌ಮಿಲ್ ಪ್ಲಾಂಟ್ ಸ್ಥಾಪಿಸಬೇಕು—ಇವೇ ಮೊದಲಾದ ಬೇಡಿಕೆಗಳನ್ನು ಕಾಣಿಸಲಾಗಿತ್ತು.

ಬಳಿಕ ಪಂಚಾಯತ ಬೋರ್ಡಿನ ಪರವಾಗಿ ಅಧ್ಯಕ್ಷ ಶ್ರೀ| ಭಾಸ್ಕರ ಸೆಟ್ಟರು ಒಂದು ಮಾನಪತ್ರ ಅರ್ಪಿಸಿದರು. ವಿದ್ಯುಚ್ಛಕ್ತಿಯ ಮೇಲೆ ಹೊರಿಸಿದ ಸರ್‌ಚಾರ್ಜು ತೆಗೆಯಬೇಕು, ಹಳ್ಳಿಗರ ಉಪಯೋಗಾರ್ಥ ಇಲೆಕ್ಟ್ರಿಕ್ ಮೋಟಾರ್ ಮತ್ತು ಪಂಪು ಸೆಟ್ಟುಗಳನ್ನು ಕಂತಿನ ಮೇಲೆ ಕೊಡಿಸಬೇಕು, ಉದ್ಯಾವರ ಹೊಳೆಗೆ ಸೇತುವೆ ರಚಿಸಬೇಕು ಮೊದಲಾದ ಬೇಡಿಕೆಗಳು ಆ ಮಾನಪತ್ರದಲ್ಲಿ ಅಡಕವಾಗಿದ್ದುವು.

ಮಾನ್ಯ ಮಂತ್ರಿಗಳು ಮಾನಪತ್ರಕ್ಕೆ ಉತ್ತರಕೊಡುತ್ತ, "ಮಲ್ಪೆ-ಮಂಗಳೂರು ಎನ್ನುವ ಜಿಜ್ಞಾಸೆ ಇಲ್ಲದಿರುತ್ತಿದ್ದರೆ ಬಂದರದ ಪ್ರಶ್ನೆ ಇಷ್ಟು ದೀರ್ಘಕಾಲ ಮುಂದುವರಿಯುತ್ತಿರಲಿಲ್ಲ. ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಫಿಶರಿಸ್ ಟೆಕ್ನೊಲಜಿ ಎಂಡ್ ಓಶನೊಗ್ರಾಫಿ ಸಂಸ್ಥೆ ಸ್ಥಾಪಿಸಲು ಮಲ್ಪೆಯಷ್ಟು ಉತ್ತಮ ಜಾಗ ಬೇರೊಂದಿರಲಾರದು. ಈ ಕುರಿತು ಕೇಂದ್ರ ಸರಕಾರದೊಡನೆ ನಾನು ಪತ್ರವ್ಯವಹಾರ ನಡೆಸುತ್ತೇನೆ. ಐಸ್ ಫ್ಯಾಕ್ಟರಿ ಮಂಗಳೂರಲ್ಲಿ ಏರ್ಪಡಿಸಲು ರಚನೆಯ ಎಲ್ಲಾ ಸಿದ್ಧತೆಗಳು ನಡೆದಿವೆ. ಈಗ ಅದನ್ನು ಸ್ಥಳಾಂತರಿಸುವುದು ಕಷ್ಟಸಾಧ್ಯ. ಆದರೂ ಆ ಫ್ಯಾಕ್ಟರಿಯ ಪ್ರಯೋಜನ ಇಲ್ಲಿಯವರಿಗೂ ದೊರಕಿಸಿಕೊಡುವ ಬಗ್ಗೆ ಯಾವ್ಯಾವ ಉಪಾಯಗಳನ್ನು ಕೈಕೊಳ್ಳಬಹುದೆಂಬುದನ್ನು ಪರ್ಯಾಲೋಚಿಸಲಾಗುವುದು. ಮೀನುಗಾರಿಕೆಯ ವ್ಯವಸಾಯದಲ್ಲಿ ಅನೇಕ ಬಿಕ್ಕಟ್ಟಿನ ಸಮಸ್ಯೆಗಳಿರುತ್ತವೆ. ಈ ವ್ಯವಸಾಯವನ್ನು ಅಭಿವೃದ್ಧಿಗೊಳಿಸಲು ಸರಕಾರ ಕಂಕಣಬದ್ಧವಾಗಿದೆ. ಈ ಸಂದರ್ಭದಲ್ಲಿ ಇಲ್ಲಿಯ ಮೊಗವೀರ ಬಂಧುಗಳು ಎಲ್ಲಾ ಸಮಸ್ಯೆಗಳಲ್ಲಿಯೂ ವಿಶೇಷ ಆಸಕ್ತಿ ವಹಿಸಿ ಪರಿಹಾರ ಮಾರ್ಗ ಸೂಚಿಸಿದ್ದು ಸಂತೋಷದ ವಿಚಾರ" ಮುಂತಾಗಿ ಹೇಳಿದರು.

ಶ್ರೀ| ಟಿ. ಎ. ಪೈಗಳು ತಮ್ಮ ಅಧ್ಯಕ್ಷ ಭಾಷಣದಲ್ಲಿ ಮೀನುಗಾರಿಕೆ ದೇಶದ ಅಭಿವೃದ್ಧಿಯನ್ನುಂಟುಮಾಡುವ ವಿಶಿಷ್ಟ ಸಾಧನವಾಗಿರುವುದರಿಂದ ಅದರ ಅಭಿವೃದ್ಧಿಗಾಗಿ ಮನವಿಯಲ್ಲಿ ನಿರೂಪಿಸಿದ ಯಾವತ್ತು ವಿಷಯಗಳನ್ನು ಕೈಗೂಡಿಸಲು ಮಂತ್ರಿವರ್ಯರು ಪ್ರಯತ್ನಿಸುವರಾಗಿ ನಮಗೆ ವಿಶ್ವಾಸವಿದೆಯೆಂದರು. ಶ್ರೀ| ಭಾಸ್ಕರ ಶೆಟ್ಟರ ಧನ್ಯವಾದಾರ್ಪಣೆಯೊಂದಿಗೆ ಸಮ್ಮೇಲನ ಕೊನೆಗೊಂಡಿತು.

ಆ ಮೇಲೆ ಮಂತ್ರಿಗಳು ಹದಿನಾಲ್ಕು ಪಟ್ಟಣ ಮಹಾಜನ ಮೊಗವೀರ ಬಾಂಧವರಿಂದ ನಡೆಸಲ್ಪಡುವ ವಯಸ್ಕರ ಶಿಕ್ಷಣದ ಎರಡು ಶಾಲೆಗಳನ್ನು ಸಂದರ್ಶಿಸಿದರು. ಶ್ರೀ| ಟಿ. ಎ. ಪೈಗಳವರು ಸಂಗ್ರಹಿಸಿದ ಮೀನುಹಿಡಿವ ಚಿತ್ರಪ್ರದರ್ಶನ ನೋಡಿ ಮಂತ್ರಿಗಳು ಉಡುಪಿಗೆ ಮರಳಿದರು.

ಉದಿಯಾವರಕ್ಕೆ ಬರುವ ಮೊದಲು ಮಾನ್ಯ ಮಂತ್ರಿಗಳು ಕಸ್ತೂರ್‌ಬಾ ಮೆಡಿಕಲ್ ಕೊಲೇಜ್, ಮಣಿಪಾಲ ಟೆಕ್ಸ್‌ಟೈಲ್ಸ್, ಮಣಿಪಾಲ ಪವರ್ ಪ್ರೆಸ್ ಮುಂತಾದ ಸಂಸ್ಥೆಗಳನ್ನು ಸಂದರ್ಶಿಸಿದ್ದರು. ಉಡುಪಿಯ ಮಹಿಳಾ ಸಮಾಜಕ್ಕೆ ಭೇಟಿಕೊಟ್ಟು ಅಲ್ಲಿ ಕೊಡಲ್ಪಟ್ಟ ಬಿನ್ನವತ್ತಳೆ ಸ್ವೀಕರಿಸಿದ್ದರು.

ನಗರ ಸಭಾಪತಿಗಳ ಮನವಿ

ತಾ. ೨೩ರಂದು ಬೆಳಿಗ್ಗೆ ಶ್ರೀ| ಎಂ. ಭಕ್ತವತ್ಸಲಂರವರಿಗೆ ಮಂಗಳೂರು ನಗರ ಸಭೆಯ ಅಧ್ಯಕ್ಷ ಶ್ರೀ| ಕೆ. ಸೂರ್ಯನಾರಾಯಣ ಅಡಿಗರು ಒಂದು ಮನವಿಯನ್ನು ಸಲ್ಲಿಸಿ ಅದರಲ್ಲಿ ಟೆಲಿಫೋನ್ ಎಕ್ಸ್‌ಚೇಂಜ್, ಹೆಡ್ ಪೋಸ್ಟಾಫೀಸು ಮತ್ತು ಸೈಂಟ್ ಎನ್ಸ್ ಕೊನ್ವೆಂಟ್ ಮೊದಲಾದ ಸಾರ್ವಜನಿಕ ಸಂಸ್ಥೆಗಳ ಮಧ್ಯದಲ್ಲಿ ಪೋಲೀಸ್ ಕೊನ್ಸ್‌ಟೇಬಲ್ ಮತ್ತು ಹೆಡ್ ಕೊನ್ಸ್‌ಟೇಬಲರ ವಾಸ್ತವ್ಯದ ಬಗ್ಗೆ ರಚನೆಯಾಗುತ್ತಿರುವ ೧೭ ವಸತಿಗಳು ಬಹಳ ಆಕ್ಷೇಪಣೀಯವೆಂದು ವಿಶದೀಕರಿಸಿದ್ದರು. ಸರಕಾರವು ೧೫—೭—೧೯೫೨ರ ಆಜ್ಞೆಯಲ್ಲಿ ಸರಕಾರೀ ನೌಕರರಿಗೆ ವಸತಿ ಕಟ್ಟಿಸುವ ಸಂದರ್ಭದಲ್ಲಿ ಟೌನ್ ಪ್ಲಾನಿಂಗ್ ಡೈರೆಕ್ಟರರ ಅಭಿಪ್ರಾಯ ಮುಂಚಿತವಾಗಿ ಪಡೆಕೊಳ್ಳಬೇಕೆಂದು ಸೂಚಿಸಿದ್ದು, ಈ ವಸತಿಗಳನ್ನು ಕಟ್ಟುವಾಗ ಅವರ ಸಲಹೆ ಪಡೆದಿಲ್ಲ; ಸರಕಾರವೇ ನಗರ ರಚನಾ ಯೋಜನೆಯ ನಿಯಮಗಳನ್ನು ಅನುಸರಿಸದಿದ್ದಲ್ಲಿ ಸಾರ್ವಜನಿಕರ ಮೇಲೆ ಈ ನಿಯಮಗಳನ್ನು ಹೊರಿಸುವುದರಲ್ಲಿ ಅರ್ಥವಿಲ್ಲ; ಈ ಕಟ್ಟಡಗಳ ರಚನೆಯ ವಿಚಾರದಲ್ಲಿ ನಗರಸಭೆ, ಸ್ಥಳೀಕ ಪತ್ರಿಕೆಗಳು ಹಾಗು ಸಾರ್ವಜನಿಕರು ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ ಮುಂತಾಗಿಯೂ ಮನವಿಯಲ್ಲಿ ಸೂಚಿಸಲಾಗಿತ್ತು.

ಮರುಪಯಣ

ಶ್ರೀ| ಎಂ. ಭಕ್ತವತ್ಸಲಂರವರು ತಮ್ಮ ಕಾಸರಗೋಡು, ಉಡುಪಿ ಮತ್ತು ಮಂಗಳೂರಿನ ಕಾರ್ಯಕ್ರಮಗಳನ್ನು ಮುಗಿಸಿ ತಾ. ೨೩ರಂದು ಬೆಳಿಗ್ಗೆ ಮೈಲಿನಲ್ಲಿ ಮದ್ರಾಸಿಗೆ ಹಿಂತೆರಳಿದರು. ರೈಲ್ವೇ ನಿಲ್ದಾಣದಲ್ಲಿ ಡಾ| ಯು. ಪಿ. ಮಲ್ಯ, ಶ್ರೀಗಳಾದ ಬಿ. ಆರ್. ಕರ್ಕೇರ, ಟಿ. ಎ. ಪೈ, ಎಂ.ಎಲ್.ಎ., ಎಸ್. ನರ್ಸಪ್ಪಯ್ಯ, ಎಂ.ಎಲ್.ಸಿ., ಜಿಲ್ಲಾ ಕಲೆಕ್ಟರ್, ಶ್ರೀ| ಎ. ಮಹಾಲಿಂಗಂ ಚೆಟ್ಟಿಯಾರ್, ನಗರ ಸಭಾಧಿಪತಿ ಶ್ರೀ| ಕೆ. ಎಸ್. ಎನ್. ಅಡಿಗ ಹಾಗು ಇತರ ಅಧಿಕಾರಿಗಳು ಮಂತ್ರಿಗಳನ್ನು ಬೀಳ್ಕೊಟ್ಟರು.

——

ಮಾನವ ಶರೀರದ ವೈಚಿತ್ರ್ಯಗಳು—೧೪.

ಉಸಿರಾಟ

- ಟಿಶ್ಯೂಗಳ ಉಸಿರಾಟ.
- ಉಸಿರಾಟದ ನಿಯಂತ್ರಣ.

[ಲೇಖಕ: ಶ್ರೀ| ಪಿ. ಎಸ್. ವೆಂಕಟಕೃಷ್ಣ ರಾವ್, ಎಂ.ಎ., ಬಿ.ಟಿ.]

ಟಿಶ್ಯೂಗಳ ಉಸಿರಾಟ

ಹಿಂದಿನ ಎರಡು ಲೇಖನಗಳಲ್ಲಿ ಬಾಹ್ಯ ಉಸಿರಾಟವನ್ನು ವಿವರಿಸಿಯಾಯಿತು. ಇದರಿಂದ ಶ್ವಾಸಕೋಶಗಳಲ್ಲಿ ಮತ್ತು ಟಿಶ್ಯೂಗಳ ಸೂಕ್ಷ್ಮ ರಕ್ತನಾಳಗಳಲ್ಲಿ ಆಗುವ ಅನಿಲಗಳ ವಿನಿಮಯ ಕಾರ್ಯವನ್ನು ಮಾತ್ರ ತಿಳಿದ ಹಾಗಾಯಿತು. ಟಿಶ್ಯೂಗಳ ಜೀವಕಣಗಳಲ್ಲಿ ಪ್ರಾಣಾಧಾರಕ ಕ್ರಿಯೆಗಳು ಜರಗುತ್ತವೆ. ತನಗೆ ಅಗತ್ಯವಿರುವ ಶಕ್ತಿಯನ್ನು ಪಡೆಯುವುದಕ್ಕಾಗಿ ಪ್ರತಿಯೊಂದು ಜೀವಕಣವು ಆಮ್ಲಜನಕವನ್ನು ಉಪಯೋಗಿಸಿಕೊಂಡು ಅಂಗಾರಾಮ್ಲ ಅನಿಲವನ್ನು ಉತ್ಪತ್ತಿ ಮಾಡುತ್ತದೆ. ಟಿಶ್ಯೂಗಳಲ್ಲಿ ಉಪಯೋಗಿಸಲ್ಪಡುವ ಆಮ್ಲಜನಕ ಮತ್ತು ಅವುಗಳಲ್ಲಿ ಬಿಡುಗಡೆಯಾಗುವ ಅಂಗಾರಾಮ್ಲ ವಾಯುಗಳ ಪರಿಮಾಣಗಳು ದೇಹದ ಚಟುವಟಿಕೆಗಳನ್ನು ಹೊಂದಿಕೊಂಡಿದೆ. ಹೃದಯ ಮೆದುಳು ಪಿತ್ತಜನಕಾಂಗ ಮತ್ತು ಕೆಲಸ ಮಾಡುತ್ತಿರುವ ಸ್ನಾಯುಗಳು ಇವುಗಳ ಟಿಶ್ಯೂಗಳಲ್ಲಿ ಉಪಯೋಗಿಸಲ್ಪಡುವ ಮತ್ತು ಬಿಡುಗಡೆಯಾಗುವ ವಾಯುಗಳ ಪ್ರಮಾಣವು ಹೆಚ್ಚಾಗಿದೆ. ಜೀವಕಣಗಳು ಆಮ್ಲಜನಕವನ್ನು ಹೀರಿಕೊಂಡ ನಂತರ ಅಂಗಾರಾಮ್ಲವನ್ನು ಉಂಟುಮಾಡುವವರೆಗೆ ಅವುಗಳಲ್ಲಿ ಯಾವ ಕ್ರಿಯೆಗಳು ಜರಗುತ್ತವೆ ಎಂಬುದು ಇನ್ನೂ ಸಂಪೂರ್ಣವಾಗಿ ತಿಳಿದಿಲ್ಲ. 'ಉತ್ಕರ್ಷಕಾರಕರು ಎಂದು ಕರೆಯಲ್ಪಡುವ ಎನ್ಜಾಯಿಮುಗಳೂ, ಉತ್ತೇರಕ ವಸ್ತುಗಳು ಪ್ರಾಣಾಧಾರಕ ಕ್ರಿಯೆಗಳಲ್ಲಿ ಭಾಗವಹಿಸುತ್ತವೆ. ಈ ವಸ್ತುಗಳ ಕಾರ್ಯವು ವಿಷವಸ್ತುಗಳಿಂದ ಬದಲಾವಣೆ ಹೊಂದುತ್ತದೆ. ಸಯನೈಡನ್ನು ಸೇವಿಸಿದಾಗ ಟಿಶ್ಯೂಗಳ ಉಸಿರಾಟಕ್ಕೆ ತಡೆಯಾಗುತ್ತದೆ. ಆಮ್ಲಜನಕವನ್ನು ತೆಗೆದುಕೊಂಡು ಉಸಿರಾಡುವ ವಿಧಾನವನ್ನು ಏರೋಬಿಕ್(Aerobic) ಎಂದು ಕರೆಯುತ್ತಾರೆ. ಹಲವು ಅಣುಜೀವಿಗಳು ಮತ್ತು ಕೆಲವು ಪ್ರಾಣಿಗಳು ಆಮ್ಲಜನಕವನ್ನು ಉಪಯೋಗಿಸದೆ ಪರೋಕ್ಷವಾಗಿ ಉಸಿರಾಡುತ್ತವೆ. ಆದರೂ ಅವುಗಳು ಅಂಗಾರಾಮ್ಲವನ್ನು ಉತ್ಪತ್ತಿ ಮಾಡುತ್ತವೆ. ಈ ವಿಧಾನವನ್ನು ಎನೆರೋಬಿಕ್ (anaerobic) ಎನ್ನುತ್ತಾರೆ.

ಉಸಿರಾಟದ ನಿಯಂತ್ರಣ: ಶ್ವಾಸೋಚ್ಛ್ವಾಸ ಕ್ರಿಯೆಯಲ್ಲಿ ಮೂಗಿನ ಸೊಳ್ಳೆ, ಲ್ಯಾರಿಂಗ್ಸ್, ಎದೆ, ಉತರವಿತಾನ ಮತ್ತು ಹೊಟ್ಟೆ ಈ ಅವಯವಗಳ ಮಾಂಸ ಖಂಡಗಳು ಭಾಗವಹಿಸುತ್ತವೆ. ಅವುಗಳ ಕಾರ್ಯಗಳ ಸಮಾನಾಧಿಕರಣವು(Co-ordination) ಕೇಂದ್ರ ನರಮಂಡಲದಲ್ಲಿ ಆಗಬೇಕು. ಮೆಡುಲ್ಲ(Medulla) ದಲ್ಲಿರುವ ಉಸಿರಾಟವನ್ನು ನಿಯಂತ್ರಿಸುವ ಕೇಂದ್ರದ ನರಕಣಗಳು ಈ ಕಾರ್ಯವನ್ನು ಮಾಡುತ್ತವೆ. ಇದರಲ್ಲಿ ಎರಡು ಭಾಗಗಳಿವೆ. ಒಂದು ಭಾಗವು ಉಸಿರು ತೆಗೆದುಕೊಳ್ಳುವ ಕ್ರಿಯೆಯನ್ನೂ, ಇನ್ನೊಂದು ಭಾಗವು ಉಸಿರು ಬಿಡುವ ಕ್ರಿಯೆಯನ್ನೂ ನಿಯಂತ್ರಿಸುತ್ತವೆ. ಈ ಕೇಂದ್ರವು ಶ್ವಾಸಕೋಶಗಳಿಂದ ಮತ್ತು ಶರೀರದ ಇತರ ಭಾಗಗಳಿಂದ ಅವುಗಳ ಅವಶ್ಯಕತೆಗಳ ವಿಷಯವಾಗಿ ಬರುವ ಸಂದೇಶಗಳಿಗೆ ಒಳಪಟ್ಟು ಕೆಲಸಮಾಡಬೇಕು. ಅಲ್ಲದೆ ಮೆದುಳಿನಲ್ಲಿ ಹರಿಯುವ ರಕ್ತದಲ್ಲಿರುವ ಆಮ್ಲಜನಕ ಮತ್ತು ಅಂಗಾರಾಮ್ಲ ವಾಯುಗಳ ಪರಿಮಾಣದಲ್ಲಿ ಆಗುವ ಬದಲಾವಣೆಗಳಿಗೆ ಸೂಕ್ಷ್ಮತೆ (Sensitive)ಉಳ್ಳದ್ದಾಗಿರಬೇಕು. ಉಸಿರಾಟವು ಒಂದು ಅನೈಚ್ಛಿಕ ಕ್ರಿಯೆ. ಆದರೂ ನಾವು ಅದನ್ನು ತಕ್ಕಮಟ್ಟಿಗೆ ನಿಯಂತ್ರಿಸ ಬಹುದು. ಉಸಿರಾಟವು ಪ್ರಾಣಾಧಾರಕ ಕ್ರಿಯೆಗಳಲ್ಲಿ ಒಂದಾಗಿದೆ. ಶರೀರದ ಎಲ್ಲಾ ಕ್ರಿಯೆಗಳು ನಿಂತ ನಂತರ ಇದು ನಿಲ್ಲುವುದು. ಆದರೆ ಹೃದಯದ ಕೊನೆಯ ಬಡಿತಕ್ಕಿಂತ ಮೊದಲು ಉಸಿರಾಟವು ನಿಂತು ಹೋಗುತ್ತದೆ.

ಉಸಿರಾಟದ ರಾಸಾಯನಿಕ ನಿಯಂತ್ರಣ: ರಕ್ತದಲ್ಲಿರುವ ಆಮ್ಲಜನಕ ಮತ್ತು ಅಂಗಾರಾಮ್ಲ ಅನಿಲಗಳ ಪರಿಮಾಣವನ್ನು ಹೊಂದಿಕೊಂಡು ಉಸಿರಾಟ ಕ್ರಿಯೆಯಲ್ಲಿ ವ್ಯತ್ಯಾಸವಾಗುತ್ತದೆ. ಈ ಎರಡು ಅನಿಲಗಳಲ್ಲಿ ಅಂಗಾರಾಮ್ಲವು ಮುಖ್ಯವಾದದ್ದು. ಯಾಕೆಂದರೆ ಶರೀರದಲ್ಲಿ ಉತ್ಪತ್ತಿಯಾದ ಕಲ್ಮಷಗಳನ್ನು ಹೊರಗೆ ಹಾಕುವುದು ಅತಿ ಮುಖ್ಯವಾದ ಕೆಲಸವಾಗಿದೆ. ರಕ್ತದಲ್ಲಿರುವ ಅಂಗಾರಾಮ್ಲದ ಪರಿಮಾಣವು ಸ್ವಲ್ಪ ಹೆಚ್ಚಾದರೆ ಉಸಿರಾಟದ ವೇಗವೂ ಆಳವೂ ಹೆಚ್ಚಾಗುತ್ತದೆ. ವಾಯುವಿನಲ್ಲಿರುವ ಅಂಗಾರಾಮ್ಲವು ನೂರಕ್ಕೆ ೧೦ ಆದಾಗ ಶ್ವಾಸಕೋಶಗಳ ವಾಯು ಸಂಚಾರವು ಅರ್ಧ ಪಾಲು ಹೆಚ್ಚಾಗುತ್ತದೆ. ವಾಯುವಿನಲ್ಲಿರುವ ಅಂಗಾರಾಮ್ಲವು ಹೆಚ್ಚಾದಂತೆ ಅತ್ಯಂತ ಸಂಕಟವಾಗಿ ಮೂರ್ಛೆ ಉಂಟಾಗುತ್ತದೆ. ಕೊನೆಗೆ ಮರಣವುಂಟಾಗುತ್ತದೆ. ಆದರೆ ವಾಯುವಿನಲ್ಲಿರುವ ಆಮ್ಲಜನಕವು ನೂರಕ್ಕೆ ೨೧ರಿಂದ ೧೩ರವರೆಗೆ ಬಂದರೂ ಹೆಚ್ಚೇನೂ ಪ್ರಯಾಸವಾಗುವುದಿಲ್ಲ. ಅಲ್ಲದೆ ಶರೀರವು ನೀಲಿಯಾದರೂ ಅದು ಕಡಿಮೆಯಾಗಿದೆ ಎಂಬ ಅರಿವು ಕೂಡ ಆಗುವುದಿಲ್ಲ. ಥಕ್ಕನೆ ಮೂರ್ಛೆ ಉಂಟಾಗುತ್ತದೆ.

ನರಕೇಂದ್ರಗಳಿಂದ ಉಸಿರಾಟದ ನಿಯಂತ್ರಣ: ಶರೀರದ ಎರಡು ಬದಿಗಳಲ್ಲಿ ಇದ್ದು ಹೃದಯ ಶ್ವಾಸಕೋಶ ಮತ್ತು ಪಚನಾಂಗಗಳನ್ನು ಮೆಡುಲ್ಲದ ಪ್ರಾಣಾಧಾರಕ ಕೇಂದ್ರಗಳಿಗೆ ಜೋಡಿಸುವ ವೇಗಸ್(Vagus)ನರಗಳು ಉಸಿರಾಟವನ್ನು ನಿಯಂತ್ರಿಸುತ್ತವೆ. ಶ್ವಾಸಕೋಶಗಳ ಉಬ್ಬುವಿಕೆ (Distension) ದೊಡ್ಡ ಅಪಧಮನಿಗಳಲ್ಲಿ (Arteries) ಹರಿಯುವ ರಕ್ತದ ಒತ್ತಡ ಮತ್ತು ಅದರಲ್ಲಿರುವ ಅನಿಲಗಳ ಪರಿಮಾಣ ಇವುಗಳ ವಿಷಯವಾಗಿ ಸಂದೇಶವನ್ನು ಉಸಿರಾಟದ ಕೇಂದ್ರಕ್ಕೆ ಕಳುಹಿಸುತ್ತವೆ. ಕ್ರಿಯಾವಾಹಿ ನರಗಳು ಈ ಸಂದೇಶಗಳಿಗೆ ಅನುಗುಣವಾಗಿ ಉಸಿರಾಟದಲ್ಲಿ ಭಾಗವಹಿಸುವ ಸ್ನಾಯುಗಳ ಕ್ರಿಯೆಯನ್ನು ಬದಲಾಯಿಸುತ್ತವೆ. ಶ್ವಾಸನಾಳವನ್ನು ಆಹಾರವು ಪ್ರವೇಶಿಸಿದಾಗ ಉಂಟಾಗುವ ಕೆಮ್ಮು ಈ ವಿಧದ ನಿಯಂತ್ರಣಕ್ಕೆ ಒಂದು ಉದಾಹರಣೆಯಾಗಿದೆ.

ಶ್ವಾಸೋಚ್ಛ್ವಾಸನ್ನು ನಿಯಂತ್ರಿಸುವ ಮೆಡುಲ್ಲದ ಕೇಂದ್ರದ ಎರಡು ಭಾಗಗಳಲ್ಲಿ ಉಸಿರನ್ನು ತೆಗೆದುಕೊಳ್ಳುವುದನ್ನು ನಿಯಂತ್ರಿಸುವ ಭಾಗದ ಚಟುವಟಿಕೆಯು ಪ್ರಬಲವಾದದ್ದು. ಉಸಿರನ್ನು ತೆಗೆದುಕೊಳ್ಳುವ ಕ್ರಿಯೆಯ ವೇಗಸ್ ನರಗಳ ಮೂಲಕ ಹೋದ ಸಂದೇಶಗಳ ಫಲವಾಗಿ ಉಂಟಾಗುತ್ತದೆ. ಈ ಸಂದೇಶಗಳು ನಿಂತುಹೋಗುವುದರ ಪರಿಣಾಮವಾಗಿ ಉಚ್ಛ್ವಾಸ ಕ್ರಿಯೆಯು ನಡೆಯುತ್ತದೆ. ಅಂದರೆ ಎರಡನೆಯ ಕ್ರಿಯೆಯು ತಟಸ್ಥ ಕ್ರಿಯೆಯಾಗಿದೆ. ಈ ಎರಡು ಕ್ರಿಯೆಗಳು ಸಾಮರಸ್ಯದಿಂದ ಕ್ರಮಪ್ರಕಾರವಾಗಿ ಜರಗುವುದು ಪರಾವರ್ತಿತ ಕ್ರಿಯೆಗೆ (Reflex action) ಒಂದು ಉತ್ತಮ ಉದಾಹರಣೆಯಾಗಿದೆ. ಉಸಿರನ್ನು ತೆಗೆದುಕೊಳ್ಳುವ ಕ್ರಿಯೆಯ ಪರಮಾವಧಿಯಲ್ಲಿ ಶ್ವಾಸಕೋಶಗಳು ಹಿಗ್ಗುವುದರಿಂದ ಅವುಗಳ ಜ್ಞಾನವಾಹಿ ನರಗಳ ತುದಿಗಳು ಬಹಳ ಚಾಚಲ್ಪಡುತ್ತವೆ. ಇದರಿಂದಾಗಿ ನರಕೇಂದ್ರದ ಉಚ್ಛ್ವಾಸವನ್ನು ನಿಯಂತ್ರಿಸುವ ಭಾಗವು ಪ್ರಚೋದನೆ ಹೊಂದಿ, ವೇಗಸ್ ನರಗಳ ಚಟುವಟಿಕೆಯು ಪ್ರತಿಬಂಧಿತವಾಗುತ್ತದೆ. ಆಗ ಉಚ್ಛ್ವಾಸಕ್ರಿಯೆಯು ನಡೆಯುತ್ತದೆ. ಇನ್ನೊಂದು ವಿಧದಲ್ಲಿ ಹೇಳುವುದಾದರೆ ಶ್ವಾಸವನ್ನು ತೆಗೆದುಕೊಳ್ಳುವ ಕಾರ್ಯವು ಉಚ್ಛ್ವಾಸಕ್ರಿಯೆಗೆ ಅಗತ್ಯವಿರುವ ಪ್ರಚೋದನೆಯನ್ನು ಒದಗಿಸುತ್ತದೆ ಹೀಗೆ ಶ್ವಾಸೋಚ್ಛ್ವಾಸವು ಕ್ರಮಪ್ರಕಾರವಾಗಿ ಜರಗುತ್ತದೆ.

ನರಕೇಂದ್ರಗಳು ಉಸಿರಾಟದ ಕೆಲಬದ್ಧವಾದ ಗತ್ತನ್ನು ನಿಯಂತ್ರಿಸುತ್ತವೆ. ಉಸಿರಾಟದ ಆಳವು ರಾಸಾಯನಿಕ ನಿಯಂತ್ರಣಕ್ಕೆ ಒಳಪಟ್ಟಿದೆ ಇವುಗಳು ಒಂದರೊಡನೊಂದು ಸಹಕರಿಸಿ ಕೆಲಸ ಮಾಡುತ್ತವೆ. ರಕ್ತದಲ್ಲಿ ಅಂಗಾರಾಮ್ಲ ವಾಯುವು ಹೆಚ್ಚಾದಾಗ ಉಸಿರಾಟದ ಆಳದಲ್ಲಿ ವ್ಯತ್ಯಾಸವುಂಟಾಗಿ ದೀರ್ಘಶ್ವಾಸ ಉಂಟಾಗುತ್ತದೆ. ಆಗ ಶ್ವಾಸಕೋಶ ಹೆಚ್ಚು ಉಬ್ಬುವುದರಿಂದ ನರಕೇಂದ್ರಗಳು ಪ್ರಚೋದನೆ ಹೊಂದಿ ಉಸಿರಾಟದ ವೇಗದಲ್ಲಿ ಬದಲಾವಣೆಯುಂಟಾಗುತ್ತದೆ. ವ್ಯಾಯಾಮ ಮಾಡುವಾಗ ಆರಂಭದಲ್ಲಿ ಸ್ನಾಯುಗಳಲ್ಲಿ ಉತ್ಪತ್ತಿಯಾದ ಅಂಗಾರಾಮ್ಲ ವಾಯುವು ರಕ್ತದಿಂದ ಹೀರಲ್ಪಡುವುದರಿಂದ ನರಕೇಂದ್ರಗಳು ಉತ್ತೇಜನ ಹೊಂದಿ ಉಸಿರಾಟದ ವೇಗವೂ ಆಳವೂ ಹೆಚ್ಚಾಗುತ್ತವೆ. ಶ್ರಮವು ಹೆಚ್ಚಾದಂತೆ, ಒತ್ತಾಯದ ಉಸಿರಾಡುವಿಕೆಯ ಪರಿಣಾಮವಾಗಿ ರಕ್ತದಲ್ಲಿದ್ದ ಅಂಗಾರಾಮ್ಲ ವಾಯುವು ಸಂಪೂರ್ಣವಾಗಿ ವಿಸರ್ಜಿಸಲ್ಪಡುತ್ತದೆ. ಸ್ನಾಯುಗಳ ಚಟುವಟಿಕೆಯಿಂದಾಗಿ ಅವುಗಳಲ್ಲಿ ಉತ್ಪನ್ನವಾಗುವ ಲ್ಯಾಕ್ಟಿಕ್ ಆಮ್ಲ ಮತ್ತು ಎಡ್ರಿನಾಲಿನ್ ಚುರುಕಾಗಿ ಉಸಿರಾಡಿಸುವುದಕ್ಕೆ ಅಗತ್ಯವಿರುವ ಪ್ರಚೋದನೆಯನ್ನು ಒದಗಿಸುತ್ತವೆ. ಸುಮ್ಮನಿರುವಾಗ ಕೆಲವು ಸರ್ತಿ ದೀರ್ಘವಾಗಿ ಶ್ವಾಸೋಚ್ಛ್ವಾಸ ಮಾಡಿದರೆ ಉಸಿರಾಡಿಸುವುದಕ್ಕೆ ಅವಶ್ಯಕವಾದ ಪ್ರಚೋದನೆಯು ಮಾಯವಾಗುತ್ತದೆ. ಒಬ್ಬನು ಕೆಲವು ನಿಮಿಷಗಳ ವರೆಗೆ ದೀರ್ಘವಾಗಿ ಶ್ವಾಸೋಚ್ಛ್ವಾಸ ಮಾಡಿದರೆ ಮತ್ತೆ ಕೆಲವು ನಿಮಿಷಗಳ ವರೆಗೆ ಉಸಿರಾಡಿಸುವ ಅಪೇಕ್ಷೆ ಇರುವುದಿಲ್ಲ. ಅಲ್ಲದೆ ಶ್ವಾಸೋಚ್ಛ್ವಾಸವು ಕೂಡ ಇರುವುದಿಲ್ಲ. ಆದರೆ ಈ ಪ್ರಯೋಗವನ್ನು ಮಾಡುವುದು ಅಪಾಯಕರ.

———

ವಜ್ರದ ಬೆಲೆ ಚಿನ್ನದ ಆವರಣದೊಳಗಿದ್ದರೇನೇ ವಜ್ರದ ನಿಜಬೆಲೆ ತಿಳಿಯಬಹುದು.

MANIPAL TEMPLE BRAND TEXTILES UDIPI, S. KANARA

ಅಂತೆಯೇ, ಎಷ್ಟೇ ಸೌಂದರ್ಯವತಿಯರಾದರೂ ಕಲಾಪೂರ್ಣ ಸೀರೆ ಉಟ್ಟರೇನೇ ಅವರ ನೈಜ ಸೌಂದರ್ಯ ಇಮ್ಮಡಿಸಬಲ್ಲುದು.

ನಿಮ್ಮ ಸೌಂದರ್ಯ ವರ್ಧನೆಗೆ

ಮಣಿಪಾಲ ಮಗ್ಗದ ಸೀರೆಗಳು

ನಿಜವಾದ ಸಹಕಾರಿಯಾಗಬಲ್ಲುದು.

ತಾಳಿಕೆ, ಬಾಳಿಕೆಯಲ್ಲಾಗಲೀ ಸಹಜ ರಂಗಿನಲ್ಲಾಗಲೀ ನಮ್ಮ ಸೀರೆಗಳು ಎಲ್ಲೆಡೆಯು ಪ್ರಶಂಸೆಗೆ ಪಾತ್ರವಾಗಿದೆ.

ಮಣಿಪಾಲ ಟೆಕ್ಸ್‌ಟೈಲ್ಸ್,
ಮಣಿಪಾಲ, ಉಡುಪಿ, ದ. ಭಾರತ.

Proprietors: THE GENERAL INVESTMENT & COMMERCIAL CORPORATION LIMITED.
Mukund Nivas, UDIPI, S. India.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲ್ಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಎರಡೂವರೆ ಸಾವಿರ ವರ್ಷಗಳ ಹಿಂದೆ ಅಧರ್ಮ ಹಿಂಸೆಗಳು ಎಲ್ಲೆಲ್ಲಿಯೂ ಪ್ರಬಲಗೊಂಡಾಗ ಭಗವಾನ ಬುದ್ಧನಿಗೆ ಬೋಧ ಗಯಾದಲ್ಲಿ ಅಹಿಂಸಾ ಧರ್ಮದ ದಿವ್ಯ ಜ್ಞಾನವು ದೊರೆತು ಲೋಕದಲ್ಲಿ ಶಾಂತಿಯು ಹಬ್ಬಲಾರಂಭಿಸಿತು. ಇಂದು ಮನುಷ್ಯರಲ್ಲಿ ಭಿನ್ನತೆ, ಶೋಷಣೆ ಕ್ರೂರತೆಗಳು ಬೆಳೆದು ವಿಜ್ಞಾನದ ಪ್ರಗತಿ ಯುಗದಲ್ಲಿ ಮಾನವ ಸಂಸ್ಕೃತಿಯೇ ಲೋಪವಾಗುವುದೊ ಎಂಬ ಭೀತಿ ಹುಟ್ಟಿರುವಾಗ ಅದೇ ಬೋಧ ಗಯಾದಲ್ಲಿ ಮಾನವ ಕಲ್ಯಾಣಕ್ಕಾಗಿ ಸಂತ ವಿನೋಬಾಜಿಯವರಿಗೆ ವೇದಾಂತ ಮತ್ತು ಅಹಿಂಸೆಯ ಸಮನ್ವಯ ಜ್ಞಾನವು ಪ್ರಾಪ್ತವಾಗಿದೆ.



"ಭೂದಾನಕ್ಕೆ ಭೂಮಿ ಕೊಡದವರು ದ್ರೋಹಿಗಳು"

ಬೋಧಗಯಾ ಸರ್ವೋದಯ ಸಮ್ಮೇಲನದಲ್ಲಿ ಆಚಾರ್ಯ ವಿನೋಬಾಜಿಯವರ ಗಂಭೀರವಾಣಿ

[ವರದಿಗಾರರು: ಶ್ರೀ। ಎಸ್. ಯು. ರಾಮಚಂದ್ರರಾವ್, ಎಂ. ಎ, ಸರ್ವಸೇವಾ ಸಂಘ, ಮಂಗಳೂರು ವಿಭಾಗ.]

ಗಯಾವು ಹಿಂದುಗಳಿಗೆ ಪವಿತ್ರ ಕ್ಷೇತ್ರವು. ಗಯಾ ಶಹರಿನಿಂದ ಆರೇಳು ಮೈಲು ದೂರದಲ್ಲಿ ಬೋಧ ಗಯಾ ಎಂಬ ಬೌದ್ಧ ಕ್ಷೇತ್ರವಿದೆ. ಅಲ್ಲಿ ಮಹಾತ್ಮಾ ಗೌತಮನಿಗೆ ದಿವ್ಯ ಜ್ಞಾನವು ಪ್ರಾಪ್ತವಾಗಿ ಆತನು ಮುಂದಕ್ಕೆ ಭಗವಾನ್ ಬುದ್ಧನೆಂದು ಪ್ರಸಿದ್ಧನಾದನು. ಸರ್ವೋದಯ ಸಮ್ಮೇಲನವು ಬುದ್ಧ ಮಂದಿರದ ಸ್ವಲ್ಪ ದೂರದಲ್ಲಿ ಮಾವಿನ ಮರಗಳ ದೊಡ್ಡ ತೋಪಿನಲ್ಲಿ ಜರಗಿತು.

ಸಮ್ಮೇಲನವು ಇದೇ ಎಪ್ರಿಲ್ ತಿಂಗಳ ತಾ. ೧೮ರಿಂದ ೨೦ರ ತನಕ ಮೂರು ದಿನ ನಡೆಯಿತು. ತಾ. ೧೭ನೇ ಅಪರಾಹ್ನ ಸುಮಾರು ೫-೩೦ ಗಟೆಗೆ ಉತ್ತರ ಪ್ರದೇಶದ ಮುಖ್ಯ ಮಂತ್ರಿ ಮಾನನೀಯ ಶ್ರೀ। ಗೋವಿಂದ ವಲ್ಲಭ ಪಂತರು ಗ್ರಾಮೋದ್ಯೋಗ ಪ್ರದರ್ಶನದ ಉದ್ಘಾಟನೆಯನ್ನು ಮಾಡಿದರು. ಆ ಸಮಯದಲ್ಲಿ ಪ್ರವಚನವನ್ನು ಮಾಡುತ್ತ ಪೂಜ್ಯ ವಿನೋಬಾಜಿಯವರು ಹೀಗೆಂದರು—"ದೇಶವು ಸಂಪನ್ನ, ಸುಖ ಶಾಂತಿಯುಕ್ತವಾಗಬೇಕಾದರೆ ಉದ್ಯೋಗ, ಉತ್ಪತ್ತಿಗಳು ಅಭಿವೃದ್ಧಿಯಾಗಬೇಕು. ವರ್ತಮಾನಕಾಲದಲ್ಲಿ ಉದ್ಯೋಗಗಳೆಂದರೆ ಯಂತ್ರಗಳ ಮೂಲಕ ಕೇಂದ್ರಿಕೃತ ಉದ್ಯೋಗಗಳೆಂದು ಜನರು ಭಾವಿಸುತ್ತಾರೆ. ಆದರೆ ದೇಶದಲ್ಲೆಲ್ಲ ಜನರಿಗೆ ಉದ್ಯೋಗಗಳನ್ನೂ ಕೊಟ್ಟು ಎಲ್ಲರಿಗೂ ಆಹಾರ, ಬಟ್ಟೆ ವಸತಿಗಳನ್ನು ಒದಗಿಸುವುದು ಗ್ರಾಮಗಳಲ್ಲಿನ ವಿಕೇಂದ್ರಿತ ಗುಡಿ ಕೈಗಾರಿಕೆಗಳ ಮೂಲಕವೇ ಸಾಧ್ಯವು. ಅದಕ್ಕಾಗಿ ಪ್ರತಿಯೊಬ್ಬರೂ, ವಿಶೇಷವಾಗಿ ಅನ್ನ ಬಟ್ಟೆಗಳ ಮಟ್ಟಿಗಾದರೂ ಹಳ್ಳಿಗಳಲ್ಲಿ ತಯಾರಾಗುವ ಖಾದಿ ಮತ್ತು ಇತರ ವಸ್ತುಗಳನ್ನೂ ಉಪಯೋಗಿಸಬೇಕೆಂದು ಮಹಾತ್ಮಾ ಗಾಂಧೀಜಿಯವರು ತನ್ನ ಜೀವನಮಾನದಲ್ಲೆಲ್ಲ ಬೋಧಿಸಿದ್ದರು. ಕೇಂದ್ರಿತ ಯಂತ್ರೋದ್ಯೋಗಗಳನ್ನು ಸಮರ್ಥಿಸುವುದೆಂದರೆ ಹಿಂಸೆ, ಆತ್ಮಘಾತಕ. ವಿಕೇಂದ್ರಿತ ಗುಡಿಕೈಗಾರಿಕೆಗಳನ್ನು ವೃದ್ಧಿಸುವುದರಿಂದ ಅಹಿಂಸಾಮಯ ಸಮಾಜ ರಚನೆಗೆ ಪ್ರಥಮ ಸೋಪಾನವೇರಿದಂತಾಗುವುದು."

ಬೋಧ ಗಯಾ ಸಮ್ಮೇಲನವು ನಮ್ಮ ದೇಶದ ಇತಿಹಾಸದಲ್ಲೆ ಒಂದು ವಿಶಿಷ್ಟ ಸಂದರ್ಭವಾಗಿತ್ತು. ಏಕೆಂದರೆ ಆ ಸಮ್ಮೇಲನ ಕಾಲದಲ್ಲಿ ಬೇರೆ ಬೇರೆ, ಮಾತ್ರವಲ್ಲ, ವಿರುದ್ಧ ಅಭಿಪ್ರಾಯಗಳ ರಾಜಕೀಯ ಪಕ್ಷಗಳು ಕೂಡ ಏಕ ಸ್ಥಾನದಲ್ಲಿ ಕೂಡಿ ಸೌಹಾರ್ದದಿಂದ ವಿಚಾರ ಮಾಡುತ್ತಿದ್ದವು. ಕೇವಲ ಭಾಷಣಾದಿಗಳೇ ಇಲ್ಲದೆ, ತ್ವರೆಯಾಗಿ ಕೆಲಸ ಮಾಡುವ ವಾತಾವರಣವು ಅಲ್ಲಿ ಇತ್ತು. ಎಲ್ಲರೂ ಒಕ್ಕಟ್ಟಿನಿಂದ ಸೇರಿ ಊಟ ಉಪಚಾರಗಳನ್ನು ಮುಗಿಸಿದರು. ನಿಜವಾಗಿಯಾದರೂ ಪ್ರೇಮದಿಂದಾಗುವ ಕಾರ್ಯವು ಇನ್ನಾವ ರೀತಿಯಲ್ಲೂ ಸಾಧ್ಯವಿಲ್ಲವೆಂಬುದು ಅಲ್ಲಿ ಕಂಡುಬರುತ್ತಿತ್ತು. ಇದೇ ಭಾರತೀಯ ಮನೋವೃತ್ತಿಯ ವಿಶೇಷ ಗುಣವು. ನಮ್ಮ ದೇಶದ ತರುಣರು ದಿವ್ಯ ಕಾರ್ಯಕ್ಕಾಗಿ ತಮ್ಮ ಜೀವನವನ್ನೆ ಧಾರೆ ಎರೆಯುವ ಉದಾಹರಣೆಗಳು ಅಲ್ಲಿ ಕಂಡು ಬಂದವು. ಆತ್ಮಶಕ್ತಿಯಿಂದ ಎಲ್ಲ ತರದ ಸಂಕಷ್ಟಗಳನ್ನು ಇದಿರಾಡಬಹುದೆಂಬುದು ಅಲ್ಲಿ ಪ್ರತ್ಯಕ್ಷ ಕಂಡುಬರುತಿತ್ತು. ಮಹಾತ್ಮಾ ಬುದ್ಧನ ಅಮರ ಶಕ್ತಿಯು ಎಲ್ಲೆಲ್ಲಿಯೂ ಹಬ್ಬಿಕೊಂಡು, ಸತ್ಯ ಧರ್ಮದ ಕಡೆಗೆ ಜನರಿಗೆ ದಿಗ್ದರ್ಶನ ಮಾಡುತ್ತಿದ್ದಂತೆ ಗೋಚರವಾಗಿತ್ತು.

ಸಮ್ಮೇಲನವು ಎಪ್ರಿಲ್ ತಾ. ೧೮ನೇ ಮುಂಜಾನೆ ೯ ಗಂಟೆಗೆ ಶಾಂತ, ನಿಯಮಬದ್ಧ, ಸಾಮೂಹಿಕ ಸೂತ್ರಯಜ್ಞದಿಂದ ಪ್ರಾರಂಭವಾಯಿತು. ಸುಮಾರು ೯-೩೦ ಗಂಟೆಗೆ ಭಕ್ತಿಭಾವದ ಭಜನೆಯಾದ ನಂತರ ಶ್ರೀ। ಕಾಕಾ ಕಾಲೇಲಕರರು ಪೂಜ್ಯ ವಿನೋಬಾಜಿಯವರು ಯೋಚಿಸಿರುವ "ಸಮನ್ವಯ ಆಶ್ರಯ" ಹಾಗೂ ವಿದೇಶೀಯರು ಭಾರತದಿಂದ ಅಪೇಕ್ಷಿಸುವ ನೈತಿಕ ಶಕ್ತಿ ಇತ್ಯಾದಿ ಕುರಿತು ಹೀಗೆಂದರು: ನಾನು ಜಾಪಾನಿಗೆ ಶಾಂತಿ ಪರಿಷತ್ತಿಗಾಗಿ ಹೋದಾಗ ಜಾಪಾನಿ ಜನರು ನಮ್ಮ ದೇಶದ ನೈತಿಕ ಮಾರ್ಗದರ್ಶನ, ಆತ್ಮಶಕ್ತಿಯ ವಿಕಾಸ ಇತ್ಯಾದಿಗಳ ಕಡೆಗೇನೇ ನೋಡುತ್ತಿದ್ದರು. ಬುದ್ಧ ಭಗವಾನನು ಪ್ರೇಮದ ತತ್ತ್ವವನ್ನು ಪ್ರಚುರಪಡಿಸಿದನು. ನಮ್ಮ ವೇದ ಉಪನಿಷತ್ತುಗಳಲ್ಲಿ ಅದು ತುಂಬಿದೆ. ಇಂದು ಅದು ಸರ್ವೋದಯ ವಿಚಾರವಾಗಿ ಕಾಣಬರುತ್ತದೆ. ಭಿನ್ನ ಭಿನ್ನ ವಿಚಾರದವರು ಒಂದೇ ಸ್ಥಳದಲ್ಲಿ ಸಮನ್ವಯ ರೀತಿಯಿಂದ ಕಾರ್ಯಮಾಡಬೇಕೆಂಬ ವಿನೋಬಾಜಿಯವರ ಸ್ವಪ್ನವು ಪೂರ್ತಿಯಾಗುವುದು"

ಸಂತ ವಿನೋಬಾಜಿಯವರು ತನ್ನ ಭಾಷಣದಲ್ಲಿ, ವೇದಾಂತ ಮತ್ತು ಅಹಿಂಸೆ, ಇವೆರಡು ಭಿನ್ನವಾಗಿರದೆ, ಪರಸ್ಪರ ಪೂರಕಗಳು; ಗೀತೆಯ 'ಸ್ಥಿತಪ್ರಜ್ಞ'ನು ಎಲ್ಲರಲ್ಲೂ ಆತ್ಮಸಾಕ್ಷಿಯನ್ನೆ ಕಾಣುತ್ತಾನೆ. ಅದರಿಂದ ಸರ್ವಾಂಗೀನ ಸಮನ್ವಯ ದರ್ಶನವಾಗುತ್ತದೆ; ಭೂದಾನ ಯಜ್ಞವು ಅಂಥಾ ಸಮನ್ವಯ ದರ್ಶನದ ಪ್ರಥಮ ಸಾಂಸ್ಕೃತಿಕ ಸೋಪಾನವಾಗಿರುತ್ತದೆಂದು ಒತ್ತಿ ಹೇಳಿದರು.

ಅಪರಾಹ್ನ ಸುಮಾರು ೨-೩೦ ಗಂಟೆಗೆ ಸಮ್ಮೇಲನದ ಅಧಿವೇಶನ ಪುನಃ ಆರಂಭವಾಯಿತು. ಅಂದಿಗೆ ಮೂರು ವರ್ಷಗಳ ಹಿಂದೆ ವಿನೋಬಾಜಿಯವರು ತೆಲಂಗಾನಾದಲ್ಲಿ ಪ್ರಥಮ ಭೂಮಿದಾನವನ್ನು ಪಡೆದಿದ್ದರು. ಸಮ್ಮೇಲನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ। ಗೌರಿಶಂಕರ ಸರಣಸಿಂಗರು ಅತಿಥಿಗಳಿಗೆಲ್ಲ ಸ್ವಾಗತವನ್ನರ್ಪಿಸಿದರು. ಸರ್ವಸೇವಾ ಸಂಘದ ಕಾರ್ಯದರ್ಶಿಯರಾದ ಶ್ರೀ। ಶಂಕರರಾವ್ ದೇವರವರು ಶ್ರೀಮತಿ ಆಶಾದೇವಿ ಆರ್ಯನಾಯಕಮ್‌ರವರನ್ನು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಬೇಕೆಂದು ಕೇಳಿಕೊಂಡರು. ಪೂಜ್ಯ ವಿನೋಬಾಜಿಯವರ ಚರಣಸ್ಪರ್ಶವನ್ನು ಮಾಡಿ ಶ್ರೀಮತಿ ಆಶಾದೇವಿಯವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಸರ್ವಸೇವಾ ಸಂಘದ ಜೊತೆ ಕಾರ್ಯದರ್ಶಿ ಶ್ರೀ। ವಲ್ಲಭ ಸ್ವಾಮಿಯವರು ಗತವರ್ಷದಲ್ಲಿ ಸರ್ವಸೇವಾ ಸಂಘವು ನೆರವೇರಿಸಿದ ಕಾರ್ಯಗಳ ಸಂಕ್ಷಿಪ್ತ ವೃತ್ತವನ್ನು ತಿಳಿಸಿ, ಈ ಸಮ್ಮೇಲನದ ಬಳಿಕ ನಾವೆಲ್ಲ ಹೆಚ್ಚಿನ ಶಕ್ತಿ ಮತ್ತು ಪವಿತ್ರತೆಯುಕ್ತರಾಗಬೇಕೆಂಬ ಆಶೆಯನ್ನು ವ್ಯಕ್ತಪಡಿಸಿದರು. ಅಷ್ಟರಲ್ಲೆ ಪ್ರಧಾನ ಮಂತ್ರಿ ಮಾನನೀಯ ಶ್ರೀ। ಜವಾಹರಲಾಲರೂ, ಉಪರಾಷ್ಟ್ರಾಧ್ಯಕ್ಷ ಮಾನನೀಯ ಡಾ। ಎಸ್. ರಾಧಾಕೃಷ್ಣನ್‌ರವರೂ ಬಿಹಾರಿನ ಗವರ್ನರ್ ಶ್ರೀ। ರ. ರಾ. ದಿವಾಕರರೂ ಅಲ್ಲಿನ ಮುಖ್ಯ ಮಂತ್ರಿಯರೂ ಸಭಾ ಮಂಟಪವನ್ನು ಪ್ರವೇಶಿಸಿದರು. ಶ್ರೀ। ವಲ್ಲಭ ಸ್ವಾಮಿಯರು ಮಾನ್ಯ ಅತಿಥಿಗಳಿಗೆ ಕೈನೂಲಿನ ಹಾರಗಳನ್ನು ಅರ್ಪಿಸಿದರು. ಆ ಮೇಲೆ ಸಭಾ ಅಧ್ಯಕ್ಷರು ಶ್ರೀಮತಿ ಆಶಾದೇವಿಯವರು ಪೂಜ್ಯ ವಿನೋಬಾಜಿಯವರು ಪ್ರವಚನಮಾಡಬೇಕೆಂದು ಕೇಳಿಕೊಂಡ ಮೇರೆಗೆ ವಿನೋಬಾಜಿಯವರು ಹೀಗೆಂದು ಬೋಧಿಸಿದರು: "ಸಮಾನೀವ: ಆಕೂತಿ: ಸಮಾನಾ ಹೃದಯಾನಿ ವ: ಸಮಾನ ಮಸ್ತು ವೊ ಮನೋ ಯಥಾವ: ಸುಸಹಾಸತಿ" ಎಂಬ ವೇದಮಂತ್ರವನ್ನುಚ್ಚರಿಸಿ–ಇತ್ತೀಚೆಗೆ ಚುನಾವಣೆಯ ಪರಿಣಾಮವಾಗಿ ನಮ್ಮ ದೇಶದಲ್ಲಿ ಸಂಭವಿಸಿರುವ ಜಾತಿಭೇದ, ಧಾರ್ಮಿಕ ಮತ್ತು ಪ್ರಾದೇ


ಈಗ ತಾನೇ ಬಂದಿವೆ

ಮನಸ್ಸೊಲಿಸುವ ರಿಸ್ಟು ವಾಚುಗಳು!

ಸಕಾಲದಲ್ಲಿ ಹೊಸ ಹೊಸ ಮಾದರಿಯ ಲೇಡಿಸ್ ಮತ್ತು ಜಂಟ್ಸ್ ರಿಸ್ಟು ವಾಚುಗಳು ಶ್ರೇಷ್ಠ ತರದ, ದೀರ್ಘ ಬಾಳ್ಕೆಯ ಆಕರ್ಷಣೀಯ ಎಲಾರಮ್ ಟೈಂಪೀಸ್‌ಗಳು

ಯಾವಾಗಲೂ ಮಾರಾಟಕ್ಕೆ ಸಿದ್ಧವಾಗಿವೆ.

ವೆಸ್ಟೆಂಡ್, ಫೇವರ್-ಲೂಬಾ ಮತ್ತು ಇತರ ಕಂಪೆನಿಯ ವಾಚುಗಳು ಮಾರಾಟಕ್ಕೆ ಯಾವಾಗಲೂ ಸಿದ್ಧವಾಗಿವೆ.



'ನಾಯಕ್ಸ್'

ಗೋಡೆ ಗಡಿಯಾರ ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು! ಯಾವತ್ತೂ ಗಡಿಯಾರಗಳ ಮತ್ತು ಗ್ರಾಮಫೋನ್‌ಗಳ ರಿಪೇರಿ ಕೆಲಸವನ್ನು ನಾಜೂಕಾಗಿ ಮಾಡಿಕೊಡುವೆವು. ಎಲ್ಲಾ ತರದ ಸೈಕಲ್ ಪಾರ್ಟುಗಳ ಮೇಲೆ ಕ್ರೋಮ್ ಪ್ಲೇಟಿಂಗ್ ಮಾಡಿದಲ್ಲಿ ಬಹಳ ಕಾಲದ ವರೆಗೆ ಸಂದೇಹವಿಲ್ಲದೆ ನಿಲ್ಲುವುದು.

ವಿಚಾರಿಸಿರಿ

ಯಂ. ವಾಮನ ನಾಯಕ್ ಎಂಡ್ ಸನ್ಸ್

ಶೋ ರೂಮ್: ಕೆ. ಎಸ್. ರಾವ್ ರೋಡ್, ಮಂಗಳೂರು-1.
ಕಾರ್ಖಾನೆ: ಜಪ್ಪು, ಪೋಸ್ಟ್ ಬೋಕ್ಸ್ ನಂ. 8, ಮಂಗಳೂರು-2

ಶಿಕ ಭೇದ ಇತ್ಯಾದಿಗಳ ಭಯಂಕರ ದೋಷಗಳನ್ನು ರಾಜಾ ರಾಮಮೋಹನ ರ್‍ರಾಯ್ರಿಂದ ಮಹಾತ್ಮಾ ಗಾಂಧಿಯವರ ತನಕ ಎಲ್ಲ ದೇಶಭಕ್ತರು ಖಂಡಿಸಿರುವರು. ಹಾಗಾದರೆ ನಮ್ಮಲ್ಲಿ ಮೈತ್ರಿ ಮತ್ತು ಬಂಧುಭಾವವನ್ನುಂಟುಮಾಡಲು ಇಂಥಾ ದುರ್ಘಟನೆಗಳು ಅಗತ್ಯವೆ? ಸಜ್ಜನರು ಏಕತ್ರ ಕೂಡಿ ವಿಚಾರಿಸಿದರೆ, ಎಲ್ಲರಿಗೂ ಹಿತವಾದ ಒಂದು ಕಾರ್ಯಕ್ರಮವನ್ನು ಕಂಡುಹಿಡಿಯುವುದಸಾಧ್ಯವೆಂಬುದನ್ನು ತಾನು ಒಪ್ಪಲಾರೆ ಎಂದರು. ಆ ಮೇಲೆ ಭೂದಾನದ ಉದ್ಗಮವನ್ನು ವಿವರಿಸುತ್ತಾ, ಅದೊಂದೇ ದೇಶದ ಸಕಲ ಸಂಕಷ್ಟಗಳನ್ನು ನಿವಾರಿಸಲಾರದಾದರೂ, ಸರ್ವರನ್ನು ಒಟ್ಟು ಕೂಡಿಸುವ ಒಂದು ಮಹಾಶಕ್ತಿಯು ಮಾತ್ರ ಅದರಲ್ಲಿದೆ. ಭೂಮಿಯು ವೈಯಕ್ತಿಕ ಸಂಪತ್ತಲ್ಲ ಎಂಬ ವಾತಾವರಣವು ಕಳದ ಮೂರು ವರ್ಷಗಳಿಂದ ದೇಶದಲ್ಲೆಲ್ಲ ವ್ಯಾಪಿಸಿದೆ. ಹಾಗೆಯೆ ಸಕಲ ಸಂಪತ್ತುಗಳ ಯಜಮಾನತನವು ಸಮಾಜದ ಕೈಯಲ್ಲಿದೆ, ವ್ಯಕ್ತಿಗಳಿಗಿಲ್ಲ. ಪ್ರತಿಯೊಬ್ಬನೂ ತಾನು ಉಣ್ಣುವ ಮೊದಲು ಇತರರಿಗೆ ಅನ್ನ ಕೊಟ್ಟು ತೀರಬೇಕೆಂದು ನಮ್ಮ ಹಿರಿಯರ ಉಪದೇಶವಿತ್ತು. ಬಾಯಾರಿದವರಿಗೆ ನೀರು ಕೊಡಬೇಕಾದಂತೆ ಬೇಸಾಯ ಬಲ್ಲ ಪ್ರತಿಯೊಬ್ಬನಿಗೂ ಭೂಮಿಯು ಸಿಗಲೇಬೇಕು. ದೇವಮಂದಿರಕ್ಕೆ ಪ್ರವೇಶವಿರದಿದ್ದರೂ ಒಮ್ಮೆ ಸಹಿಸಬಹುದು, ಆದರೆ ಕೆಲಸಮಾಡಬಲ್ಲವನಿಗೆ ಭೂಮಿಯನ್ನು ನಿರಾಕರಿಸುವುದು ಕಲ್ಪನಾತೀತವು....ಕೈನೂಲುವುದು ಪ್ರಾಥಮಿಕ ಆವಶ್ಯಕತೆಯು. ಇಂಗ್ಲಾಂಡಿನ ಪ್ರತಿಯೊಬ್ಬ ನಾಗರಿಕನು ಈಜುವುದನ್ನೂ, ದೋಣಿ ನಡಿಸುವುದನ್ನೂ ತಿಳಿದಿರಬೇಕೆಂದಿದೆ. ಹಾಗೆಯೆ ಭಾರತದೇಶದಲ್ಲಿ ಕೈನೂಲುವುದು ಸಾರ್ವತ್ರಿಕವಾಗಬೇಕು. ಆದಕಾರಣ ಇಲ್ಲಿನ ಪ್ರತಿಯೊಬ್ಬ ನಾಗರಿಕನಿಗೂ ಕೈನೂಲುವ ಶಿಕ್ಷಣವನ್ನು ಕೊಡುವುದತ್ಯಗತ್ಯ ಎಂದು ಹೇಳಿ ಇನ್ನು ಪಂಡಿತ ನೆಹರುಗಳು ಮಾರ್ಗದರ್ಶನ ಮಾಡಬೇಕೆಂದು ತನ್ನ ಸ್ವಾಭಾವಿಕ ನಮ್ರತೆಯಿಂದ ಪಂಡಿತ ನೆಹರುಗಳನ್ನು ಕೇಳಿಕೊಂಡರು.

ತಾನೇನೂ ಮಾರ್ಗ ತೋರಿಸಲಿಕ್ಕೆ ಬಂದಿಲ್ಲ, ತಿಳಿದು ಕಲಿಯಲಿಕ್ಕೆ ಬಂದಿರುವೆನು. ನಾವೀಗ ಮೂವತ್ತಾರು ಕೋಟಿ ಜನರಿದ್ದೇವೆ. ಜಾತಿವಾದವು ಬೇರೂರುತ್ತಿದೆ; ಪ್ರಜಾ ಶಾಸನದಲ್ಲಿ ಚುನಾವಣೆಯನ್ನೂ ತೆಗೆದುಹಾಕಲೂ ಸಾಧ್ಯವಿಲ್ಲ. ಭೂದಾನವಂತೂ ಭೂಸಮಸ್ಯೆಯನ್ನು ಪರಿಹರಿಸಲು ಒಂದು ಕ್ರಾಂತಿಕಾರಿ ಮಾರ್ಗವು. ಆದರೆ ಅದರಲ್ಲಿ ಸರಕಾರವು ಕೈ ಹಾಕಿದರೆ ಆದರ ಸ್ವರೂಪವೇ ಬದಲಾಗುವ ಭಯವಿದೆ. ಕೈನೂಲುವುದನ್ನೂ ತಾನು ಒಪ್ಪಿಕೊಳ್ಳುತ್ತೇನೆ; ಅದರಲ್ಲಿ ಮಾತ್ರ ವೈಜ್ಞಾನಿಕ ಸುಧಾರಣೆಯಾಗಬೇಕು. ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ವಿಚಾರಿಸಿದರೆ, ನಾವು ಸೈನಿಕ ಶಕ್ತಿಯನ್ನು ಹೊಂದಿರಲಾರೆವು. ನಮ್ಮ ಆತ್ಮಶಕ್ತಿಯನ್ನೂ ನೈತಿಕಬಲವನ್ನೂ ಹೆಚ್ಚಿಸಬೇಕು ಎಂದು ಹೇಳಿದರು.

ಪಂಡಿತಜಿಯವರ ನಂತರ ಡಾ। ರಾಧಾಕೃಷ್ಣನ್‌ನವರು ಮಾತನಾಡಿದರು. ಭೂಸುಧಾರಣೆಯೂ ಜಾತಿಭೇದದ ನಿರ್ಮೂಲವೂ ಸಮಾಜದ ಉನ್ನತಿಗೂ ಅಗತ್ಯವೆಂದರು.

ಮಂಗಳೂರು

ಲೆಕ್ಕಪತ್ರ ಕಮಿಟಿಗೆ ಶ್ರೀ। ಸದಾನಂದ ಹೆಗ್ಡೆಯವರು: ಜೂನ್ ತಾ. ೩೦ರಿಂದ ಲೋಕಸಭೆ ಮತ್ತು ರಾಜ್ಯ ಪರಿಷತ್ತಿನ ಹೊಸ ಲೆಕ್ಕಪತ್ರ ಕಮಿಟಿಯು ಆರಂಭವಾಗಲಿರುವುದು. ಈ ಕಮಿಟಿಗೆ ಲೋಕಸಭೆ ಮತ್ತು ರಾಜ್ಯಪರಿಷತ್ತಿನಿಂದ ಆರಿಸಲ್ಪಟ್ಟ ಸದಸ್ಯರಲ್ಲಿ ನಮ್ಮ ಜಿಲ್ಲೆಯ ಶ್ರೀ। ಕೆ.ಸದಾನಂದ ಹೆಗ್ಡೆಯವರೂ ಒಬ್ಬರಾಗಿರುವರು.

ನವಭಾರತ ರಾತ್ರಿಶಾಲೆ: ಮಿಶ್ಯನ್ ಹೈಸ್ಕೂಲ್ ಕ್ರೋಸ್ ರೋಡಿನಲ್ಲಿರುವ ಈ ಶಾಲೆಯಲ್ಲಿ ಮದ್ರಾಸು ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಶನ್ ಮತ್ತು E.S.L.C. ಪರೀಕ್ಷೆಗೆ ಕೂತುಕೊಳ್ಳಲಿಚ್ಛಿಸುವವರಿಗೆ ೧ನೇ ತರಗತಿಯಿಂದ ಮೆಟ್ರಿಕ್ಯುಲೇಶನ್ ವರೆಗಿನ ಎಲ್ಲಾ ತರಗತಿಗಳು ಬರುವ ಜೂನ್ ತಾ ೭ನೇ ತಾರೀಕಿಗೆ ತೆರೆಯಲ್ಪಡುವವು. ಸರಕಾರದಿಂದ ಮಂಜೂರಾತಿ ಪಡೆದ ವಯಸ್ಕರ ಶಿಕ್ಷಣ ವಿಭಾಗ ಮತ್ತು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರ 'ಹಿಂದೀ ವರ್ಗಗಳು' ತೆರೆಯಲ್ಪಟ್ಟವೆ. ಸಾಕಷ್ಟು ಮಹಿಳೆಯರು ದೊರೆತಲ್ಲಿ ಅವರಿಗಾಗಿ ಸಂಜೆ ೪॥ ಗಂಟೆಯಿಂದ ೬॥ ಗಂಟೆಯ ತನಕ ಮೆಟ್ರಿಕ್ಯೂಲೇಶನ್ ಮತ್ತು E S.L C. ಕ್ಲಾಸುಗಳು ಜೂನ್ ತಾ. ೭ರಿಂದ ತೆರೆಯಲ್ಪಡುವವೆಂದೂ ಸೇರಲಿಚ್ಛಿಸುವವರು ಜೂನ್ ತಾ. ೫ರೊಳಗೆ ಸೇರಬೇಕಾಗಿಯೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಹಿಮಾಲಯ ಸ್ಕೌಟು ವುಡ್‌ಬೇಜ್: ತರಬೇತಿಗೆ ಕುನೂರಿಗೆ ತೆರಳಿದ್ದ ಶ್ರೀ। ಬಿ. ಡಿ. ಫಿಲಿಪ್ಸ್ ಮತ್ತು ಎಂ. ಶಿವರಾಮಾಚಾರ್ಯರು ತಮ್ಮ ತರಬೇತಿ ಮುಗಿಸಿ ಕಳೆದ ತಾ. ೨೧ರಂದು ಮಂಗಳೂರಿಗೆ ಮರಳಿದಾಗ ಜಿಲ್ಲಾ ಸ್ಕೌಟು ಕಮಿಶನರ್ ಡಾ। ಕೆ. ಗಿರಿಧರರಾಯರು ಅವರನ್ನು ಸ್ವಾಗತಿಸಿದರು.

ಸಂಗೀತ ಕಚೇರಿ: ತಾ. ೨೩ರಂದು ಸಂಜೆ ಕೊಡಿಯಾಲ ಬೈಲಿನ ಬೆಸೆಂಟ್ ಮಂದಿರದಲ್ಲಿ ಶ್ರೀ। ಎಂ. ಗೋವಿಂದ ನಂಬಿಯಾರರ ಸಂಗೀತ ಕಚೇರಿ ನಡೆಯಿತು.

ಫ್ರೆಂಡ್ಸ್ ಆರ್ಟ್ಸ್ ಕ್ಲಬ್: ಇದರ ದ್ವಿತೀಯ ವಾರ್ಷಿಕೋತ್ಸವ ಕಳೆದ ದಿನಾಂಕ ೨೩ರಂದು ಸಂಜೆ ಜೆಪ್ಪು ಕಾಸಿಯಾ ಹೈಸ್ಕೂಲಿನಲ್ಲಿ ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ। ಎಂ. ರಮಾನಾಥರು ವರದಿವಾಚನ ಮಾಡಿದರು. ಬಹುಮಾನ ವಿತರಣೆಯಾದ ಬಳಿಕ ಅಧ್ಯಕ್ಷರು ಭಾಷಣ ಮಾಡುತ್ತ ಸಮಾಜಸೇವೆ ಕೈಕೊಳ್ಳುವ ಆವಶ್ಯಕತೆಯನ್ನು ವಿವರಿಸಿದರು. ಅನಂತರ ನಾಟಕ ನೃತ್ಯಾದಿ ವಿನೋದಗಳು ನಡೆದುವು.

ಮದ್ಯನಿಷೇಧ ಬಂಧನಗಳು: ಕಳೆದ ತಾ. ೨೨ರಂದು ರಾತ್ರಿ ಮಂಗಳೂರು ಟೌನ್ ಪೋಲೀಸ್ ಸ್ಟೇಶನಿನ ಸಬ್ ಇನ್ಸ್‌ಪೆಕ್ಟರುಗಳಾದ ಶ್ರೀ।ಬಿ.ವೆಂಕೋಜಿ ರಾವ್, ಶ್ರೀ। ಕೆ. ವಿಠಲ ನಾಯಕ್, ಶ್ರೀ। ಸಿ. ಮೋಹನ ರಾವ್ ಮತ್ತು ಶ್ರೀ। ಪದ್ಮನಾಭನ್‌ರವರು ಮದ್ಯ ನಿಷೇಧ ಕಾನೂನು ಉಲ್ಲಂಘನೆಯ ಬಗ್ಗೆ ದಾಳಿ ನಡೆಸಿ ಬಿಜೈಯಲ್ಲಿ ಎರಡು ಬಾಟ್ಲಿ ಶರಾಬು ಸಹಿತ ನಾಗು ಹೆಂಗಸು ಎಂಬವಳನ್ನೂ, ಒಂದು ಬಾಟ್ಲಿ ಶರಾಬು ಮತ್ತು ಭಟ್ಟಿ ಇಳಿಸುವ ಸಲಕರಣಗಳ ಸಹಿತ ಸಾವೇರ್ ಸೋಜ ಮತ್ತು ಅವನ ಪತ್ನಿ ಸಿಸಿಲ ಎಂಬವರನ್ನೂ, ೧೦ ಬಾಟ್ಲಿ ಶರಾಬು ಸಮೇತ ಕದ್ರಿ ಬಂಗಲೆಯ ಬಳಿ ಹೊಟೇಲ್ ಕೀಪರ್ ಬಾಬು ಮತ್ತು ಕೃಷ್ಣನ್ ಕುಟ್ಟಿ ಎಂಬವರನ್ನೂ ಬಂಧಿಸಿರುವರು.

ತಾ. ೨೩ರಂದು ಸಂಜೆ ಪಿ. ಸಿ. ೫೬೩ ಶ್ರೀ। ಕಣ್ಣನ್‌ರವರು ಓಮಂಜೂರಿನಲ್ಲಿ ದಾಳಿ ನಡೆಸಿ ೨ ಬಾಟ್ಲಿ ಶರಾಬು ಸಹಿತ ಹೊಟೇಲ್ ಕೀಪರ್ ಅಲ್ಬರ್ಟ್ ಮಿಸ್ಕಿತರನ್ನು ಬಂಧಿಸಿರುವರು.

ರೋಟರಿ ಕ್ಲಬ್ಬಿನ ಸಭೆ: ಮಂಗಳೂರು ರೋಟರಿ ಕ್ಲಬ್ಬಿನ ಸಭೆಯೊಂದು ಕಳೆದ ತಾ. ೨೦ರಂದು ಸಂಜೆ ಸಿ. ಪಿ. ಸಿ. ಸಭಾ ಭವನದಲ್ಲಿ ಶ್ರೀ। ವಿ.ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿದಾಗ, ಮಂಗಳೂರಲ್ಲಿ ಸುಮಾರು ೩ ತಿಂಗಳಿಂದ ಆನೆಕಾಲು ರೋಗದ ಪರಿಶೀಲನೆ ನಡೆಸುತ್ತಿರುವ ಢಿಲ್ಲಿಯ ಭಾರತ-ಮಲೇರಿಯಾ ಸಂಸ್ಥೆಯ ಅಸಿಸ್ಟಾಂಟ್ ಡೈರೆಕ್ಟರ್ ಡಾ। ಎ. ಕೆ. ಕೃಷ್ಣ ಸ್ವಾಮಿಯವರು 'ಕ್ರಿಮಿಗಳು ಮತ್ತು ರೋಗಗಳು' ಎಂಬ ವಿಷಯದಲ್ಲಿ ವಿಚಾರ ಪರಿಪ್ಲುತ ಭಾಷಣವಿತ್ತರು. ಜಿಲ್ಲಾ ಮಲೇರಿಯಾ ಆಫೀಸರರಾದ ಡಾ। ಎಚ್. ಎಸ್. ನಾಯ್ಕರು, ಜಿಲ್ಲೆಯಲ್ಲಿ ಮಲೇರಿಯಾ ಖಾತೆಯು ಕೈಕೊಂಡ ಕಾರ್ಯಕಲಾಪಗಳನ್ನು ವಿವರಿಸಿದರು. ಅಧ್ಯಕ್ಷ ಭಾಷಣವಾದ ಮೇಲೆ ಕಾರ್ಯದರ್ಶಿ ಶ್ರೀ। ಕೆ. ವಿಶ್ವನಾಥ ಕಾಮತರು ಧನ್ಯವಾದವಿತ್ತರು. ಡಾ। ಕೃಷ್ಣ ಸ್ವಾಮಿ

ಸಾಯಂಕಾಲದಲ್ಲಿ ಸುಮಾರು ೬-೩೦ ಗಂಟೆಗೆ ಎಲ್ಲರೂ ಪ್ರಾರ್ಥನಾ ಸ್ಥಳಕ್ಕೆ ತೆರಳಿದರು. ಸುಮಾರು ಒಂದು ಲಕ್ಷಕ್ಕೂ ಮಿಕ್ಕಿ ಜನರಿದ್ದರು. ಪ್ರಾರ್ಥನೆಯಾದ ನಂತರ ಪ್ರವಚನವನ್ನು ಮಾಡುತ್ತಾ "ಭೂದಾನಕ್ಕೆ ಭೂಮಿಯನ್ನು ಕೊಡದವರೂ ದೇಶದ್ರೋಹಿಗಳೇ" ಎಂದು ವಿನೋಬಾಜಿಯವರು ಹೇಳಿದರು. ಆ ಬಳಿಕ ಪಂಡಿತ ಜವಾಹರಲಾಲಜಿಯವರು ಮಾತನಾಡಿದರು. ನಮ್ಮೊಳಗಿನ ಭೇದ ಭಾವನೆಗಳನ್ನು ತ್ಯಜಿಸಿ ನಾವೆಲ್ಲರು ಸೇರಿ ಹೊಸ ಭಾರತವನ್ನು ನಿರ್ಮಿಸಲೆತ್ನಿಸಬೇಕು. ನಮ್ಮಲ್ಲಿ ಮಾನಸಿಕ ಸೌಹಾರ್ದವು ಬೆಳೆಯಬೇಕು. ಇಲ್ಲವಾದರೆ ಅಣುಶಕ್ತಿಯು ಚಿಕ್ಕಪ್ಪ-'ಚಚಾ',ಹೈಡ್ರೊಜನ್ ಬೊಂಬಿನಂಥಾ ಭಯಂಕರ ವಸ್ತುಗಳನ್ನು ಇದಿರಾಡುವುದಸಾಧ್ಯವೆಂದು ಹೇಳಿ ಭಾಷಣವನ್ನು ಮುಗಿಸಿದರು. ಸಮ್ಮೇಲನದ ಅಂದಿನ ಕಾರ್ಯಕ್ರಮವೂ ಕೊನೆಗೊಂಡಿತು.

For Your Requirements

IN

Selected Cashew Kernels AND Pure Cashewnut Shell Oil

Please Contact:

MIZAR GOVINDA ANNAPPA PAI & SONS

Manufacturers & Exporters,

Post Box No. 108,

MANGALORE - 1.

Office: 63, 63-A
Telephones: Factory: 204
After Hrs: 204-A

Telegrams: "VIJAI" Mangalore.

No Deserving Customer Ever Goes Disappointed!

Jaya Laxmi Bank, Limited.

Estd: 1923

HEAD OFFICE: **MANGALORE.**

N. Rama Rao, B. A., B. L., CHAIRMAN. Board of Directors. PHONE: 189

Gopal Rao Karnad, B. A., MANAGER. Head Office. PHONE: 94

Courteous, Efficient Service,
To A Truly Cosmopolitan Public
Lucrative Deposit Rates ....
.... **Easy Lending Terms**

For particulars, please call at any Branch of the Bank

BRANCHES

MANGALORE, PUTTUR, MANJESHWAR, KUMBLA,
KASARAGOD (South Kanara)
CANNANORE, KUNDOTTI, MALAPPURAM (Malabar)
MUDIGERE, CHIKMAGALORE (Mysore)

ಯವರ ಭಾಷಣಕ್ಕೆ ಮೊದಲು 'ತಾಹಿತಿ' ದ್ವೀಪದಲ್ಲಿ ಕೈಕೊಂಡ ಆನೆಕಾಲು ರೋಗ ನಿರೋಧ ಕಾರ್ಯಕ್ರಮದ ಕುರಿತಾದ ಚಲಚ್ಚಿತ್ರ ಪ್ರದರ್ಶಿಸಲಾಗಿತ್ತು.

ನೃತ್ಯ ಪ್ರದರ್ಶನ: ಬಿ. ಇ. ಎಂ. ಹೈಸ್ಕೂಲಿನ ಸಹಾಯಾರ್ಥ ನಡೆಯುವ ಫನ್‌ಫೇರ್ ಮತ್ತು ಎಕ್ಸಿಬಿಷನ್‌ದಲ್ಲಿ



ಮಾಸ್ಟರ್ ಬಿ. ಶೇಷಗಿರಿ ಪಡಿಯಾರ್.

ಕಳೆದ ತಾ. ೨೩ನೇ ರವಿವಾರ ರಾತ್ರಿ ಶ್ರೀ| ಭದ್ರಗಿರಿ ರಾಮಕೃಷ್ಣ ಪಡಿಯಾರರ ಪುತ್ರ ಮಾಸ್ಟರ್ ಬಿ. ಶೇಷಗಿರಿ ಪಡಿಯಾರನೆಂಬ ಹತ್ತು ವರ್ಷ ಪ್ರಾಯದ ಬಾಲಕನಿಂದ 'ಕಾಳಿಯ ಮರ್ದನ' ಎಂಬ ನೃತ್ಯವು ಮನಮೋಹಕವಾಗಿ ಅಭಿನಯಿಸ್ಪಟ್ಟಿತು. ಈ ಬಾಲಕನನ್ನು ಮಂಗಳೂರಿನ ನೃತ್ಯ ಶಿಕ್ಷಕರಲ್ಲೊಬ್ಬರಾದ ಶ್ರೀ| ಮುರಲೀಧರ್ ಅವರು ತರಬೇತಿಗೊಳಿಸಿದ್ದರು.

ದ. ಕ. ಮುನ್ಸಿಪಲ್ ಎಂಡ್ ಲೋಕಲ್ ಬೋರ್ಡ್ ವರ್ಕರ್ಸ್ ಯೂನಿಯನ್: ಇದರ ೭ನೇ ವಾರ್ಷಿಕ ಮಹಾಸಭೆಯು ಕಳೆದ ತಾ. ೧೯ರಂದು ನಗರ ಸಭಾ ಉಪಾಧ್ಯಕ್ಷ ಶ್ರೀ| ಬಿ. ಎಸ್. ಭಾಸ್ಕರ ರೈ, ಬಿ. ಎ., ಎಲ್ ಎಲ್. ಬಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ| ಎ. ಶಾಂತಾರಾಮ ಪೈಗಳು ಸ್ವಾಗತ ಭಾಷಣ ಮಾಡಿದ ಮೇಲೆ ಕಾರ್ಯದರ್ಶಿ ಶ್ರೀ| ಕೆ. ಮೋನಪ್ಪ ಶೆಟ್ಟರು ಸಂಘದ ಗತವರ್ಷದ ವರದಿ ಮತ್ತು ಲೆಕ್ಕ-ಪತ್ರಗಳನ್ನು ಸಭೆಯ ಮುಂದಿಟ್ಟು ಅವು ಮಂಜೂರು ಮಾಡಲ್ಪಟ್ಟವು. ಮುನ್ಸಿಪಲ್ ಮಜೂರರ ಅತ್ಯಾವಶ್ಯಕ ಕೇಳಿಕೆಗಳನ್ನೊಳಗೊಂಡ ನಿರ್ಣಯಗಳಾಗಿ ಮುಂದಿನ ವರ್ಷಕ್ಕೆ ಶ್ರೀ| ಎ. ಶಾಂತಾರಾಮ ಪೈ—ಅಧ್ಯಕ್ಷ, ಶ್ರೀ| ಕೆ. ಓಡಿ—ಉಪಾಧ್ಯಕ್ಷ, ಶ್ರೀ| ಕೆ. ಮೋನಪ್ಪ ಶೆಟ್ಟಿ—ಪ್ರಧಾನ ಕಾರ್ಯದರ್ಶಿ, ಶ್ರೀ| ಕೆ. ಕಿನ್ನಿಗ—ಸಹ ಕಾರ್ಯದರ್ಶಿ, ಶ್ರೀ| ಯು. ಪದ್ಮಪ್ಪ—ಕೋಶಾಧಿಕಾರಿಯಾಗಿರುವ ೧೭ ಮಂದಿಯ ಆಡಳ್ತ ಸಮಿತಿ ಚುನಾಯಿಸಲ್ಪಟ್ಟಿತು. ಅಧ್ಯಕ್ಷ ಭಾಷಣವಾಗಿ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಬೊಕ್ಕಪಟ್ಣ ಮುನ್ಸಿಪಲ್ ಹಾ| ಎ| ಶಾಲಾ ಹಳೆ ವಿದ್ಯಾರ್ಥಿ ಸಂಘ: ಇದರ ತೃತೀಯ ವರ್ಷದ ಪ್ರಥಮ ಸಭೆ ಅದೇ ಶಾಲೆಯಲ್ಲಿ ಇತ್ತೀಚೆಗೆ ಜರಗಿದಾಗ ಮುಂದಿನ ವರ್ಷಕ್ಕೆ ಶ್ರೀ| ಜೆ. ಎ. ಮಾಬೆನ್—ಅಧ್ಯಕ್ಷ, ಶ್ರೀ| ಬಿ. ಜಗನ್ನಾಥ ಶೇಟ್—ಉಪಾಧ್ಯಕ್ಷ, ಶ್ರೀ| ಬಿ. ಸೀತಾರಾಮ—ಕಾರ್ಯದರ್ಶಿ, ಶ್ರೀ| ಬಿ. ಜನಾರ್ಧನ—ಜತೆಕಾರ್ಯದರ್ಶಿ, ಶ್ರೀ| ಕೆ. ಸುಬ್ರಾಯ—ಕೋಶಾಧಿಕಾರಿಗಳಾಗಿ ಕಾರ್ಯಕಾರಿ ಮಂಡಳಕ್ಕೆ ಆರಿಸಲ್ಪಟ್ಟರು. ದ್ವಿತೀಯ ವಾರ್ಷಿಕೋತ್ಸವದ ಲೆಕ್ಕಪತ್ರ ಪರಿಶೋಧನೆಯಾದ ನಂತರ ಲಘು ಫಲಾಹಾರದೊಂದಿಗೆ ಸಭೆ ಅಂತ್ಯಗೊಂಡಿತು.

ಅನ್ನದಾನ: ಕೊಟೆಚ್ಚೇರಿ ನಾರಾಯಣ ಅನಂತ ಶ್ಯಾನುಭೋಗ್ ಮತ್ತು ಕಂಪೆನಿ ಇವರು ಚಿ| ರವೀಂದ್ರನ ಬ್ರಹ್ಮೋಪದೇಶದ ಗೌರವಾರ್ಥ ಮಂಗಳೂರಿನ ಸ್ವಾಮಿ ಶ್ರದ್ಧಾನಂದ ಸೇವಾಶ್ರಮದ ಮಕ್ಕಳಿಗೆ ಕಳೆದ ತಾ. ೨೩ರಂದು ಭೋಜನವಿತ್ತರು.

ಸಹಕಾರಿ ಗೃಹ ಕೈಗಾರಿಕೆ: ಹಣ್ಣುಹಂಪಲುಗಳು ಮೀನು, ಹಾಲಿನ ಪದಾರ್ಥಗಳನ್ನು ಕೆಡದೆ ಸಂರಕ್ಷಿಸುವ ಸಹಕಾರಿ ಗೃಹ ಕೈಗಾರಿಕೆಯೊಂದನ್ನು ಆರಂಭಿಸುವರೆ ವಿಚಾರ ವಿನಿಮಯ ನಡೆಸಲು ಕಳೆದ ತಾ. ೧೮ರಂದು 'ಕರ್ಕೇರಾ ಕೊಟೇಜ್'ದಲ್ಲಿ ಶ್ರೀ| ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಒಂದು ಸಭೆ ಜರಗಿತು. 'ದಕ್ಷಿಣ ಕನ್ನಡ ಸಹಕಾರೀ ಕೈಗಾರಿಕೆ' ಎಂಬ ಹೆಸರಲ್ಲಿ ಕೈಗಾರಿಕೆ ಆರಂಭಿಸಬೇಕೆಂದೂ, ಈ ಕೈಗಾರಿಕೆಗೆ ಸಂಬಂಧಪಟ್ಟ ಆಫೀಸು ಮಂಗಳೂರಿನಲ್ಲಿ ಒಂದು ಯುಕ್ತ ಕಂಡ ಸ್ಥಳದಲ್ಲಿ ಏರ್ಪಡಿಸಬೇಕೆಂದೂ, ಆರಂಭದಲ್ಲಿ ಹಣ್ಣುಹಂಪಲುಗಳನ್ನು ಕೆನ್ ಮಾಡುವ, ಡೈರಿ ಫಾರ್ಮೊಂದನ್ನು ತೆರೆದು ಹಾಲಿನ ಪದಾರ್ಥಗಳನ್ನು ತಯಾರಿಸುವ ಮತ್ತು ಜೇನು ಸಾಕಣೆಗಳನ್ನು ತೆರೆಯುವುದಾಗಿಯೂ ನಿರ್ಣಯಿಸಲಾಯಿತು. ಮಂಗಳೂರಿನ ಕೋ-ಆಪರೇಟಿವ್ ಸೊಸೈಟಿಗಳ ಡಿಪ್ಯೂಟಿ ರಿಜಿಸ್ಟ್ರಾರರು ಇದಕ್ಕೆ ಅವಶ್ಯವಿರುವ ನಿಬಂಧನೆಗಳನ್ನು ತಿಳಿಸಬೇಕೆಂದು ಅವರನ್ನು ಕೇಳಿಕೊಳ್ಳುವ ಮತ್ತು ಈ ಸಂಬಂಧವಾಗಿ ಢಿಲ್ಲಿಯ ಇಂಡಸ್ಟ್ರಿಯಲ್ ಟ್ರೈಬ್ಯೂನಿನ ಚೆಯರ್ಮೆನರಿಗೆ ಬರೆದು ಕೇಂದ್ರ ಸರಕಾರದಿಂದ ಈ ಕೈಗಾರಿಕೆಗೆ ಅವಶ್ಯವಿರುವ ಸಹಾಯ ತರಿಸುವರೆ ಶ್ರೀ| ಬಿ. ಆರ್. ಕರ್ಕೇರರಿಗೆ ಅಧಿಕಾರ ಕೊಡುವ ಗೊತ್ತುವಳಿಗಳೂ ಆದುವು. ಕೈಗಾರಿಕೆಗೆ ಮದ್ರಾಸು ಸರಕಾರದಿಂದ ರಫ್ತು ಲೈಸೆನ್ಸ್ ಮತ್ತು ವ್ಯಾಪಾರೀ ಸವಲತ್ತುಗಳನ್ನು ತರಿಸುವರೆ ಮದ್ರಾಸು ಸರಕಾರದೊಡನೆ ಸಂಪರ್ಕ ಬೆಳೆಸುವ ಹೊಣೆಗಾರಿಕೆಯನ್ನೂ ಶ್ರೀ| ಬಿ. ಆರ್. ಕರ್ಕೇರರಿಗೆ ಕೊಡಲಾಯಿತು.

ನೃತ್ಯಾಭಿನಯ: ಸ್ಥಳೀಯ ಸಂಗೀತ ಕಲಾ ಪ್ರಸಾರಕ ಸಂಘದ ಆಶ್ರಯದಲ್ಲಿ ಮಂಗಳೂರಿನ ಗಣಪತಿ ಹೈಸ್ಕೂಲಿನ ಶಾರದಾ ಸದನದಲ್ಲಿ ಕಳೆದ ತಾ. ೨೨ರಂದು ಸಂಜೆ ೯ ವರ್ಷದ ಬಾಲಿಕೆ ಕುಮಾರಿ ಶೋಭಾ ಧಾರೇಶ್ವರ್ ಉತ್ತಮ ನೃತ್ಯಾಭಿನಯವನ್ನಿತ್ತಳು. ಅರಿಪು, ಜತ್ತಿಸ್ವರಂ, ಏತ್ತನೈ ಶೊನ್ನಾಲುಂ. ಮಧುರಾ ನಗರಿಯಾ, ರಾರಾ ಮುರಲೀಧರ, ಶಾರಿ, ಆಡುವೋಮೆ, ನಟನ ಮಾಡಿನಾರ್ ಎಂಬ ನೃತ್ಯಗಳನ್ನು ಆಕೆ ಭಾವಪೂರ್ಣ ಅಭಿನಯದಿಂದ ಲಯಬದ್ಧವಾಗಿ ಆಡಿ ತೋರಿಸಿದಳು. ನೃತ್ಯ ಪ್ರದರ್ಶನಕ್ಕೆ ಕೂಡಿದ ಕಿಕ್ಕಿರಿದ ಜನ ಸಂದಣಿಯು ಈ ಬಾಲಿಕೆಯ ಕಲಾ ಪ್ರೌಢಿಮೆಯನ್ನು ಮನವಾರೆ ಪ್ರಶಂಸಿತು. ಕುಮಾರಿ ಶೋಭಾ ಧಾರೇಶ್ವರ್ ಈಕೆ ಮುಂಬಾಯಿಯ ಶ್ರೀ| ಅನಂತ ಎಸ್. ಧಾರೇಶ್ವರರ ದತ್ತ ಪುತ್ರಿ ಮತ್ತು ಮುಂಬಾಯಿಯ ರೂಪಕಲಾ ಕೇಂದ್ರದ ಶ್ರೀ| ಜಿ. ವಿ. ರಮಣಿ ಮತ್ತು ಶ್ರೀ| ಕರುಣಾಕರ ಪಣಿಕ್ಕರರ ಶಿಷ್ಯೆ. ನೃತ್ಯ ಪ್ರದರ್ಶನಕ್ಕೆ ಹಿಮ್ಮೇಳದ ಸಂಗೀತವನ್ನು ಮಂಗಳೂರಿನ ಲಲಿತ ಕಲಾ ಕೇಂದ್ರದ ನಾಟ್ಯಾಚಾರ್ಯ ಶ್ರೀ| ರಾಜನ್ ಅಯ್ಯರ್ ಮತ್ತು ಪಾರ್ಟಿಯವರು ಒದಗಿಸಿದ್ದರು.

ವಾರ್ಷಿಕೋತ್ಸವ: ಶ್ರೀ ಮಂಜುನಾಥ ಕೃಪಾಪೋಷಿತ ನಾಟಕ ಸಭಾ ಮಂಗಳೂರು ಇದರ ೨೨ನೇ ವಾರ್ಷಿಕೋತ್ಸವವು ಕಳೆದ ತಾ. ೨೩ರಂದು ಸಂಜೆ ಗಣಪತಿ ಹೈಸ್ಕೂಲಿನ ಶಾರದಾ ಸದನದಲ್ಲಿ ಶ್ರೀ| ಎನ್. ಎಸ್. ಸುವರ್ಣ ಬಿ. ಎ. ಬಿ. ಎಲ್., ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರ ಪ್ರಾಸ್ತಾವಿಕ ಭಾಷಣ, ವಾರ್ಷಿಕೋತ್ಸವಕ್ಕೆ ಯಶಕೋರಿ ಬಂದ ಸಂದೇಶಗಳ ವಾಚನವಾದ ಬಳಿಕ ಸಂಘದ ಕಾರ್ಯದರ್ಶಿ ಶ್ರೀ| ವಿ. ಆರ್. ಪೆರೋಡಿಯವರು ಗತವರ್ಷದ ವರದಿ ಓದಿದರು. ಆ ಮೇಲೆ

ಪ್ರೇಮ ಸಾಮ್ರಾಜ್ಯ

(2ನೇ ಪುಟದಿಂದ)

ನಾನು ಕೊಂದಿದ್ದೇನೆ. ನಾನು ಸುಖದಿಂದ ಸಾಯುವೆನು........ನಿನ್ನ ಹಾದಿಯನ್ನು ಕಾಯುತ್ತ ಮೇಲೆ ಕೂಡುವೆನು. ಅಲ್ಲಿ ಭೇಟಿಯಾಗೋಣ, ನಗೋಣ, ಆಡೋಣ........ಕಣ್ಣೀರನ್ನು ಒರಸಿಕೊ. ಅಡವಿಯಲ್ಲಿ ಯಾವ ಪ್ರಕಾರ ನಗುತ್ತಲಿದ್ದೆಯೋ, ಹಾಗೆಯೇ ಒಮ್ಮೆ ನಗು, ನೋಡೋಣ....ನಿನ್ನ ಪ್ರೀತಿಗಾಗಿ ನಾನು ಸಾಯುತ್ತಲಿದ್ದೇನೆ. ಮಂಗಳ್ಯಾನು ನಿನ್ನನ್ನು ಎಂದಾದರೂ ಹೊಡೆದಿದ್ದರೆ ಅದನ್ನು ಮರೆತುಬಿಡು............ಶುಕ್ರೀ, ಒಂದು ದಿನ ನಿನ್ನನ್ನು ಗಿಡಕ್ಕೆ ಕಟ್ಟಿ ನಾನು ಮಲಗಿದ್ದೆ. ನಾನು ಸೆರೆಕುಡಿದು ಬಂದಿದ್ದೆ; ಮನುಷ್ಯತ್ವವನ್ನು ಕಳೆದುಕೊಂಡು ಪಶುವಾಗಿದ್ದೆ. ಆದರೆ ಮೂರನೆ ದಿನ ನಾನು ನಿನ್ನನ್ನು ಮುದ್ದಿಟ್ಟೆ........ ನೀನು, ಮಂಗಳ್ಯಾನು ಮಾಡ್ರಿದ ಕೆಟ್ಟತನವನ್ನು ಮರೆ; ಒಳ್ಳೆಯದನ್ನು ನೆನಸು ...." ಅವನಿಗೆ ಮುಂದೆ ಮಾತನಾಡಲು ಸಾಧ್ಯವಾಗಲಿಲ್ಲ.

"ನಾನು ಹೇಗೆ ಜೀವಿಸಲಿ? ಜೈಲಿನಲ್ಲಿ, ನಾನು ಅಲ್ಲಿ, ನೀವು ಇಲ್ಲಿ, ಇದೇ ಪ್ರಕಾರವೇ ಇದ್ದಿದ್ದರೂ ಸ್ವಲ್ಪವಾದರೂ ಆಶೆಯಿತ್ತು, ಆದರೆ ನೀವು ಹೊರಟುಹೋಗುವಿರಿ. ನನ್ನ ಪ್ರಾಣವು ಹೋಗಲಿ!.... ...." ಈ ಪ್ರಕಾರ ಮಾತನಾಡುತ್ತ ಶುಕ್ರಿಯು ಅಳಹತ್ತಿದಳು.

* * * *

ಫಾಶಿಯಾಗಲು ಎರಡು ದಿನಗಳ ಅವಕಾಶವಿತ್ತು. ಶುಕ್ರಿಯು ಊಟವನ್ನು ಬಿಟ್ಟಿದ್ದಳು. ಅವಳ ಪ್ರಾಣವೂ ಹೋಗಬೇಕೆಂದು ಆಶಿಸಿದ್ದಳು. ಮಂಗಳ್ಯಾನು ಮತ್ತನಾಗಿದ್ದನು. ಅವನು ಹಾಡುತ್ತಿದ್ದನು:

ನಿನ್ನ ನನ್ನ ಪ್ರೀತಿ
ನನಗೆ ಇಲ್ಲ ಭೀತಿ.
ಫಾಸಿ ಹಗ್ಗ ಹಾರ
ಕೂಡಿಕೊಳ್ಳೋಣ ಬಾರ.

* * * *

ಮಂಗಳ್ಯಾನ ಮರಣ ಸಮಯವು ಸಮೀಪಿಸಿತ್ತು.

"ದೇವರ ನಾಮವನ್ನು ಸ್ಮರಿಸು," ಎಂದು ಶಿಪಾಯಿಯು ಹೇಳಿದನು.

"ನಾನು ದೇವರ ಹೆಸರನ್ನೇಕೆ ಉಚ್ಚರಿಸಲಿ? ನಾನೇನು ಪಾಪಮಾಡಿರುವೆನೆ? ಪಾಪಮಾಡಿದವರು ದೇವರ ಹೆಸರನ್ನು ಉಚ್ಚರಿಸುವರು. ನಾನು ಶುಕ್ರಿಯ ಹೆಸರನ್ನು ಉಚ್ಚರಿಸುವೆನು. ನಾವು ಮೇಲೆ ಕೂಡೋಣ, ಅವಳು ಉಣ್ಣುವದಿಲ್ಲವೆಂದು ಕೇಳುತ್ತೇನೆ. ನನ್ನ ಕೈಯಿಂದ ಪ್ರೀತಿಯ ಹೊಡೆತವು ಅವಳಿಗೆ ಸಿಗದ ವಿನಹ ಅವಳ ಹೊಟ್ಟೆ ತುಂಬುವುದಿಲ್ಲ. ಅವಳು ಇಲ್ಲಿ ಹೇಗೆ ಇದ್ದಾಳು?"

ಅಂದು ಬೆಳಕು ಹರಿದ ಕೂಡಲೇ ಅವನನ್ನು ಹೊರಗೆ ತಂದರು. ಕ್ಷಣದಲ್ಲಿ ಕಾರ್ಯವೆಲ್ಲ ತೀರಿತು.

ಇತ್ತ ಕಡೆ ಹೆಂಗಸರ ಕೋಣೆಯಲ್ಲಿ ಶುಕ್ರಿಯು ಮಲಗಿದ್ದಳು. ಅವಳು ಹಾಸಿದ ಕಂಬಳಿಯ ಮೇಲೆಯೇ ಬಿದ್ದಿದ್ದಳು. ಆದರೆ ಅವಳನ್ನು ಎಬ್ಬಿಸಲು ಹೋದಾಗ ಅಲ್ಲಿದ್ದುದು ಮೃತ-ಶರೀರವು ಮಾತ್ರ. ಪ್ರಾಣಪಕ್ಷಿಯು ಹೊರಟು ಹೋಗಿತ್ತು.

ಎರಡು ಪಾರಿವಾಳಗಳು ಪ್ರೇಮಸಾಮ್ರಾಜ್ಯದಲ್ಲಿ ಹಾರಿಹೋಗಿದ್ದುವು.

(ಸಾನೆ ಗುರೂಜಿಯವರ ಕೃತಿಗಳಲ್ಲಿಯ 'ಶುಕ್ರಿ'ಯಿಂದ ಆಯ್ದುದು.)

H. Shridhar Pai.

ಸಾಮರ್ಥ್ಯ — ಸಾಲಗಳು

ಒಬ್ಬನ ಯೋಗಕ್ಷೇಮ ಮತ್ತು ಸಾಮರ್ಥ್ಯ ಅಥವಾ ಕ್ರಿಯಾಶಕ್ತಿಯು ಅನೇಕ ಸಲ, ಅವನ ಚಿಲ್ಲರೆ ಸಾಲಗಳ ಕಾರಣದಿಂದ ಅತಿಶಯವಾಗಿ ಕುಂದುತ್ತದೆ. ಆದರೆ, ಆ ಚಿಕ್ಕ ಪುಟ್ಟ ಸಾಲಗಳನ್ನೆಲ್ಲ ಒಂದುಗೂಡಿಸಿ, ಅನುಕೂಲ ವ್ಯವಸ್ಥಿತ ಕಂತುಗಳಿಂದ ಸಲ್ಲಿಸುವುದಾದರೆ, ಸಂಕಷ್ಟ ಪರಿಹಾರವಾಗಿ, ಕ್ಷೇಮವೂ ಕ್ರಿಯಾಶಕ್ತಿಯೂ ತಿರಿಗಿ ಲಭಿಸುವುವು. ತಿಂಗಳಿಗೆ ರೂ. ೨೫೦/—ಅಥವಾ ಹೆಚ್ಚು ತಲಬು ಇರುವ ಆಫೀಸರರು, ಅವರ ಮಾಸಿಕ ತಲಬಿನ ಅರು ಪಾಲು ಅಧಿಕ ಸಾಲವನ್ನೆತ್ತಿ, ಮೂವತ್ತಾರು ಮಾಸಿಕ ಕಂತುಗಳಿಂದ ಈ ಸಾಲವನ್ನು ತಿರಿಗಿ ಸಲಿಸುವ ಒಂದು ಯೋಜನೆಯನ್ನು ನಾವು ತಯಾರಿಸಿರುವೆವು. ಒಂದು ವಿಮಾ ಪೊಲಿಸಿ ಮತ್ತು ಜಾಮೀನುದಾರರು ಈ ಸಾಲದ ಹೊಣೆಗೆ ಅವಶ್ಯ.

ಹೆಚ್ಚಿನ ವಿವರಗಳಿಗೆ, ನಿಮಗೆ ಸಮೀಪವಿರುವ ನಮ್ಮ ಬೇಂಕಿನ ಆಫೀಸಿನಲ್ಲಿ ವಿಚಾರಿಸಿರಿ:

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: ೧೯೨೫.) (ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

The Canara Industrial & Banking Syndicate, Ltd.

Estd: 1925.) (Head office: **UDIPI**, S. India.

ಶ್ರೀಗಳಾದ ಎಸ್. ಎನ್. ಹೊಳ್ಳ ಮತ್ತು ಎಂ. ಬಿ. ನರ್ಸಪ್ಪನವರು ಸಂಘದ ಏಳ್ಗೆಯ ಬಗ್ಗೆ ಹಿತಸೂಚನೆಗಳನ್ನಿತ್ತು ಭಾಷಣವಿತ್ತರು. ಪಶ್ಚಿಮ ಕರಾವಳಿ ಪ್ರಾಂತ ರಚನೆಯ ಚಳುವಳಿಯನ್ನು ಖಂಡಿಸುವ ಮತ್ತು ಶೀಘ್ರದಲ್ಲೇ ಕರ್ನಾಟಕ ಪ್ರಾಂತರಚನೆಯಾಗಿ ದಕ್ಷಿಣ ಕನ್ನಡ ಜಿಲ್ಲೆಯು ಆ ಪ್ರಾಂತದಲ್ಲಿ ಸೇರ್ಪಡೆಯಾಗಬೇಕೆಂದು ಕೇಳಿಕೊಳ್ಳುವ ಠರಾವನ್ನು ಸಭೆಯ ಪರವಾಗಿ ಶ್ರೀ| ಬಿ. ವಿ. ಬಾಳಿಗರು ಮಂಡಿಸಿದರು. ಅಧ್ಯಕ್ಷರ ಸಮಯೋಚಿತ ಭಾಷಣ, ಧನ್ಯವಾದಾರ್ಪಣೆಯಾದ ಮೇಲೆ ವಿವಿಧ ವಿನೋದಾವಳಿ ಕಾರ್ಯಕ್ರಮ ಜರಗಿತು. ಮುಂಬಾಯಿಯ ಶ್ರೀ| ಎಚ್. ತಾರಾನಾಥ ರಾವ್ ಪಂಡಿತ್ ಅವರಿಂದ ತಬ್ಲಾ ಗತ್ತೋಡಾ, ಶ್ರೀ| ಯು. ಎಸ್. ಕೃಷ್ಣರಾಯರ ಶಿಷ್ಯೆ ಕುಮಾರಿ ಯಶೋಧರಾಳಿಂದ ಎರಡು ನೃತ್ಯಗಳು ಮತ್ತು 'ದಳ್ವಾಲಿ ದೀಕ್ಷಿತ್' ಎಂಬ ಕನ್ನಡ ಪ್ರಹಸನಗಳು ವಿನೋದಾವಳಿ ಕಾರ್ಯಕ್ರಮದಲ್ಲಿ ಸೇರಿದ್ದುವು.

ಇಲೆಕ್ಟೊರಲ್ ರೋಲ್: ೧೯೫೪ನೇ ವಾರ್ಷಿಕ ರಿವಿಜನ್ ಮೇರೆಗೆ ತಿದ್ದುಪಾಟ ಹೊಂದಿದ ಈ ಕೆಳಗೆ ಕಾಣಿಸಿದ ಕೊನ್ಸ್ಟಿಟೂಯೆನ್ಸಿಗಳ ಇಲೆಕ್ಟರಲ್ ರೋಲ್‌ಗಳನ್ನು ಆಯಾಯ ಕೊನ್ಸ್ಟಿಟ್ಯೂಯೆನ್ಸಿ ಎದುರುಗಡೆ ಕಾಣಿಸಿದ ಆಫೀಸಿನಲ್ಲಿ ಕಳೆದ ತಾ. ೨೧ರಂದು ಬಹಿರಂಗವಾಗಿ ಪ್ರಕಟಿಸಲಾಗಿದೆಯೆಂದೂ, ಅದರಲ್ಲೇನಾದರೂ ತಿದ್ದುಪಡಿ ಅವಶ್ಯ ಎಂದು ಕಂಡುಬಂದಲ್ಲಿ ಅದನ್ನು ಸಂಬಂಧಪಟ್ಟ ಆಫೀಸರರಿಗೆ ಇದೇ ತಾ. ೧೧-೬-೫೪ರೊಳಗೆ ತಲಪುವಂತೆ ಕಳಿಸಬೇಕೆಂದು ಮಂಗಳೂರು ತಹಶಿಲ್ದಾರರು ತಮ್ಮದೊಂದು ಪ್ರಕಟಣೆಯಲ್ಲಿ ತಿಳಿಸಿರುವರು:

ಪಾರ್ಲಿಮೆಂಟರಿ

ದಕ್ಷಿಣ ಕನ್ನಡ (ದಕ್ಷಿಣ) ಪುತ್ತೂರು ಎಸೆಂಬ್ಲಿ ಕೊನ್ಸ್ಟಿಟ್ಯೂಯೆನ್ಸಿ ಕ್ಷೇತ್ರ ಸೇರಿ—ತಾಲೂಕು ಆಫೀಸು, ಮಂಗಳೂರು.

ಎಸೆಂಬ್ಲಿ

೧. ಮೂಲ್ಕಿ—ತಾಲೂಕು ಆಫೀಸು, ಮಂಗಳೂರು. ಸಬ್ ರಿಜಿಸ್ಟ್ರಾರರ ಆಫೀಸು, ಮೂಲ್ಕಿ.

೨. ಮಂಗಳೂರು (ಮಂಗಳೂರು ಮುನ್ಸಿಪಾಲಿಟಿ ರಹಿತ)—ತಾಲೂಕು ಆಫೀಸು, ಮಂಗಳೂರು.

೩. ಮಂಗಳೂರು (ಮಂಗಳೂರು ಮುನ್ಸಿಪಾಲಿಟಿ ಮಾತ್ರ)—ತಾಲೂಕು ಆಫೀಸು, ಮಂಗಳೂರು.

೪. ಪಾಣೆಮಂಗಳೂರು—ತಾಲೂಕು ಆಫೀಸು, ಮಂಗಳೂರು. ಸಬ್ ತಾಲೂಕು ಆಫೀಸು, ಬಂಟ್ವಾಳ.

ಮಹಾಸಭೆ: ಮಂಗಳೂರಿನ ಹಂಚಿನ ಮಜೂರರ ಸಂಘದ ೧೧ನೇ ವಾರ್ಷಿಕ ಮಹಾಸಭೆಯು ಕಳೆದ ತಾ. ೨೩ರಂದು ಬೆಳಿಗ್ಗೆ ಸಿರಿಯನ್ ಮಿಶನ್ ಎಲಿಮೆಂಟರಿ ಶಾಲೆಯಲ್ಲಿ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಶ್ರೀ| ಎಂ- ಎಚ್. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ ೧೧ ವರ್ಷಗಳಲ್ಲಿ ಸಂಘದ ಏಳ್ಗೆಗಾಗಿ ದುಡಿದು ಮೃತರಾದ ಸದಸ್ಯರ ಆತ್ಮಗಳಿಗೆ ಶಾಂತಿ ಕೋರಿ ೨ ನಿಮಿಷ ಮೌನ ಆಚರಿಸಲಾಯಿತು. ಗತವರ್ಷದ ಲೆಕ್ಕಪತ್ರಗಳು ಮಂಜೂರಾದ ಮೇಲೆ, ಮುಂದಿನ ವರ್ಷಕ್ಕೆ ಶ್ರೀ| ಬಾಲಚಂದ್ರ ಮೆನೊನ್ ಉಪಾಧ್ಯಕ್ಷರಾಗಿಯೂ ಶ್ರೀ|ಎ. ಶಾಂತಾರಾಮಪೈ ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು.

ಬ್ರಹ್ಮಕಲಶಾಭಿಷೇಕ: ಮಂಗಳೂರಿನ ಬಿಕರ್ನಕಟ್ಟೆ ಪದವಿನಲ್ಲಿ ಬ್ರಹ್ಮಸ್ಥಾನ ಎಂಬಲ್ಲಿ ಇದೇ ಕಳೆದ ತಾ. ೨೩ರಲ್ಲು ಶ್ರೀ|ನಾಗಬ್ರಹ್ಮ ದೇವರಿಗೆ ಇದರ ಮುಕ್ತೇಶ್ವರರು ಬ್ರಹ್ಮಕಲಶಾಭಿಷೇಕ, (ಗಂಗಾಭಿಷೇಕ)ವನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಿದರು.

ವಾರ್ಷಿಕೋತ್ಸವ: ಮೊಗವೀರ ಸ್ಟುಡೆಂಟ್ಸ್ ಯೂನಿಯನ್ ಮಂಗಳೂರು ಇದರ ೧೧ನೇ ವಾರ್ಷಿಕೋತ್ಸವವು ಕಳೆದ ತಾ. ೨೩ನೇ ರವಿವಾರ ಸಾಯಂಕಾಲ ೬ ಗಂಟೆಗೆ ಬೊಕ್ಕಪಟ್ಣದಲ್ಲಿರುವ ಮೊಗವೀರ ಲಿಟರರಿ ಯೂನಿಯನ್ ಕಟ್ಟಡದಲ್ಲಿ ಶ್ರೀ| ಡಿ. ಮೋಹನ ರಾವ್, ಎಡ್ವಕೇಟ್ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಕಳವು: ಕಳೆದ ತಾ. ೨೪ರಂದು ರಾತ್ರಿ ಹಂಪನಕಟ್ಟೆಯ ಕೆನರಾ ಜ್ಯುವೆಲ್ಲರ್ಸ್ ಚಿನಿವಾರು ಕಟ್ಟೆಯ ಮಾಡಿನ ಹಂಚುಗಳನ್ನು ತೆಗೆದು ಸೀಲಿಂಗಿಗೆ ಹಾಕಿದ ಬೀಗ ಒಡೆದು ಒಳನುಗ್ಗಿ ರೂ. ೪,೪೨೮ ಮೌಲ್ಯದ ೩೩ ಜೊತೆ ಬೆಂಡೋಲೆಗಳು ಮತ್ತು ೨ ಡಜನ್ ಉಂಗುರಗಳು, ಹರ್ ಪಿನ್‌ಗಳು, ಬ್ರೋಚುಗಳು, ಬಳೆಗಳು, ಬೆಳ್ಳಿಯ ಫೋಟೊಗಳು ಮೊದಲಾದುವನ್ನು ಕಳ್ಳರು ಕದ್ದೊಯ್ದಿರುವರು. ಮೂರು ಶೋಕೇಸ್‌ಗಳ ಗಾಜನ್ನು ಒಡೆದಿರುವರು. ರಾತ್ರಿ ಕಾಲದಲ್ಲಿ ಮೂವರು ಕಾವಲುಗಾರರಿದ್ದಾಗ್ಯೂ ಸದ್ದಾಗದಂತೆ ಕಳ್ಳರು ಈ ಸಾಹಸದ ಕಳ್ಳತನ ನಡೆಸಿರುವರು. ಪೋಲೀಸರಿಗೆ ದೂರು ಕೊಟ್ಟೊಡನೆ ಸಬ್ ಇನ್ಸ್‌ಪೆಕ್ಟರ್ ಶ್ರೀ|ಕುಂಞಕಣ್ಣನ್ ಮತ್ತು ಪಾರ್ಟಿಯವರು ಕಳ್ಳತನ ನಡೆದಲ್ಲಿಗೆ ಧಾವಿಸಿ ತನಿಖೆ ನಡೆಸಿರುವರು.

ಕಲ್ಕತ್ತೆಕ್ಕೆ ಪ್ರಯಾಣ: ಕಲ್ಕತ್ತಾದಲ್ಲಿ ಜರಗಲಿರುವ ಅಖಿಲ ಭಾರತ ಟ್ರೇಡ್ ಯೂನಿಯನ್ ಕೊನ್ಫರೆನ್ಸಿನಲ್ಲಿ ಭಾಗವಹಿಸಲು ದ. ಕ. ಜಿಲ್ಲಾ ಟ್ರೇಡ್ ಯೂನಿಯನ್ ಪ್ರತಿನಿಧಿಯಾಗಿ ಟ್ರೇಡ್ ಯೂನಿಯನ್ ಕೌನ್ಸಿಲಿನ ಅಧ್ಯಕ್ಷ ಶ್ರೀ| ಎ. ಶಾಂತಾರಾಮ ಪೈಯವರು ಕಳೆದ ತಾ. ೨೪ರಂದು ಕಲ್ಕತ್ತಕ್ಕೆ ತೆರಳಿರುವರು.

ಹಾವಿನ ಕಡಿತದಿಂದ ಪಾರಾದರು: ಬೋಳೂರು ಗ್ರಾಮ ಸಂಘದ ವಾರ್ಷಿಕೋತ್ಸವ ಕಳೆದ ತಾ. ೨೩ರಂದು ಲೇಬರ್ ಎಲಿಮೆಂಟರಿ ಶಾಲೆಯ ವಠಾರದಲ್ಲಿ ನಡೆದಾಗ ಅಧ್ಯಕ್ಷ ಸ್ಥಾನ ವಹಿಸಿದ ಡಾ| ನಾಗಪ್ಪ ಆಳ್ವರ ಕಾಲಿಗೆ ಒಂದು ಕೃಷ್ಣ ಸರ್ಪವು ಸುತ್ತಿಕೊಂಡು, ಸಕಾಲದಲ್ಲಿ ಕೆಲವರು ಸಮಯೋಚಿತ ಜಾಣ್ಮೆ ಪ್ರದರ್ಶಿಸಿ ಸರ್ಪದ ಕಣ್ಣಿಗೆ ಟಾರ್ಚ್ ಲೈಟ್ ಪ್ರಕಾಶ ಬೀರಿ ಅದು ಹರಿದು ಹೋಗುವಂತೆ ಮಾಡಿದರೆಂದು ಕೇಳಿಬರುತ್ತದೆ.

ಆರೋಪಿಗೆ ಶಿಕ್ಷೆ: ಮಂಗಳೂರಿನ ಇಂಪೀರಿಯಲ್ ಬೇಂಕಿನಿಂದ ಕಳೆದ ಜನವರಿ ತಿಂಗಳಲ್ಲಿ ಹಣ ಕಳವು ಮಾಡಿದರೆಂದು ಆರೋಪಿಸಲ್ಪಟ್ಟ ಇಬ್ಬರಲ್ಲಿ ಒಬ್ಬನಾದ ರಾಮ ಸ್ವಾಮಿ ಎಂಬವನಿಗೆ ಕಳೆದ ತಾ. ೨೫ರಂದು ೧೮ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಯಿತು.

ಅಮಲುಖೋರತನಕ್ಕೆ: ಕೆಲವು ದಿನಗಳ ಹಿಂದೆ ಅಮಲುಖೋರನಾಗಿದ್ದು ಫಳ್ನೀರಿನಲ್ಲಿ ಎ.ಎಸ್.ಪಿ.ಯವರ ಕಾರು ನಿಲ್ಲಿಸಿದ ಉಪೇಂದ್ರ ಪೈ ಎಂಬವರಿಗೆ ೫೦ ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು.

ಕೇಡಿಗೆ ಸಜೆ: ಬಂದರಿನಲ್ಲಿ ಕಳವು ಮಾಡಿ ಸಿಕ್ಕಿಬಿದ್ದ ಕೇಡಿ ಸೀದಿ ಬ್ಯಾರಿ ಎಂಬವನಿಗೆ ೧೮ ತಿಂಗಳ ಕಠಿಣ ಸಜೆ ವಿಧಿಸಲಾಗಿದೆ. ——



ಮಂಚಲಾ ಚಿತ್ರದಲ್ಲಿ.

ಕಾಣಿಕೆ ಕಂಡ ಕಣ್ಣಪ್ಪ

ಕರ್ಣಾಟಕದ ಹಲವು ಕೇಂದ್ರಗಳಲ್ಲಿ ಒಮ್ಮೆಲೇ ಪ್ರದರ್ಶನಕ್ಕೆ ಬಂದ ಗುಬ್ಬಿ ಕರ್ಣಾಟಕ ಫಿಲ್ಮ್ಸದವರ 'ಬೇಡರ ಕಣ್ಣಪ್ಪ' ಚಿತ್ರವು ಪ್ರದರ್ಶನವಾದಲ್ಲೆಲ್ಲಾ 'ಕನ್ನಡ ಚಿತ್ರಪ್ರಪಂಚಕ್ಕೆ ವಿನೂತನ ಅನುಭವ' ಎಂಬ ಪ್ರಶಂಸೆಗೆ ಪಾತ್ರವಾಗಿದೆ. ಸಾಹಿತಿಗಳು, ಕಲಾವಿದರು, ರಾಜಕಾರಣಿಗಳು, ಸಮಾಜ ಸೇವಕರು ಹೀಗೆ ಸಕಲ ರಸಿಕವೃಂದದ ಮನಮೆಚ್ಚಿಸಿದ ಈ ಚಿತ್ರ ಕನ್ನಡ ಚಿತ್ರಗಳ ಮೇಲ್ಮೆಯನ್ನು ಸಾರುವ ಶುಭ ಸಂಕೇತವೆಂದರೂ ಅತಿಶಯೋಕ್ತಿಯಾಗಲಾರದು.

ನಮ್ಮ ಚಿತ್ರಪ್ರೇಮಿಗಳಿಗೆ ಅಶ್ಲೀಲ, ಕಾಮಪ್ರಚೋದಕ, ಗಾಂಭೀರ್ಯರಹಿತ ಚಿತ್ರಗಳೆಂದರೆ ಹೆಚ್ಚು ಮೆಚ್ಚು ಎಂದು ಕೆಲವರು ಪ್ರಚಾರಮಾಡುವ ವಾದವನ್ನು ಅರ್ಥಶೂನ್ಯವೆಂದು 'ಬೇಡರ ಕಣ್ಣಪ್ಪ' ತೋರಿಸಿಕೊಟ್ಟಿದೆ. ಭಕ್ತಿರಸಪ್ರಧಾನವಾಗಿ ನವರಸಗಳಿಂದ ಕೂಡಿ ಉತ್ತಮ ಸಂಭಾಷಣೆ, ದೃಶ್ಯಾವಳಿ, ಅಭಿನಯಗಳಿಂದ ಕೂಡಿದ ಈ ಚಿತ್ರಕ್ಕೆ ಬೇರೆ ಬೇರೆ ಕೇಂದ್ರಗಳಲ್ಲಿ ದೊರೆತ ಪ್ರೋತ್ಸಾಹ ಕಾಣುವಾಗ, ಉತ್ತಮ ಚಿತ್ರಗಳಿಗೆ ಕನ್ನಡ ಜನರು ಬೆಲೆ ಕೊಡುತ್ತಾರೆ ಎಂಬುದು ಸ್ಪಷ್ಟವಾಗಿದೆ.

'ಬೇಡರ ಕಣ್ಣಪ್ಪ' ಚಿತ್ರಕ್ಕೆ ದೊರೆತ ಅಭೂತಪೂರ್ವ ಸ್ವಾಗತದಿಂದ ಹರ್ಷಿತರಾದ ಚಿತ್ರ ತಯಾರಕರು ಇನ್ನೂ ಉತ್ತಮವಾದ ಗೌರವಯುತವಾದ ಚಿತ್ರಗಳನ್ನೇ ಕನ್ನಡ ಕಲಾಪ್ರೇಮಿಗಳಿಗೆ ನೀಡುವ ಭರವಸೆ ಕೊಟ್ಟಿರುತ್ತಾರೆ.

'ಬೇಡರ ಕಣ್ಣಪ್ಪ' ಕನ್ನಡನಾಡಿನ ಚಿತ್ರರಂಗದಲ್ಲಿ ಹೊಸ ಅಧ್ಯಾಯ ಆರಂಭಿಸಲು ಮುಂದಾಗಿದೆ. ಕನ್ನಡ ಕಲಾಪ್ರೇಮಿಗಳು ಪ್ರೋತ್ಸಾಹ ನೀಡಿ ಇಂತಹ ಉತ್ತಮ ಚಿತ್ರಗಳ ತಯಾರಿಕೆ ಹೆಚ್ಚುವಂತೆ ಮಾಡಬೇಕು. ——

The Pangal Nayak Bank, Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(ಸ್ಥಾಪನೆ: 1920.)

ಸೇವಿಂಗ್ಸ್ ಬೇಂಕ್ ಖಾತೆಗೆ 2½% ಬಡ್ಡಿ ಕೊಡಲ್ಪಡುತ್ತದೆ.

ಚಿನ್ನಾಭರಣ ವ ಇತರ ಭದ್ರತೆಗಳ ಮೇಲೆ ಸಾಲ ಪಡೆಯಬಹುದು.

ಹೆಚ್ಚಿನ ಮಾಹಿತಿಗೆ ಸಮೀಪದ ಶಾಖೆಗಳಲ್ಲಿ ವಿಚಾರಿಸಿರಿ.

K. R. Kamath.

Agent, Hampankatta (Mangalore) Branch.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ. ಮತ್ತು ನೆತ್ತಿಯಲ್ಲಿಕೂದಲುಬರುತ್ತವೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.



(ಸ್ಪೆಶಲ್ ನಂ.೧. ಮೆಡಿಕೇಟೆಡ್)

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0 ಸಣ್ಣ ಬಾಟ್ಲಿಗೆ ರೂ. 2—0—0.

ಕ್ರಯ: ದೊಡ್ಡ ಬಾಟ್ಲಿಗೆ ರೂ. 5-6-0 ಮತ್ತು ಸಣ್ಣ ಬಾಟ್ಲಿಗೆ ರೂ. 3—7—6. (ಪೋಸ್ಟೇಜು ಪ್ಯಾಕಿಂಗ್ ಸಹಿತ) ಮನಿಯಾರ್ಡರ್ ಮಾಡಿರಿ.

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಜಿ. ಐ. ಪಿ.) ಮುಂಬಯಿ, ೧೪.

ಹೆತ್ತ ಹೆಮ್ಮಕ್ಕಳಿಗೆ

ತಾಯಿಯು—ಮಗಳಿಗೆ, ಅತ್ತೆಯು—ಸೊಸೆಗೆ, ಅಕ್ಕ—ತಂಗಿಗೆ ಹೇಳುವ ಮಾತು

ಯಂ. ವಿ. ಶಾಸ್ತ್ರೀ ಇವರ

ನವಜೀವಾತು

(ರಿಜಿಸ್ಟರು ಮಾಡಲ್ಪಟ್ಟಿದೆ.)

ಕೇವಲ ನಾಲ್ಕೇ ರೂಪಾಯಿಗಳಿಂದ ಬಾಣಂತಿತನದ ವಿಮೋಚನೆ—ನವಜೀವನದ ಪುನರ್ರಚನೆ.

ಹೆಚ್ಚಿನ ಮಾಹಿತಿಗೆ: **ಯಂ. ವಿ. ಶಾಸ್ತ್ರೀ**

ಕದಿರೆ :: ಮಂಗಳೂರು-2

ಈ ವಾರದ ಭವಿಷ್ಯ

★ ವಾರದ ಪ್ರಭಾತ ಪಂಚಾಂಗ ★

By M. R. Bhat.

ತಾರೀಕು	ವಾರ	ತಿಥಿ		ನಿತ್ಯ ನಕ್ಷತ್ರ	ಯೋಗ	ಕರಣ	ವಿಷ	ಅಮೃತ	ಸೂರ್ಯಸ್ಥಿತ ಮಹಾನಕ್ಷತ್ರ
		ಸೌರ	ಚಾಂದ್ರ						
31	ಸೋಮ	೧೭	ಚತುರ್ದಶಿ ೧೭	ಕೃತ್ತಿಕಾ ೪೦|||	ಅತಿಗಂಡ ೧೬|	ಶಕುನಿ ೧೭	೧೪	೩೫|	ರೋಹಿಣೀ
1	ಕುಜ	೧೮	ಅಮಾವಾಸ್ಯೆ ೮|||	ರೋಹಿಣೀ ೩೪|||	ಸುಕರ್ಮಾ ೬|| ಧೃತಿ ೫೭|||	ನಾಗ ೮|||	೧೬|| ೪೭||	೨೭||	”
2	ಬುಧ	೧೯	ಪಾಡ್ಯ ೧| ಬಿದಿಗೆ ೫೪|||	ಮೃಗಶಿರಾ ೩೦	ಶೂಲ ೫೦	ಬವ ೧|	೪೦|	೯|||	”
3	ಗುರು	೨೦	ತದಿಗೆ ೫೦|	ಆದ್ರ್ರಾ ೨೬|	ಗಂಡ ೪೩|	ತೈತಿಲ ೨೨||	೫೫|	೨|||	”
4	ಶುಕ್ರ	೨೧	ಚೌತಿ ೪೭|	ಪುನರ್ವಸು ೨೪||	ವೃದ್ಧಿ ೩೮|	ವಣಿಜ ೧೯|	೪೪|	೧೮||	”
5	ಶನಿ	೨೨	ಪಂಚಮಿ ೪೬|	ಪುಷ್ಯಾ ೨೪||	ಧ್ರುವ ೩೪||	ಬವ ೧೬|||	೫೭|| ಶೇ೧|||	೮|	”
6	ರವಿ	೨೩	ಷಷ್ಠಿ ೪೭|	ಆಶ್ಲೇಷಾ ೨೬||	ವ್ಯಾಘಾತ ೩೨||	ಕೌಲವ ೧೬|||	೫೨	೨೩||	,,

ವಾರದ ವಿಶೇಷ:— ತಾ. ೧—೬—೫೪ ಕುಜವಾರ ಅಮಾವಾಸ್ಯೆ; ಅಡಿಕೆ:-ಬೆಲೆಯು ಕಡಿಮೆಯಾಗದು; ಕಾಳು ಮೆಣಸು:-ಸ್ವಲ್ಪ ಇಳಿಯುವ ಸಂಭವ; ಏಲಕ್ಕಿ:-ಸಬಲ ಹಾಗೂ ಶಕ್ತಿಯುತ; ಗೇರುಬೀಜ:-ಬೆಲೆಯು ಸ್ವಲ್ಪ ಕಡಿಮೆಯಾಗುವುದು; ಬೆಲ್ಲ:-ಸ್ಥಿರವಾಗಿರುವುದು; ಅಕ್ಕಿ:-ಬಲಯುಕ್ತ; ಕಾಡುತ್ಪತ್ತಿ:-ಸ್ವಲ್ಪ ಮಟ್ಟಿಗೆ ಊರ್ಧ್ವಮುಖಿ; ರಾಜಕೀಯ ವಾತಾವರಣವು ಟೀಕೆಗೆ ಅವಕಾಶ ನೀಡಬಹುದು.

ಶ್ರೀ ಎಮ್. ಸುಬ್ರಾಯನ್,
ಸಾಹಿತ್ಯ ಮತ್ತು ಜ್ಯೋತಿಷ್ಯ ಶಿರೋಮಣಿ.
ತಾರೀಕು ೩೦—೫—೧೯೫೪ರಿಂದ
೫—೬—೧೯೫೪ರ ವರೆಗೆ.

ಮೇಷ: ನಿಮ್ಮ ಇಷ್ಟದಂತೆ ಎಲ್ಲಾ ಕೆಲಸಗಳೂ ಸುಗಮವಾಗಿ ಕೊನೆಗೊಳ್ಳಲಿರುವವು. ಆರ್ಥಿಕದ ಅಭಿವೃದ್ಧಿಯನ್ನು ಹೊಂದಲಿರುವಿರಿ. ಮಾನಸಿಕ ಶಾಂತಿಯು ಕಡಮೆ. ಹಿರಿಯರ ಆರೋಗ್ಯದ ನೆಲೆಯು ಚೆನ್ನಾಗಿರುವುದಿಲ್ಲ. ಮಹಾಜನರ ಭೇಟಿಯನ್ನು ಹೊಂದಲಿರುವಿರಿ. ಕುಟುಂಬದಲ್ಲಿ ಶುಭಕೆಲಸಗಳು ನಡೆಯಲಿರುತ್ತವೆ ವಾಗ್ವಾದಗಳು ಸಂಭವಿಸದಂತೆ ಜಾಗರೂಕರಾಗಿರಬೇಕು. ವಾಸಸ್ಥಾನದ ಬದಲಾವಣೆಯನ್ನು ಮಾಡಲಿರುವಿರಿ.

ವೃಷಭ: ನಿರಂತರ ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮ ಕಡಮೆಯಾಗಿರುವುದು. ಆರ್ಥಿಕ ವ್ಯವಹಾರಗಳು ಹೆಚ್ಚಲಿರುತ್ತವೆ. ಮಕ್ಕಳ ಆರೋಗ್ಯದ ನೆಲೆಯು ಚೆನ್ನಾಗಿರುವುದಿಲ್ಲ. ಧಾರ್ಮಿಕ ವಿಷಯಗಳಿಗಾಗಿ ಧನವ್ಯಯವು ಉಂಟಾಗಲಿರುವುದು. ವ್ಯಾಪಾರಿಗಳು ಪ್ರಗತಿಯನ್ನು ಹೊಂದಲಿರುತ್ತಾರೆ. ವೈದ್ಯಕೀಯ ವೃತ್ತಿಯವರು ಪ್ರಗತಿಯಿಂದ ಕೂಡಿದವರಾಗಲಿರುವರು. ಪ್ರಯಾಣವಿದೆ.

ಮಿಥುನ: ಮಾನಸಿಕ ಶಾಂತಿಯು ಕಡಮೆ. ಆರೋಗ್ಯದ ನೆಲೆಯು ಚೆನ್ನಾಗಿರುವುದಿಲ್ಲ. ಬಂಧು ಜನರ ಭೇಟಿಯುಂಟಾಗ[illegible]ರುತ್ತದೆ. ಮಿತ್ರರ ಸಹಾಯವನ್ನು ಹೊಂದಲಿರುವಿರಿ. ಪುಣ್ಯ ಕೆಲಸಗಳಲ್ಲಿ ಸಹಭಾಗಿಗಳಾಗಲಿರುವಿರಿ. ನೌಕರರು ಸ್ಥಾನಾಂತರಕ್ಕಾಗಿ ಯತ್ನಯುಕ್ತರಾಗಲಿರುವರು. ವ್ಯಾಪಾರಿಗಳು ಧನಾಭಿವೃದ್ಧಿಯನ್ನು ಹೊಂದಲಿರುವ ಮಾರ್ಗವನ್ನು ಅವಲಂಬಿಸಿದವರಾಗುತ್ತಾರೆ. ಪ್ರಯಾಣವಿದೆ.

ಕರ್ಕಾಟಕ: ನಿಮ್ಮವರೇ ನಿಮಗೆ ವಿರೋಧಿಗಳಾಗಲಿರುವರು. ಹಲವಾರು ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮವು ಕಡಮೆ. ದಾಂಪತ್ಯ ಜೀವನದಲ್ಲಿ ತೊಡಕುಗಳು ತೋರಿಬರಲಿವೆ. ಕುಟುಂಬೀಯರ ಅಗಲಿಕೆಯನ್ನು ಹೊಂದಲಿರುವಿರಿ. ವಾಸಸ್ಥಾನದ ಬದಲಾವಣೆಯನ್ನು ಮಾಡಲಿರುವ ವಿಚಾರವು ಪುಷ್ಯಾ ನಕ್ಷತ್ರದವರಿಗೆ ಉಂಟಾಗಲಿರುವುದು. ವ್ಯಾಪಾರಿಗಳಿಗೆ ವಾರಾಂತ್ಯ ಪ್ರಗತಿಕರ.

ಸಿಂಹ: ಸಾಮುದಾಯಿಕ ಕೆಲಸಗಳಿಂದ ಕೂಡಿದವರಾಗಿದ್ದು ಶಾಂತಿಯಿಂದ ಕೂಡಿರುವುದಿಲ್ಲ. ಪ್ರತಿಷ್ಠೆಯನ್ನು ಸಮಾಜದಲ್ಲಿ ಹೊಂದಲಿರುವಿರಿ. ಪುಣ್ಯ ಕರ್ಮಾಸಕ್ತಿಯು ಕಂಡುಬರಲಿರುವುದು. ಹೊಸ ಕೆಲಸಗಳಿಗೆ ಕೈಯನ್ನು ನೀಡಿದವರಾಗುವಿರಿ. ಪತ್ರವ್ಯವಹಾರಗಳು ಅಧಿಕ, ಪತನಭಯವು ಸಂಭವಿಸದಂತೆ ಜಾಗರೂಕರಾಗಿರಬೇಕು. ಉತ್ತರಾ ನಕ್ಷತ್ರದವರು ಅಭಿವೃದ್ಧಿಯಿಂದ ಕೂಡಿದವರಾಗುವರು. ಪ್ರಯಾಣವಿದೆ.

ಕನ್ಯಾ: ಎಲ್ಲಾ ಕೆಲಸಗಳೂ ಅರ್ಧಮಾರ್ಗಗಳಾಗಿ ಕಂಡುಬರುವವು. ಸಂಪತ್ತಿನ ವ್ಯವಹಾರಗಳು ಅಧಿಕ. ಉದ್ಯೋಗ ಜೀವನದಲ್ಲಿ ಪ್ರಗತಿಯನ್ನು ಹೊಂದುವಿರಿ. ಕರ್ಮದ ಗುರುವು ಯಶಸ್ಸನ್ನು ಅಧಿಕರಿಸಲಿರುವನು. ವಿದ್ಯಾಜೀವನದವರು ಪ್ರಗತಿಯಿಂದ ಕೂಡಿದವರಾಗಲಿರುವರು. ವ್ಯಾಪಾರಿಗಳಿಗೆ ಪ್ರಗತಿಯೇ ಉಂಟಾಗುವುದು.

ತುಲಾ: ಜೀವನದಲ್ಲಿ ನವೀನತೆಗಿರುವ ಸಂಘಟನೆಗಳಿರುತ್ತವೆ. ಉದರ ಸಂಬಂಧವಾದ ದೋಷಗಳುಂಟಾಗದಂತೆ ಜಾಗರೂಕರಾಗಿರಬೇಕು. ಆರೋಗ್ಯ[illegible] ಬದಲಾವಣೆಯನ್ನು ಮಾಡಲಿರುವ ಸಂಘಟನೆಗಳಿರುತ್ತವೆ. ಪ್ರಯಾಣಗತರು ನಿವೃತ್ತರಾಗಲಿರುವರು. ಪತನಭಯವು ಸಂಭವಿಸದಂತೆ ಜಾಗರೂಕರಾಗಿರಿ.

ವೃಶ್ಚಿಕ: ಮಿತ್ರರ ಭೇಟಿಯು ಸಂಭವಿಸಲಿದೆ. ಆರೋಗ್ಯದಿಂದ ಅಭಿವೃದ್ಧಿಯುಂಟಾಗಲಿರುತ್ತದೆ. ಆತ್ಮೀಯರಿಂದ ಸಹಾಯವನ್ನು ಹೊಂದಲಿರುವಿರಿ. ವಾಗ್ವಾದಗಳು ಸಂಭವಿಸದಂತೆ ಜಾಗರೂಕರಾಗಿರಬೇಕು. ವಿಶಾಖಾ ನಕ್ಷತ್ರದವರು ಅಭಿವೃದ್ಧಿಯಿಂದ ಕೂಡಿದವರಾಗುತ್ತಾರೆ. ಕನ್ನಿಕೆಯರಿಗೆ ವರಾವಲೋಕನೆಯಾಗಲಿರುವುದು.

ಧನು: ಎಲ್ಲಾ ಕೆಲಸಗಳೂ ಸಾವಕಾಶವಾಗಿ ಕೊನೆಗೊಳ್ಳಲಿರುವವು. ಬಂಧುಜನರಿಂದ ವಿರೋಧಕ್ಕಿರುವ ಘಟನೆಗಳು ಕಂಡುಬರುವವು. ಮಿತ್ರರ ಭೇಟಿಯನ್ನು ಹೊಂದಲಿರುವಿರಿ. ಪತ್ರವ್ಯವಹಾರವನ್ನು ಬಹಳವಾಗಿ ನಡೆಸಲಿರುವಿರಿ. ಪುಣ್ಯ ಕರ್ಮಾಸಕ್ತಿಯು ಮೂಲಾ ನಕ್ಷತ್ರದವರಿಗೆ ಉಂಟಾಗಲಿರುತ್ತದೆ. ನೌಕರರಿಗೆ ಪ್ರಗತಿಕರ. ಪ್ರಯಾಣವನ್ನು ಮಾಡಲಿರುವಿರಿ.

ಮಕರ: ಹೊಸ ಎಣಿಕೆಯಿಂದ ಕೂಡಿದವರಾಗಿ ಕಂಡುಬರುವಿರಿ. ಮಿತ್ರರ ಅಗಲುವಿಕೆಯು ಸಂಭವಿಸಲಿದೆ. ಪತ್ರವ್ಯವಹಾರಗಳನ್ನು ಬಹಳವಾಗಿ ನಡೆಸಲಿರುವಿರಿ. ವ್ಯಾಪಾರಿಗಳಿಗೆ ವಾರಾಂತ್ಯವು ಪ್ರಗತಿದಾಯಕ. ಕನ್ನಿಕೆಯರಿಗೆ ದಾಂಪತ್ಯಜೀವನಕ್ಕಿರುವ ಸಂಘಟನೆಯಾಗಲಿದೆ.

ಕುಂಭ: ಕೆಲಸಗಳೆಲ್ಲಾ ಅರ್ಧಮಾರ್ಗಗಳಾಗಿರುತ್ತವೆ. ಮಾನಸಿಕ ಶಾಂತಿಯು ಕಡಮೆ. ಆತ್ಮೀಯರಿಂದ ಸುಖಲಾಭವನ್ನು ಹೊಂದಲಿರುವ ಸಂಘಟನೆಗಳು ಕಂಡುಬರುತ್ತವೆ. ವಿದ್ಯಾಜೀವನದವರು ಪ್ರಗತಿಯಿಂದ ಕೂಡಿದವರಾಗುತ್ತಾರೆ. ನೌಕರರಿಗೆ ಪ್ರಗತಿಯುಂಟಾಗಲಿರುತ್ತದೆ. ಪ್ರಯಾಣವಿರುತ್ತದೆ.

ಮೀನ: ಹೊಸ ಕೆಲಸಗಳಿಗೆ ಕೈಯನ್ನು ನೀಡಿದವರಾಗುವಿರಿ. ಬಂಧು ಜನರ ವಿಯೋಗವು ಸಂಭವಿಸಲಿರುತ್ತದೆ. ನಾಲ್ಕನೆ ಮನೆಯ ಗುರುವು ಗೃಹಸುಖ ವಿಷಯದಲ್ಲಿ ಚೆನ್ನಾಗಿರುವುದಿಲ್ಲ. ಕಿರುಕುಳಗಳು ಕಂಡುಬರುವವು. ವಾಗ್ವಾದಗಳಾಗದಂತೆ ಜಾಗರೂಕರಾಗಿರಬೇಕು. ಪ್ರಯಾಣವಿರುವುದು.

——

ಲೇಖಾಂಕ ೫೦೮.

ವಿವಾಹ ಸುಖ ವಿಚಾರ

(ಎಮ್. ಸುಬ್ರಾಯನ್)

ವಾತ ಪಿತ್ತ ಕಫದಿಂದ ಮಾನವನ ಗುಣಸ್ವಭಾವಗಳನ್ನು ನಿರ್ಣಯಿಸುವರು. ಈ ತ್ರಿದೋಷಗಳಿಂದ ಮಾನವನ ದೇಹ ಕೂಡಿದ್ದು ಗ್ರಹರಿಗೆ ತ್ರಿದೋಷ ವಿಭಾಗವನ್ನು ಈ ಮೊದಲೇ ತಿಳಿಸಲಾಗಿರುವುದು. ಗ್ರಹರ ಸ್ಥಿತಿ ಬಲಗಳನ್ನು ತ್ರಿದೋಷಗಳಿಂದಲೇ ನಿರ್ಣಯಿಸಬಹುದಾಗಿದೆ.

ಪಿತ್ತ ಪ್ರಕೃತಿಯ ಮನುಷ್ಯನು ಸಿಟ್ಟುಗಾರನಾಗಿರುವನು. ಆತನ ತಲೆಕೂದಲುಗಳು ಬೇಗನೆ ಹಣ್ಣಾಗುತ್ತವೆ. ಬಿಳೀ ತಲೆಕೂದಲುಗಳುಳ್ಳವನಾಗಿರುತ್ತಾನೆ. ಬುದ್ಧಿಶಕ್ತಿಯು ಚೆನ್ನಾಗಿ ಕಾಣಬರುತ್ತಿರುವುದು. ದೇಹವು ತುಂಬಾ ಬೆವರಿನಿಂದ ಕೂಡಿದ್ದಾಗಿರುತ್ತದೆ. ಸ್ವಪ್ನಗಳು ಬಹಳವಾಗಿದ್ದು ನಕ್ಷತ್ರ ಗ್ರಹವಗೈರೆಗಳನ್ನು ಕಾಣುವನು. ಜನನ ಕಾಲದಲ್ಲಿ ರವಿಕುಜರಲ್ಲೊಬ್ಬನು ಒಂದು, ನಾಲ್ಕು, ಏಳು, ಎಂಟು ಹನ್ನೆರಡು ಈ ರಾಶಿಗಳಲ್ಲಿರುವದಾದರೆ ಪಿತ್ತಜನ್ಯ ವಿಕಾರಗಳು ಪದೇ ಪದೇ ಕಾಣಬರುತ್ತವೆ.

ಕಫ ಪ್ರಕೃತಿಯವನು ಗಂಭೀರವಾದ ಬುದ್ಧಿ ಶಕ್ತಿಯುಳ್ಳವನಾಗಿರುವನು. ದೇಹವು ಸ್ಥೂಲವಾಗಿ ಕಂಡುಬರುತ್ತದೆ. ತಲೆಕೂದಲು ತುಂಬಾ ಇರುತ್ತದೆ. ಮಹಾ ಬಲಶಾಲಿಯಾಗಿರುವನು. ಜಲಾಶಯಗಳನ್ನು ಸ್ವಪ್ನದಲ್ಲಿ ಕಾಣುತ್ತಿರುವನು. ಶುಕ್ರ ಚಂದ್ರರ ಆರು, ಎಂಟು, ಹನ್ನೆರಡರಲ್ಲಿದ್ದರೆ ಕಫಜನ್ಯ ವಿಕಾರಗಳು ಕಾಣಬರುವವು. ಶ್ಲೇಷ್ಮ ಪ್ರಕೃತಿಯ ಮನುಷ್ಯನು ಸದಾ ಜಾಗರೂಕನಾಗಿರುವನು. ಜೀವನವು ಬಹಳ ಗೌರವದಿಂದ ಕೂಡಿರುವುದರೊಂದಿಗೆ ಅನ್ಯರ ಸಹಾಯಕ್ಕಿರುವ ಭಾವನೆ[illegible]

ವಾತ ಪ್ರಕೃತಿಯ ಮನುಷ್ಯನಿಗೆ ತುಂಬಾ ತಲೆಕೂದಲಿರದೆ ಕಂಡುಬರುತ್ತದೆ. ಕೃಶಶರೀರನಾಗಿರುವನು. ಕೃಷಿಯ ಕುರಿತು ಉತ್ಸಾಹಗಳಿರುತ್ತವೆ. ವಾಚಾಲನಾಗಿದ್ದು ಕಾಣಬರುವನು. ವಾಚಾಲನಾಗಿದ್ದರೂ ಬೇರೆಯವರನ್ನು ಕಡಿಸಲಾರನು. ಚಂಚಲವಾದ ಮನಸ್ಸಾಗಿರುವನು. ಆಕಾಶಚಾರಿಯಾಗಿ ಸ್ವಪ್ನಕಾಲ ಕಾಣಬರುತ್ತಿರುವನು. ತುಂಬಾ ಗೆಳೆಯರಿದ್ದು ಅವರಿಂದ ಸುಖಶಾಂತಿಯನ್ನು ಪಡೆಯಲಾಗುವುದಿಲ್ಲ. ತುಂಬಾ ತಿರುಗಾಟಕ್ಕಿರುವ ಸಂಘಟನೆಯುಳ್ಳವನಾಗಿರುತ್ತಾನೆ. ಗಂಭೀರ ವಿಚಾರಗಳಿಂದಲೇ ಕೂಡಿ ಬಾಳುವನು. ಪ್ರಯಾಣಗಳು ಬಹಳ. (ಸಶೇಷ)

——

ಸೇವನೆಯ ಆನಂದಕ್ಕೆ
ಅತ್ಯುತ್ತಮವಾದುದನ್ನೇ ಪಡಕೊಳ್ಳಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಮತ್ತು
ಬೊಂಬ್ಯಾ ಎಲೆ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ.
S.R. Beedi Works. UDIPI, S.K.

Stockists:
1. V. N. Shenoy,
Bombay 12.
2. N. R. Kamath,
General Merchant,
Dahanu Road (W.Rly.)

ಬೇಂಕ್ ಒಫ್ ಮಂಗಳೂರು, ಲಿಮಿಟೆಡ್.

ಟೆಲಿಫೋನು ನಂಬ್ರ 158. ಹೆಡ್ ಆಫೀಸು: ರಥಬೀದಿ, ಮಂಗಳೂರು.

1. ಚತುರತೆಯು ವ್ಯಾಪಾರವು ಚಂದವಾಗಿರಿಸುವ — ಚಾಲ್ತೀ ಖಾತೆ.
2. ದಿನ ಉಳಿತದ ಧನ ಸೇರಿಸಿಡುವ — ಸೇವಿಂಗ್ಸ್ ಖಾತೆ.
3. ಮಕ್ಕಳ ವಿವಾಹದಲ್ಲಿ, ಥಕ್ಕನೆ ಒದಗುವ ಕಷ್ಟದಲ್ಲಿ ಇಷ್ಟನೀಡುವ — ರಿಕರಿಂಗ್ ಖಾತೆ.
4. ಅಲ್ಪ ಉಳಿತಾಯದಲ್ಲಿ ಸ್ವಲ್ಪ ಉಳಿಸಿ ಖುಶಿಪಡಿಸುವ — ಕ್ಯುಮುಲೇಟಿವ್ ಖಾತೆ.
5. ಜನರ ಆದರದ ಜಯಾಕೇಶ್ ಸರ್ಟಿಫಿಕೇಟ್ ಇವು ನಮ್ಮಲ್ಲಿವೆ.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿನಲ್ಲಾಗಲಿ ಬ್ರಾಂಚುಗಳಲ್ಲಾಗಲೀ ವಿಚಾರಿಸಿರಿ.

---

32 ವರ್ಷಗಳಿಗೆ
ಇದೊಂದು ಉನ್ನತವಾದ
ಪೆಟ್ರೋಲ್ ಅಭಿವೃದ್ಧಿ

ಬರ್ಮಾ ಷೆಲ್

ಐ. ಸಿ. ಎ. ಮಿಶ್ರಣ ಪೆಟ್ರೋಲ್

ತುಂಬಿಸಿ
ತಾರತಮ್ಯ
ತಿಳಿಯಿರಿ.

ಎಮ್. ಎ. ಕೃಷ್ಣ ನಾಯಕ್ ಎಂಡ್ ಸನ್ಸ್,
ಬರ್ಮಾ ಷೆಲ್ ಡೀಲರ್ಸ್,
ಅಜಿಜುದ್ದೀನ್ ರಸ್ತೆ, ಮಂಗಳೂರು.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಮುಂಬಯಿ.

೧೯೫೧ ವರ್ಷದ ಮೌಲ್ಯ ನಿರ್ಣಯದಲ್ಲಿ ಉದಾರ ಬೋನಸ್ ಸಾರಲಾಗಿದೆ.

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10 ರಂತೆ ರೂ. 1000 ಕ್ಕೆ ವರ್ಷಕ್ಕೆ
ಜೀವಾವಧಿ ಪೊಲಿಸಿಗಳ ಮೇಲೆ 12½ ರಂತೆ " "

[ಇಂದಿನ ಪ್ರಿಮಿಯಮ್ ಸ್ಕೇಲ್ ಅನುಸಾರ]

ವಿಮೆ ಇಳಿಸಲು ಅಥವಾ ಪ್ರತಿನಿಧಿಸಲು, ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ಚೀಫ್ ಏಜಂಟ್ಸ್: ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ರಥಬೀದಿ, ಮಂಗಳೂರು, ದ. ಕ.

ಅಥವಾ ಇತರ ಆಫೀಸುಗಳು: ಮಧುರಾ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಮುಂಬಯಿ, ಉಡುಪಿ ಮತ್ತು ಕೊಯಮುತ್ತೂರು.

Nilgiri Brand Cement

IS THE BEST

ALWAYS HELD IN STOCK BY

South Kanara Cement Supply Agency

— Stockists at —

Kasaragod — Puttur — Karkala & Udipi.

P. N. S. Kamath & Co., Bunder, Mangalore.
M. Krishna R. Nayak & Sons, Bunder, Mangalore.
Mijar Devadas Annappa Pai, Bunder, Mangalore.
M. A. Krishna Nayak & Sons, Bunder, Mangalore.

The Canara Mutual Assurance Co., Ltd.

Managing Director: **T. R. A. Pai**
Head Office: **UDIPI**, S. INDIA.] [ESTD. 1935

— ಅತ್ಯುತ್ತಮ ಲಾಭಾಂಶ

ಬಾಧ್ಯಸ್ಥ ಪಾಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ
ರೂ. 18/- ಆಜೀವ ವಿಮೆಗೆ. ರೂ. 15/- ಉಂಬಳಿ ವಿಮೆಗೆ.
31—12—1953 ನೇ ತಾರೀಕಿಗಾದ 1951 ರಿಂದ 1953 ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ದಿ. ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಪ್ರಧಾನ ಕಾರ್ಯಾಲಯ: **ಉಡುಪಿ**, ದ. ಭಾರತ] [ಸ್ಥಾಪನೆ: ೧೯೩೫.

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಲಾಭಾಂಶ ಹಂಚಿದ ಕಂಪೆನಿ.

ತಾ. 1-4-54 ರಿಂದ ಹೊಸ ವಿಮಾಕಾರ್ಯಕ್ಕೆ ಪ್ರೀಮಿಯಂದರವನ್ನು ಇಳಿಸಲಾಗಿದೆ.

CHIEF AGENTS
THE COMMERCIAL CORPORATION OF INDIA, LTD.,
UDIPI, S. INDIA.

The Pie-Money Bank, Ltd., Ma

Undertakes all kinds of Banking Business. Current Acc
annum. Savings Bank Deposits at 4% per an

FIXED DEPOSITS

For 2 years	4½ p.c.	For 1 ye
For 6 months	3½ p.c.	For 3 m

Auction Chit Funds ranging from Rs. 100-5000 ru
systematic lines. Unique Banking facilities to B
and interested Public.

Apply for particulars:— **K. R. Guru,**

VALUE AND SER

Have won the Sovereign Tiles and
their unparalleled reputat
Their buyers are their patrons, and that patronage
has been won by long and economic service.

Sovereign Tile Works, Ltd.,
loor, Mangalore.

Sujir Keshav Nayak & Sons, Managing Agents.

Help the Conductors

Please tender exact fares
and
State your destination correctly

Give the conductor a chance to continue to be a dignified and honest worker by insisting on your ticket.

The Combined Booking Agency,
Mangalore—1.

The Joint Booking Office,
Mangalore—3.

Printed at The Prabhat Printers, Ltd. Mangalore and Edited & Published at Prabhat Office, Car Street, Mangalore by K. Shenoy.